ಪ್ರಯತ್ನ ಮಾಡಿದ್ದಾರೆ. ನಾನು ನಮ್ಮ ಪಕ್ಷದಲ್ಲಿರುವ ಸದಸ್ಯರಿಗೆ ದಯಮಾಡಿ ಕೇಳುತ್ತೇನೆ. ನಾವು ಇಂತಹ ವಿಷಯಗಳ ಬಗ್ಗೆ ಪ್ರೋತ್ಸಾಹ ಕೊಟ್ಟರೆ ಸರ್ಕಾರ ಹೇಗೆ ಕೆಲಸ ಮಾಡಬೇಕೆಂಬ ಬಗ್ಗೆ ಕೂಡಾ ಯೋಚನೆ ಮಾಡಬೇಕಾಗುತ್ತದೆ. ನನ್ನ ಅಂದಾಜಿನ ಪ್ರಕಾರ ೧೪ ಸಾವಿರ ಜನರು ಈ ವ್ಯವಸ್ಥೆಯಲ್ಲಿದ್ದಾರೆ. ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾರು ಯಾರು ತಮಗೆ ಬೇಕೋ ಅಂತಹವರನ್ನು ಅವರವರೇ ಅಪಾಯಿಂಟ್ ಮಾಡಿಕೊಂಡಿದ್ದಾರೆ. ಅವರು ನೇಮಕಾತಿ ನಿಯಮವನ್ನೇನೂ ಅನುಸರಿಸಿಲ್ಲ. ರೆಕ್ರೂಟ್‌ಮೆಂಟ್ ಏನೂ ಅಲ್ಲಿ ಆಗಬೇಕೆಂದೇನಿಲ್ಲ. ಅವರಿಗೆಸರಿಕಾಣು ವವರನ್ನು ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ಹಾಗೆಯೇ ಬಡವರನ್ನು ನೇಮಕ ಮಾಡಿ ಕೊಳ್ಳಿ ಎಂದು ಹೇಳಿದ್ದೇವೆ. ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಅವರು ನಿಯಮಗಳು ಏನು ಇವೆ ಅವುಗಳ ಆಧಾರದ ಮೇಲೆ ನೇಮಕ ಮಾಡಿದ್ದಾರೆ. ಸರ್ಕಾರಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಸರ್ಕಾರಕ್ಕೂ ಸ್ಥಳೀಯ ಸಂಸ್ಥೆಗಳಿಗೂ ಸಂಬಂಧ ಇದೆ ಅಲ್ಲವೇ? ಸಂಬಂಧ ವಿದ್ದರೂ ಸಹ ಇವತ್ತಿನವರೆಗೆ ಯಾವುದೇ ರಿಕ್ರೂಟ್‌ಮೆಂಟ್ ರೂಲ್ಸ್ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಪ್ರಾರಂಭದಲ್ಲಿ ಯಾರನ್ನು ಮಂಡಲ ಪಂಚಾಯಿತಿಯವರು ಯಾವ ಆಧಾರದ ಮೇಲೆ ನೇಮಿಸಿಕೊಂಡಿದ್ದಾರೆಂದರೆ ಯಾವ ನಿಯಮಾವಳಿಗಳೂ ಇಲ್ಲ. ಅವರದೇ ಆದ ನಿಯಮಾವಳಿಗಳ ಪ್ರಕಾರ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೋಸ್ಕರ ನೇಮಿಸಿಕೊಂಡಿದ್ದಾರೆ. ಅವರ ನಿಯಮಾವಳಿ ಪ್ರಕಾರ ಅವರು ಕೆಲಸ ಮಾಡಬೇಕಾಗುತ್ತದೆ. ಸರ್ಕಾರದ ನಿಯಮಾವಳಿಗಳು ಅದಕ್ಕೆ ಅನ್ವಯವಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕ ಬಜೆಟನ್ನು ಅನಿವಾರ್ಯವಾಗಿ ವಿರೋಧಿಸಿ ಕೆಲವು ಅಭಿಪ್ರಾಯಗಳನ್ನು ತಮ್ಮ ಮುಖೇನ ಹೇಳುತ್ತಿದ್ದೇನೆ, ನಿನ್ನೆ ಮಾನ್ಯ ವಿರೋಧಪಕ್ಷದ ನಾಯಕರು ವಿರೋಧ ವ್ಯಕ್ತ ಪಡಿಸುತ್ತಾ ಈ ಸರ್ಕಾರಕ್ಕೆ ಯಾವರೀತಿಯಾಗಿ ಜನರು ಅಧಿಕಾರ ಕೊಟ್ಟಿದ್ದಾರೆ ಅವರು ಏನೊಂದು ಆಸೆಯನ್ನು ಇಟ್ಟಿದ್ದರು ಆ ಜನತೆಗೆ ನಿರಾಶೆ ಮಾಡಿದ್ದಾರೆ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿಗೆ ಹಣ ಕೊಡದೆ ಬಜೆಟನ್ನು ಮಂಡಿಸಿದ್ದಾರೆ. ನೀರಾವರಿ ಇಲಾಖೆ ಇವತ್ತಿನ ದಿವಸ ಪ್ರಾಮುಖ್ಯವಾದ ಇಲಾಖೆ. ಅದೇರೀತಿಯಾಗಿ ಕೃಷಿ ಇಲಾಖೆಗೆ ಕೂಡ ಅಷ್ಟೇ ಪ್ರಾಮುಖ್ಯತೆಯನ್ನು ಸರ್ಕಾರ ಕೊಟ್ಟು ಹೆಚ್ಚಿನ ಹಣಕಾಸನ್ನು ಬಿಡುಗಡೆ ಮಾಡಿದ್ದರೆ ಅನುಕೂಲವಾಗುತ್ತಿತು. ಇವತ್ತು ಸಣ್ಣ ನೀರಾವರಿ ಯೋಜನೆಗೆ ಆಗಲಿ ಅಥವಾ ಏತನೀರಾವರಿ ಮುಖಾಂತರ ನೀರನ್ನು ರೈತರಿಗೆ ಸಪ್ಲೈ ಮಾಡುವುದಾಗಲಿ ಬಾಂದಾರುಗಳನ್ನು ಕಟ್ಟುವುದಾಗಲಿ ಮಾಡಿದ್ದರೆ ರೈತರಿಗೆ ಒಳ್ಳೆಯ ಅನುಕೂಲವಾಗುತ್ತಿತ್ತು. ಅದೇ ರೀತಿ ಕೆಲವು ವಿಚಾರಗಳನ್ನು ಹೇಳುತ್ತಾ ರಾಜ್ಯದಲ್ಲಿ ಇವತ್ತು ಅನೇಕ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳಲ್ಲಿ ಹೆಚ್ಚು ಹಣವನ್ನು ತೊಡಗಿಸಲಾಗಿದೆ ನಮ್ಮ ರಾಜ್ಯದಲ್ಲಿ ನೂರಕ್ಕೆಎಂಭತ್ತು ಭಾಗ ರೈತರು ಇದ್ದಾರೆ. ರೈತರ ಸೇವೆ ಮಾಡುತ್ತಿದ್ದೇವೆಂದು ಇವತ್ತಿನ ದಿವಸ ಬೆನ್ನು ಚಪ್ಪರಿಸಿಕೊಳ್ಳುತ್ತಿದ್ದಾರೆ, ಅನೇಕ ರೈತರ ಹೊಟ್ಟೆಯ ಮೇಲೆ ಹೊಡೆಯತಕ್ಕ ಕಾರ್ಯಕ್ರಮಗಳನ್ನು ಈ ಸರ್ಕಾರದವರು ಹಾಕಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈಗಲೇ ವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆ ಇದೆ. ನೀರಾವರಿ ಬಗ್ಗೆ ಕೂಡ ಹೆಚ್ಚಿನ ಗಮನ ಕೊಡಲಿಲ್ಲ. ಈ ಸರ್ಕಾರದವರು ಇದಕ್ಕೆಲ್ಲಾ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗಳ ಬಗ್ಗೆ ಮಾನ್ಯ ಸಚಿವರು ಕೊಟ್ಟಿರತಕ್ಕ ವರದಿಯನ್ನು ನೋಡಿದರೆ ಅದರಲ್ಲಿ ೭೨೦ ಕೋಟಿ ರೂಪಾಯಿಗಳ ಲಾಸ್ ಆಗಿದೆಯೆಂದು ಹೇಳುತ್ತಿದ್ದಾರೆ. ಇದು ಹೇಗಾಯಿತು? ಇದಕ್ಕೆ ಯಾರು ಕಾರಣ? ಈಗಾಗಲೇ ಎಸ್ಟಿಮೇಟ್ ಕಮಿಟಿಯ ವರದಿಯಲ್ಲಿ ಈ ವಿಚಾರ ಬಂದಿದೆ. ಪ್ಲಾನಿಂಗ್ ಕಮಿಟಿ ವರದಿಯಲ್ಲಿ ಬಂದಿದೆ, ಇದರ ಬಗ್ಗೆ ಸರ್ಕಾರ ಯೋಗ್ಯ ನಿರ್ಣಯ ತೆಗೆದು ಕೊಳ್ಳಬೇಕು. ಈಗಾಗಲೇ ನಿರುದ್ಯೋಗಿ ಪಧವೀಧರರು ಜಾಸ್ತಿ ಇದ್ದಾರೆ. ಸರ್ಕಾರದವರು ರೋಜ್‌ಗಾರ್ ಯೋಜನೆಯಲ್ಲಿ ಕೆಲಸ ಕೊಟ್ಟಿದೇವೆಂದು ಹೇಳಿ ದ್ದಾರೆ. ಸ್ಕಿಲ್ಡ್ ಲೇಬರರ್ಸ್ ಕೆಲಸ ಕೊಡುತ್ತಿದ್ದಾರೆ. ಅದರ ಬದಲು ಅವರು ಮಾಡತಕ್ಕಕೆಲಸವನ್ನು ಕೊಟ್ಟು ಗ್ರಾಮೀಣಾಭಿವೃದ್ಧಿಯ ಬಗ್ಗೆ ಹೆಚ್ಚಿನ ಗಮನಹರಿಸಬೇಕು. ನಿರುದ್ಯೋಗಿ ಪದವೀಧರರಿಗೆ ಕೈಗಾರಿಕೆಗಳಲ್ಲಿ ಆಗಲಿ ಅಥವಾ ಬೇರೆ ಯಾವುದೇ ರೀತಿಯ ಅಗ್ರಿಕಲ್ಚರಲ್ ಇಂಡಸ್ಟ್ರಿಗಳನ್ನು ಪ್ರಾರಂಭ

ಮಾಡಿ ಉದ್ಯೋಗವನ್ನು ಒದಗಿಸಬೇಕು. ರೂರಲ್ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಿ ಉದ್ಯೋಗಾವಕಾಶಗಳನ್ನು ಕಲ್ಪಿಸಿದರೆ ಒಳ್ಳೆಯದೆಂದು ಹೇಳುತ್ತಿದ್ದೇನೆ. ಸರ್ಕಾರ ಗ್ರಾಮೀಣ ಪ್ರದೇಶಗಳಿಗೆ ಕಾರ್ಯಕ್ರಮಗಳನ್ನು ಅನೇಕ ರೀತಿಯಲ್ಲಿ ಕಡಿಮೆ ಮಾಡಿದೆಯೆಂದು ಹೇಳುತ್ತಿದ್ದೇನೆ. ಗೃಹ ನಿರ್ಮಾಣದ ಬಗ್ಗೆ ಸರ್ಕಾರದವರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಕಡುಬಡವರಿಗೆ ರೈತರಿಗೆ ಕೂಲಿಕಾರರಿಗೆ ಹೌಸಿಂಗ್ ವ್ಯವಸ್ಥೆಯಲ್ಲಿ ಮನೆಗಳನ್ನು ಕಟ್ಟಿಸಿ ಕೊಟ್ಟರೆ ಅವರುಗಳಿಗೆ ಒಳ್ಳೆಯ ಅನುಕೂಲವಾಗುತ್ತದೆಂದು ತಮ್ಮ ಮುಖೇನ ತಿಳಿಸುತ್ತಿದ್ದೇನೆ.

ಸರ್ಕಾರದವರು ಈಗ ಹೊಸದಾಗಿ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಎಂದು ಹೇಳುತ್ತಿದ್ದಾರೆ. ಇದು ಹೊಸದೇನೂ ಅಲ್ಲ. ಹಿಂದೆ ಕೂಡ ಇದು ಇತ್ತು. ಬಳ್ಳಾರಿ ಜಿಲ್ಲೆಯನ್ನು ಇದಕ್ಕೆ ಸೇರಿಸಿಲ್ಲ. ಬಳ್ಳಾರಿ ಜಿಲ್ಲೆಯನ್ನು ಸಹ ಸೇರಿಸಿ ಇದಕ್ಕೆ ಹೆಚ್ಚಿನ ಒಂದು ಹಣಕಾಸನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದೇರೀತಿ ಕೆಲವೊಂದು ಲಿಫ್ಟ್ ಇರಿಗೇಶನ್ ಬಗ್ಗೆ ಹೇಳಿದ್ದಾರೆ. ರೈತರು ಮತ್ತು ಸಹಕಾರ ಸಂಘದ ಮೂಲಕ ಯಾವುದಾದರೂ ಇರಿಗೇಶನ್ ಮಾಡಿದರೆ ಎಲೆಕ್ಟ್ರಿಸಿಟಿ ಸಪ್ಲೈ ಮಾಡುವಸಾಧ್ಯತೆ ಸರ್ಕಾರಕ್ಕೆ ಇಲ್ಲ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಗೋವಾದ ಮಹಾದಾಯಿ ನದಿಯ ನೀರು ವ್ಯರ್ಥವಾಗಿ ಸಮುದ್ರಕ್ಕೆ ಏನು ಹೋಗುತ್ತಿದೆ, ಅದನ್ನು ನಮ್ಮ ಮಲಪ್ರಭಾಕ್ಕೆ ತೆಗೆದುಕೊಂಡರೆ ನಮ್ಮ ರೈತರಿಗೆ ಹೆಚ್ಚಿನ ಸಹಾಯವಾಗುತ್ತದೆಂದು ಹೇಳಿದರು. ತ್ವರಿತಗತಿಯಲ್ಲಿ ಇದನ್ನು ಸರ್ಕಾರದವರು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ ಇವತ್ತು ಸರ್ಕಾರ ಏನು ಬಜೆಟನ್ನು ಮಂಡಿಸಿದೆ ಅದಕ್ಕೆ ನನ್ನ ವಿರೋಧವನ್ನು ವ್ಯಕ್ತಪಡಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಅದರ ಜೊತೆಗೆ ಮಾತನಾಡಲು ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ಕೂಡ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜರಾಯರೆಡ್ಡಿ.—ಮಾನ್ಯ ಅಧ್ಯಕ್ಷರೇ, ತಾವು ಅರ್ಧ ಗಂಟೆ ಸದನವನ್ನು ಮುಂದೆ ಹಾಕುವುದು ಒಳ್ಳೆಯದು. ಹೆಚ್ಚು ಜನ ಸದಸ್ಯರು ಇಲ್ಲಿ ಇಲ್ಲ. ಎಲ್ಲಾ ಹಿರಿಯ ಸದಸ್ಯರು ಊಟಕ್ಕೆ ಹೋಗಿದ್ದಾರೆ. ಅರ್ಧಗಂಟೆ ಸಭೆಯನ್ನು ಮುಂದೂಡಿ. ಮತ್ತೆ ಸಭೆ ಸೇರೋಣ

(ಗೊಂದಲ)

ಶ್ರೀ ಕೆ. ಎಚ್. ರಂಗನಾಥ್.—ಹೆಚ್ಚಿನ ಸದಸ್ಯರು ಊಟಕ್ಕೆ ಹೋದಹಾಗೆ ಕಾಣುತ್ತದೆ. ಯಾವಾಗ ಅವರ ಹೆಸರುಗಳು ಬರುತ್ತವೆ ಎಂದು ಅವರಿಗೆ ಗೊತ್ತಿರಲಿಕ್ಕಿಲ್ಲ. ಆದ್ದರಿಂದ ಒಂದು ಗಂಟೆ ಸಭೆಯನ್ನು ಮುಂದಕ್ಕೆ ಹಾಕಿ. ಬೇಕಾದರೆ ಒಂದು ಗಂಟೆ ಹೆಚ್ಚು ಕುಳಿತುಕೊಳ್ಳೋಣ. ೬ ಗಂಟೆವರೆಗೆ ಕುಳಿತುಕೊಳ್ಳೋಣ.

ಚೇರ್‌ಮನ್.—ಈಗ ಸದನವನ್ನು ಒಂದು ಗಂಟೆ ಕಾಲ ಮುಂದಕ್ಕೆ ಹಾಕಲಾಗಿದೆ.

(೧ ಗಂಟೆ ೫೫ ನಿಮಿಷಕ್ಕೆ ಸಭೆ ಮುಂದೂಡಲ್ಪಟ್ಟಿತು)

ಸದನವು ಪುನ: ೩-೧೬ಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನಲಂಕರಿಸಿದ್ದರು

† ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ).—ಮಾನ್ಯ ಅಧ್ಯಕ್ಷರೆ, ೧೯೮೦-೮೧ನೇ ಸಾಲಿನ ಆಯವ್ಯಯ ಪತ್ರವನ್ನು ಮಾನ್ಯ ಹಣಕಾಸಿನ ಸಚಿವರು ಏನು ಮಂಡಿಸಿದ್ದಾರೆ. ಇದನ್ನು ನಾನು ಸಮರ್ಥಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ನಾನು ಇದು ಕೂಡಿ ೬ ಬಡ್ಜೆಟ್‌ಗಳನ್ನು ನೋಡಿದ್ದೇನೆ. ಆದರೆ ೬ನೇ ಆಯವ್ಯಯ ಪತ್ರದ ಧ್ವನಿ, ರೂಪ, ರುಚಿಯೇ ಬೇರೆ. ಈ ಮೊದಲ ೫ ಆಯವ್ಯಯಗಳ ವಿಚಾರದಲ್ಲಿ ಅದರ ಸ್ವರೂಪವೇ ಬೇರೆ. ಈ ಆಯವ್ಯಯ ಪತ್ರವನ್ನು ತಯಾರು ಮಾಡುವಾಗ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ತುಂಬಾ ಪರಿಶ್ರಮವಾಗಿರಬೇಕು. ತುಂಬಾ ಪರಿಶ್ರಮದಿಂದ ಇದನ್ನು ತಯಾರಿಸಿದ್ದಾರೆಂದು ಈ ಭಾಷಣವನ್ನು ನೋಡಿದಾಗ ಗೊತ್ತಾಗುತ್ತದೆ. ೪೦ ಪುಟಗಳ ಭಾಷಣ, ನಂತರ ೭೧ ಪುಟಗಳವರೆಗೆ ಇರತಕ್ಕ ವಿವರಣೆಗಳು ಇದನ್ನೆಲ್ಲ ಸರಿಯಾಗಿ ನೋಡಿದರೆ ಒಂದಲ್ಲ ಒಂದು ರೀತಿಯಿಂದ ಪರಿಶ್ರಮದಿಂದ ಆಯವ್ಯಯವನ್ನು ತಯಾರಿಸಿದ್ದಾರೆಂದು ಮನವರಿಕೆಯಾಗುತ್ತದೆ. ಎಂತಹ ಕಾಲದಲ್ಲಿ ಅಂದರೆ ಈ ಹಿಂದೆ ಖಜಾನೆ ಖಾಲಿ ಇದ್ದಾಗ ಆ ಖಜಾನೆಯನ್ನು ಭರ್ತಿ ಮಾಡುವುದು ಬಹಳ ಕಷ್ಟದ ಕೆಲಸ. ಅದೇನು ಅಷ್ಟು ಸುಲಭವಲ್ಲ. ಸಂಪನ್ಮೂಲವನ್ನು ಕೂಡಿಸಬೇಕು, ಹಣವನ್ನು ಕೂಡಿಸಬೇಕೆಂದು ಹೇಳುವುದು

ಸುಲಭ. ಆದರೆ ಹೇಗೆ ಕೊಡಿಸಬೇಕು, ಎಷ್ಟು ಕೊಡಿಸಬೇಕು ಎಂದು ಹೇಳುವಾಗ ಬರುತ್ತದೆ ತೊಂದರೆ ಮತ್ತು ವಿಪತ್ತು. ಇಂಥ ಸನ್ನಿವೇಶದಲ್ಲಿ ಕೂಡ ೫೬.೭೩ ಕೋಟಿ ಕೊರತೆ ಇರತಕ್ಕ ಆಯವ್ಯಯ ಪತ್ರವನ್ನು ತಯಾರಿಸುವುದಕ್ಕೆ ೧೪೭.೫೦ ಕೋಟಿ ರೂಪಾಯಿಗಳ ಹೆಚ್ಚುವರಿ ಸಂಪನ್ಮೂಲವನ್ನು ಕೂಡಿಸಿಕೊಳ್ಳುವುದಕ್ಕೆ ಹಣಕಾಸಿನ ಮಂತ್ರಿಗಳು ಬಹಳಷ್ಟು ಪ್ರಯತ್ನ ಮಾಡಿದ್ದಾರೆ. ಇಲ್ಲಿರತಕ್ಕ ವಿಚಾರ ಯಾವುದು ಎಂದರೆ ಕಳೆದ ೫-೬ ವರ್ಷಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಾ ಕಡೆಗೆ ಖಜಾನೆಯಲ್ಲಿ ಹಣ ಇಲ್ಲದೆ ಇದ್ದ ಸಂದರ್ಭದಲ್ಲಿ ಹೊಸದಾಗಿ ಬಂದಿರತಕ್ಕ ಸರ್ಕಾರ ಆಯವ್ಯಯ ಪಟ್ಟಿಯನ್ನು ತಯಾರಿಸುವುದು ಅತ್ಯಂತ ಕಷ್ಟಕರವಾದ ಕೆಲಸ. ಆದರೂ ಕೂಡ ಮಾನ್ಯ ರಾಜಶೇಖರ ಮೂರ್ತಿಯವರು ಪರಿಶ್ರಮದಿಂದ ಇದನ್ನು ತಯಾರಿಸಿದ್ದಾರೆಂದು ಹೇಳಬಹುದು. ಇದಕ್ಕೆ ಅನೇಕ ಉದಾಹರಣೆಗಳನ್ನು ಹೇಳಬಹುದು. ಈ ಆಯವ್ಯಯವನ್ನು ನೋಡಿ ನನಗೆ ಸಂತೋಷವಾಯಿತು. ನಿರ್ಮಲ ಗ್ರಾಮ ಜೀವನ ಮಾಡುವುದು ಒಳ್ಳೆಯ ವಿಚಾರ. ಇದನ್ನು ಹಿಂದಿನ ಸರ್ಕಾರ ಕೂಡ ಹೇಳಿದೆ. ಆದರೆ ಕಾರ್ಯಗತ ಮಾಡಲಿಲ್ಲ. ಇವರು ಹೇಳುತ್ತಾರೆ ಗ್ರಾಮೀಣ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಿಕೊಡುವುದು ಮತ್ತು ಈ ಯೋಜನೆ ಮೇರೆಗೆ ಪ್ರತಿ ವರ್ಷ ಒಂದು ಲಕ್ಷ ಕುಟುಂಬಗಳಿಗೆ ನಾಲ್ಕು ನೂರು ರೂಪಾಯಿ ಬೆಲೆಯ ಸಾಮಗ್ರಿಗಳ ರೂಪದಲ್ಲಿ ಸಹಾಯವನ್ನು ಹಾಗೂ ತಾಂತ್ರಿಕ ಮಾರ್ಗದರ್ಶನವನ್ನು ನೀಡಲಾಗುವುದು ಎಂದು. ಇದನ್ನು ನಾವು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡು ಗ್ರಾಮಗಳ ನೈರ್ಮಲ್ಯತೆಯನ್ನು ಕಾಪಾಡುತ್ತೇವೆಂದು ಹೇಳಿದರೆ ನಿಜವಾಗಿ ಗ್ರಾಮಾಂತರ ಪ್ರದೇಶದ ಹಳ್ಳಿಗಳನ್ನು ಒಳ್ಳೆಯ ರೀತಿಯಲ್ಲಿ ಸ್ವಚ್ಛವಾಗಿಡುವುದಕ್ಕೆ ಮಾಡಿರುವ ಒಳ್ಳೆಯ ಯೋಜನೆ ಎಂದು ನಾನು ಬಹಳ ಸಂತೋಷದಿಂದ ಇದನ್ನು ಸಮರ್ಥಿಸುತ್ತೇನೆ. ಇವತ್ತು ಈ ದೇಶದಲ್ಲಿರತಕ್ಕ ಗ್ರಾಮಗಳು ಹೆಚ್ಚು ಕೊಳಚೆ ಪ್ರದೇಶಗಳಾಗಬಾರದು. ಹಳ್ಳಿ ಪ್ರದೇಶಗಳಲ್ಲಿ ಶುದ್ಧತೆ ಬರಬೇಕು. ಒಳ್ಳೆಯ ರೀತಿಯ ನಿರ್ಮಲತೆ ಬರಬೇಕು, ಆ ರೀತಿಯ ಸೌಭಾಗ್ಯ ಗ್ರಾಮಾಂತರ ಪ್ರದೇಶದ ಹಳ್ಳಿಗಾಡುಗಳಿಗೆ ಸಿಕ್ಕಿದರೆ ಜನರ ಆರೋಗ್ಯ ಸುಧಾರಿಸುವುದಕ್ಕೆ, ಜನರಿಗೆ ಒಳ್ಳೆಯದಾಗುವುದಕ್ಕೆ ಸಾಧ್ಯ ಎಂಬುದನ್ನು ಹೇಳುವಾಗ ಇಂಥ ಕಾರ್ಯಕ್ರಮಗಳನ್ನು ಮಾಡಿ ತೋರಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಮಲ ಯೋಜನೆಗಳನ್ನು ಜಾರಿ ಮಾಡಿ ಗ್ರಾಮ ಜೀವನವನ್ನು ನಿರ್ಮಲ ಮಾಡುವ ಕಾರ್ಯಕ್ರಮ ಅತ್ಯಂತ ಸಮರ್ಥನೀಯವಾದುದು ಎಂದು ಹೇಳುತ್ತೇನೆ.

ಅದೇರೀತಿಯಲ್ಲಿ ಬಳಕೆದಾರರ ಹಿತರಕ್ಷಣೆಗೆ ಬೇಕಾದ ಕೆಲವು ವಿಷಯಗಳನ್ನು ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ. ಇದು ಬಹಳ ಅಗತ್ಯವಾದ ವಿಚಾರ. ಏಕೆಂದರೆ ಇವತ್ತು ಬಳಕೆದಾರರನ್ನು ಕೇಳುವವರೇ ಇಲ್ಲ. ಅಂಥ ಒಗ್ಗಟ್ಟಿನ ವ್ಯವಸ್ಥೆ ಕೂಡ ಬಳಕೆದಾರರಲ್ಲಿ ಇಲ್ಲದೇ ಇರುವುದರಿಂದ ಅನೇಕ ತೊಂದರೆಗಳಾಗಿವೆ. ಅದನ್ನು ನೀಗಿಸಲಿಕ್ಕೆ ಒಂದು ಉಪಾಯವನ್ನು ಅರ್ಥಿಕ ಮಂತ್ರಿಗಳು ಆಯವ್ಯಯದಲ್ಲಿ ಮಾಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಬಳಕೆದಾರನಿಗೆ ಯಾವ ರಕ್ಷಣೆಯೂ ಇಲ್ಲ. ಮತ್ತು ಅವನು ಯಾವುದಕ್ಕೂ ಹೇಸದ ಪಟ್ಟಭದ್ರ ಹಿತಾಸಕ್ತಿಗಳ ಕೃಪೆಯಲ್ಲಿ ಬದುಕಬೇಕಾಗುತ್ತದೆಂದು ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳ ಅಡಿಯಲ್ಲಿ ಬಳಕೆದಾರರು ಏನೂ ಮಾತನಾಡುವುದಕ್ಕೆ ಸಾಧ್ಯವಿಲ್ಲ. ಬಳಕೆದಾರರು ಇಲ್ಲದೇ ಇದ್ದರೆ ಮಾರುಕಟ್ಟೆ ಬೆಳೆಯುವುದಿಲ್ಲ. ಯಾರು ಕೊಡುತ್ತಾರೋ ಅವರೇ ಶ್ರೀಮಂತರಾಗುವುದು. ಬಳಕೆದಾರ ಅವರು ಹೇಳಿದ್ದನ್ನು ಕೊಡಬೇಕಾದ ಪರಿಸ್ಥಿತಿ ಇದೆ. ವ್ಯಾಪಾರಗಾರ ಕೊಡುವುದು ಅಸಲಿ ಇರಲಿ, ನಕಲಿ ಇರಲಿ, ಒಳ್ಳೆಯದಿರಲಿ ಕೆಟ್ಟದ್ದಿರಲಿ ಬಳಕೆದಾರ ಮಾತನಾಡುವುದಕ್ಕೆ ಅವಕಾಶ ಇಲ್ಲ. ಮಾತನಾಡಿದರೆ ಮತ್ತೆ ಅವರ ಹತ್ತಿರ ಹೋಗುವುದಕ್ಕಾಗುವುದಿಲ್ಲ. ಅವರ ಅಂಗಡಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಅದಲ್ಲದೆ ದಳ್ಳಾಳಿಗಳೂ ಪ್ರತಿಯೊಂದು ಕಡೆ ಇರುವುದರಿಂದ ಅವರೇ ತಿನ್ನತಕ್ಕ ಕಾರ್ಯಕ್ರಮ ಈ ದೇಶದಲ್ಲಿ ಉಂಟು. ಅವರನ್ನು ನಿರ್ಮೂಲನ ಮಾಡುವ ಕಾರ್ಯಕ್ರಮ ಬಂದರೆ ಖಂಡಿತವಾಗಿ ಗ್ರಾಮೀಣ ಜನರು ಒಳ್ಳೆಯ ರೀತಿಯಲ್ಲಿ ಉಸಿರಾಡುವುದಕ್ಕೆ ಸಾಧ್ಯ ಉಂಟು. ಗ್ರಾಮಾಂತರ ಪ್ರದೇಶದಲ್ಲಿ ಬೆಳೆವ ಹಣ್ಣುಹಂಪಲು, ದವಸ ಧಾನ್ಯಗಳು ಅಥವಾ ತರಕಾರಿಯಾಗಲೀ ಅಥವಾ ಅವರಿಗೆ ಬೇಕಾದಂಥ ಪದಾರ್ಥಗಳನ್ನು ಪಡೆಯುವಾಗ ಹಳ್ಳಿಯವನಾಗಲೀ, ಪೇಟೆಯವನಾಗಲೀ, ಮಧ್ಯಮವರ್ಗದವನಾಗಲೀ, ನೌಕರನಾಗಲೀ ಅವನಿಗೆ ದೊಡ್ಡ ತೊಂದರೆ ಇದೆ. ಆದ್ದರಿಂದ ಬಳಕೆದಾರರಿಗೆ ಸೂಕ್ತ ವ್ಯವಸ್ಥೆಯನ್ನು ಮಾಡುವಂಥದ್ದು ಅವರಿಗೆ ಬೇಕಾದಂಥ ಸವಲತ್ತುಗಳನ್ನು ಕೊಟ್ಟು ಹಿತರಕ್ಷಣೆ ಮಾಡುವಂಥದ್ದು ಮುಖ್ಯ. ಆ ವಿಚಾರದಲ್ಲಿ ಆಯವ್ಯಯ ಪಟ್ಟಿಯಲ್ಲಿ ಹೇಳಿದ್ದಾರೆ. ನಾನು ಅರ್ಥ ಮಂತ್ರಿಗಳ ಹತ್ತಿರ ಹೇಳುತ್ತೇನೆ, ಇದನ್ನು ಕಟ್ಟುನಿಟ್ಟಾಗಿ ತಾವು ಮಾಡಬೇಕು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಬಹಳ ಪಾಲು ಬಳಕೆದಾರರು ಇರುವುದರಿಂದ ಅವರು ಉಸಿರೆತ್ತಿ ಮಾತನಾಡುವುದಕ್ಕಾಗುವುದಿಲ್ಲ. ಮಾತನಾಡಿದರೆ ಮತ್ತೊಮ್ಮೆ ಅಂಗಡಿಗೆ ಹೋಗುವುದಕ್ಕೆ ಆಗುವುದಿಲ್ಲ. ಬಳಕೆದಾರರ ಒಕ್ಕೂಟ ಆಗಲೀ ಬಳಕೆದಾರರ ವ್ಯವಸ್ಥೆಯಾಗಲೀ ಇಲ್ಲದೇ ಇರುವುದರಿಂದ ಇವತ್ತು ಇದು ಪ್ರಾಮುಖ್ಯವಾಗಿದೆ. ಇನ್ನು ಬಹಳ

ಮುಖ್ಯವಾಗಿ ಹೇಳಬೇಕಾದ್ದು ಏನೆಂದರೆ ಕನ್ನಡಕ್ಕೆ ಉತ್ತೇಜನ ಕೊಡುವಂಥಾದ್ದು. ನಿಜವಾಗಿ ಕರ್ನಾಟಕದ ಉಸಿರು ಇದು, ಕರ್ನಾಟಕವಾಗಿದೆ ಎಂದು ಇವತ್ತು ಹೇಳುತ್ತಾರೆ. ಭಾಷಾವಾರು ರಾಜ್ಯಗಳ ಪರಿಮಿತಿಯಲ್ಲಿ ಕೇರಳ ಆಗಿದೆ, ಮಹಾರಾಷ್ಟ್ರ ಆಗಿದೆ, ತಮಿಳುನಾಡು ಆಗಿದೆ, ಆಂಧ್ರ ಆಗಿದೆ, ಕರ್ನಾಟಕವೂ ಆಗಿದೆ ಕರ್ನಾಟಕವಾಗಿದೆ ಎಂದು ಹೇಳುವುದಲ್ಲದೆ, ಕನ್ನಡದ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ಹೇಳುತ್ತಾ ಬಂದಿದ್ದಲ್ಲದೆ ನಿಜವಾಗಿ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಬೇಕು ಎಂದು ಪ್ರಯತ್ನ ಮಾಡುತ್ತಿದ್ದೇವೆ. ಆದರೂ ಅದು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರಲಿಲ್ಲ. ಆದ್ದರಿಂದ ನಾನು ಹೇಳುವಂಥದ್ದು ಕನ್ನಡಕ್ಕೆ ಕೊಡಬೇಕಾದ ಉತ್ತೇಜನ ಕೊಡಬೇಕು. ಆಡಳಿತದಲ್ಲಿ ಕನ್ನಡ ಭಾಷೆ ಬಳಕೆಗೆ ಬರಬೇಕು ಎಂದು ನಾವು ಹೇಳುತ್ತಿದ್ದೇವೆ. ಅದು ಎಲ್ಲಿ ಬರುತ್ತಾ ಉಂಟು ? ದೊಡ್ಡ ದೊಡ್ಡ ಆಫೀಸುಗಳಲ್ಲಿ ಕಣ್ಣಾಮುಚ್ಚಾಲೆ ಆಡಿದಹಾಗೆ ಸ್ವಲ್ಪ ಕನ್ನಡದಲ್ಲಿ ಸ್ವಲ್ಪ ಇಂಗ್ಲೀಷಿನಲ್ಲಿ ವ್ಯವಹಾರ ಮಾಡುತ್ತಾರೆ. ನಾಲ್ಕು ದಿವಸ ಗಲಾಟೆಯಾದಾಗ ಪತ್ರಿಕೆಗಳಲ್ಲಿ ಪ್ರತಿಭಟನೆ ಮಾಡಿದಾಗ ಕನ್ನಡದಲ್ಲಿ ಪತ್ರಗಳು ಬರುತ್ತವೆ. ವಿಧಾನಸೌಧದ ಒಳಗೇ ನಮಗೆ ಬರತಕ್ಕ ಎಲ್ಲ ಪತ್ರಗಳೂ ಸಂಪೂರ್ಣವಾಗಿ ಕನ್ನಡದಲ್ಲಿ ಬರಬೇಕು. ಕನ್ನಡಕ್ಕೆ ಉತ್ತೇಜನ ನೀಡಬೇಕು. ಕನ್ನಡ ಬಳಕೆಯಲ್ಲಿ ಬರಬೇಕು, ಆಡಳಿತದಲ್ಲಿ ಕನ್ನಡ ಜಾರಿಗೆ ಬರಬೇಕು ಎಂದು ಹೇಳುತ್ತಾ ಇರುವಾಗ ಇದನ್ನು ಮಾಡುವುದಕ್ಕೆ ಖಡಾಖಂಡಿತವಾಗಿ ಕೆಲಸ ಮಾಡಬೇಕು. ಅದಕ್ಕೆ ಅಡ್ಡಿ ಇರುವವರು ಒಂದೆರಡು ಪರ್ಸೆಂಟ್ ಜನ ಇರಬಹುದು. ಕನ್ನಡ ತಿಳಿಯದಂಥ ಇಂಗ್ಲೀಷಿನ ಮೇಲೆ ಬಹಳ ವ್ಯಾಮೋಹ ಇರುವವರು ಕೆಲವರಿರಬಹುದು. ಆದರೆ ಅವರೂ ಕೂಡ ಕನ್ನಡ ಕಲಿಯುವಹಾಗೆ ಮಾಡಬೇಕು. ''ನೋಡಿ ಇದು ಕರ್ನಾಟಕ, ಕನ್ನಡದಲ್ಲಿ ಆಡಳಿತ ಭಾಷೆಯಾಗಬೇಕೆಂದು ನಿರ್ಣಯ ಮಾಡಿರುವಾಗ ನೀವು ಎಷ್ಟು ದೊಡ್ಡ ಅಧಿಕಾರಿಗಳಾಗಲೀ ಕನ್ನಡ ಕಲಿಯಬೇಕು, ಕನ್ನಡದ ಮೇಲೆ ಪ್ರೇಮ ಇಡಬೇಕು'' ಎಂದು ಅವರನ್ನು ಒಲಿಸಿ ಕನ್ನಡದ ಬಳಕೆ ಜಾರಿಯಲ್ಲಿ ಬರುವಹಾಗೆ ಮಾಡಬೇಕು. ಆ ದೃಷ್ಟಿಯಿಂದ ಕನ್ನಡಕ್ಕೆ ಉತ್ತೇಜನ ಎಂದು ಆಗುಮ್ಯಯ ಪಟ್ಟಿಯಲ್ಲಿ ಹೇಳಿದ್ದಾರೆ.

(ಶ್ರೀ ರಾಜಾಗೌಡ ಅವರು ಸಭಾಧ್ಯಕ್ಷರ ಪೀಠದಲ್ಲಿದ್ದರು.)

ಎಂಎಲ್‌ಎಗಳಿಗಾಗಲೀ ಅಥವಾ ಇನ್ನಿತರ ಯಾರಿಗೇ ಆಗಲೀ ಬರತಕ್ಕ ಕಾಗದಪತ್ರಗಳಲ್ಲಿ ನೂರಕ್ಕೆ ನೂರು ಕನ್ನಡದಲ್ಲಿ ಬಂದರೆ ಅದು ತನ್ನಷ್ಟಕ್ಕೆ ತಾನೇ ಸರಿಯಾಗುತ್ತದೆ. ಅದಕ್ಕೆ ಒಂದು ಅರ್ಥ ಬರುತ್ತದೆ. ಆದರೆ ೨೫ ಪರ್ಸೆಂಟ್ ಕನ್ನಡದಲ್ಲಿ ಬರುವುದು, ೨೫ ದಾಮಾಷ ಇಂಗ್ಲೀಷಿನಲ್ಲಿ ಬರುವುದು, ಮತ್ತೆ ೫೦ ದಾಮಾಶ ಕನ್ನಡ ಹಾಗೂ ೫೦ ದಾಮಾಶ ಇಂಗ್ಲೀಷ್‌ನಲ್ಲಿ ಬರುವುದು – ಹೀಗೆ ಸರಿಯಾದ ಒಂದು ವ್ಯವಸ್ಥೆ ಇಲ್ಲ. ಅದು ಬಂದಹಾಗೆ, ನಾವು ನೋಡಿದಹಾಗೆ, ಅವರು ಮಾಡಿದಹಾಗೆ, ನಾವು ಕೇಳಿದ ಹಾಗೆ ಆಗಬೇಕು. ಆದ್ದರಿಂದ ಇದು ತಪ್ಪಿ ಮುಲಾಜು ಇಲ್ಲದೆ ಎಲ್ಲ ಕನ್ನಡದಲ್ಲಿ ಬರುವ ರೀತಿ ಆಗಬೇಕು. ಕನ್ನಡದಲ್ಲಿ ಬಹಳ ದೊಡ್ಡ ಕೊರತೆ ಏನೂ ಇಲ್ಲ. ಕನ್ನಡ ಭಾಷೆ ಬಹಳ ದೊಡ್ಡದಿದೆ. ಕನ್ನಡ ವಿಶ್ವವಿದ್ಯಾನಿಲಯವನ್ನು ಹಂಪೆಯಲ್ಲಿ ಸ್ಥಾಪನೆ ಮಾಡಬೇಕೆಂದು ಹೊರಟಿರುವುದು ಬಹಳ ಸಂತೋಷ. ಇದು ಕರ್ನಾಟಕಕ್ಕೆ ಮುಕುಟಮಣಿ ಇದ್ದಹಾಗೆ ಆಗಿದೆ. ಇದು ಆಗಲೇಬೇಕೆಂದು ಕೆಲವಾರು ವರ್ಷಗಳಿಂದ ಹೇಳುತ್ತ ಬಂದಿದ್ದು ಈಗ ಅದನ್ನು ಮಾಡುವುದಕ್ಕೆ ೧ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವುದು ನಿಜವಾಗಿಯೂ ಬಹಳ ಸಂತೋಷದ ವಿಚಾರ ಬೇಗನೆ ಈ ವಿಶ್ವವಿದ್ಯಾನಿಲಯ ಆಗಬೇಕು. ಹಾಗೆ ಮಾಡಿ ಕನ್ನಡಕ್ಕೆ ಮಾರ್ಗದರ್ಶನ ಕೊಡುವ ವ್ಯವಸ್ಥೆ ಆಗಬೇಕೆಂದು ಹೃದಯ ಪೂರ್ವಕವಾಗಿ ಹೇಳುತ್ತೇನೆ. ಕನ್ನಡಕ್ಕೆ ಇವತ್ತು ಕನ್ನಡದ ವಿಶ್ವವಿದ್ಯಾನಿಲಯದ ಅಗತ್ಯ ಇದೆಯಾದ್ದರಿಂದ ಇದು ಅತ್ಯಂತ ಸಮರ್ಥನೀಯವಾದುದು ಎಂದು ಬಹಳ ಸಂತೋಷದಿಂದ ಹೇಳುತ್ತೇನೆ. ಈ ಕನ್ನಡದ ಬಗ್ಗೆ, ಕನ್ನಡ ಆಡಳಿತ ಭಾಷೆ ಆಗುವ ಬಗ್ಗೆ ಯಾವ ರೀತಿಯ ಮುಲಾಜೂ ಇಲ್ಲದೇ ಖಂಡಿತವಾಗಿ ಮಾಡಿದರೆ ಅದು ಖಂಡಿತ ಆಗುತ್ತದೆಂದು ಹೇಳುತ್ತೇನೆ. ಉದಾಹರಣೆಗೆ ಕೇರಳದಲ್ಲಿ ಬಿ.ಎ., ಎಂ.ಎ. ಆಗಿರುವ ಜನರು ಹೆಚ್ಚು ಇದ್ದರೂ ಪ್ರತಿಯೊಬ್ಬರೂ ಮಳೆಯಾಳಿ ಪತ್ರಿಕೆ, ಪುಸ್ತಕಗಳನ್ನು ಓದುವುದನ್ನು ನೋಡುತ್ತೇವೆಯೇ ಹೊರತು ಬೇರೆ ಭಾಷೆಯ ಪತ್ರಿಕೆ, ಪುಸ್ತಕಗಳನ್ನು ನಾವು ನೋಡುವುದಕ್ಕೆ ಸಾಧ್ಯವಿಲ್ಲ. ನಾನು ಎಷ್ಟೋ ಸಾರಿ ಅಲ್ಲಿ ಹೋಗಿ ನೋಡಿದ್ದೇನೆ. ಅಲ್ಲಿ ಮಾತನಾಡುವುದು ಮಳೆಯಾಳಂ ಅಲ್ಲದೇ ಬೇರೆ ಭಾಷೆ ಇಲ್ಲ ಅಲ್ಲಿ ನಮಗೆ ಕನ್ನಡದ ಶಬ್ದ ಹುಡುಕುವುದಕ್ಕೆ ಸಾಧ್ಯವಿಲ್ಲ. ಯಾರಾದರೂ ನಮ್ಮ ಸಂಬಂಧಿಕರು ಇದ್ದರೆ ಮಾತ್ರ ಕೇಳಬಹುದಷ್ಟೇ. ಅದೇ ರೀತಿ ತಮಿಳುನಾಡಿನಲ್ಲಿಯೂ ಕೂಡಾ. ಅದೇ ರೀತಿ ಆಂಧ್ರದಲ್ಲೂ ಕೂಡಾ ಎಂದು ಹೇಳುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ಮಾತ್ರ ಇಷ್ಟೊಂದು ಔದಾರ್ಯವಿರಲು ಕಾರಣ ಏನು ? ಇದನ್ನು ಈ ಸರ್ಕಾರಕ್ಕೆ ಮಾತ್ರ ನಾನು ಹೇಳುತ್ತಿಲ್ಲ. ಹಿಂದಿನಿಂದಲೂ ಆಡಳಿತ ನಡೆಸಿದ ಸರ್ಕಾರಗಳಿಗೆ ನಾನು ಹೇಳುತ್ತಿದ್ದೇನೆ. ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಇಂತಹದ್ದನ್ನು ಮಾಡುವುದಕ್ಕೆ ಹೊರಟಿದೆ. ಬಹಳ

ಸಂತೋಷ. ಕನ್ನಡ ಆಡಳಿತ ಭಾಷೆ ಆಗಬೇಕು, ಈ ಬಗ್ಗೆ ಪ್ರಯತ್ನ ಮಾಡುತ್ತೇವೆನ್ನುವ ಆಶ್ವಾಸನೆಯನ್ನು ನಮ್ಮ ಸರ್ಕಾರ ಬೇರೆ ಬೇರೆ ಸಂದರ್ಭದಲ್ಲಿ ಆಶ್ವಾಸನೆ ಕೊಟ್ಟಿದೆ. ಈ ಬಗ್ಗೆ ನಾನು ಸಂತೋಷ ಪಡುತ್ತೇನೆ.

ಮೊಲೆವಾಲಿನೊಡಗೂಡಿ ಬಂದ ನುಡಿ ತಾಯಿನುಡಿ
ಕೊಲೆಗೈದರಮ್ಮನನೆ ಕೊಲಿಸಿದಂತೆ

ಎಂದು ಕುವೆಂಪುರವರು ಹೇಳಿದ್ದಾರೆ.

ಮೊಲೆವಾಲಿನೊಡಗೂಡಿ ಬಂದ ನುಡಿ ತಾಯಿನುಡಿ
ಕೊಲೆಗೈದರಮ್ಮನನೆ ಕೊಲಿಸಿದಂತೆ
ತಾಯೊಂದು ಕೊಡುವೊಂದು ನಿಮ್ಮ ಕೆನ್ನೆಯ ಮೇಲೆ
ಪೋಣಿಸಿದ ಮುತ್ತಿನಂತೆ, ನಿಮ್ಮ ಹಸುಳೆಯ ಮುತ್ತು
ಹಸುಳೆಗಳಂತೆ ಕೊಡುವಂದು ಕನ್ನಡವೆ ಕಲಿಸುವುದು ತುಟಿಗೆ ಬಂದು

ಎಂದು ಕುವೆಂಪುರವರು ಹೇಳುತ್ತಾರೆ. ಆದರೆ ನಾನು ಇಷ್ಟೆಲ್ಲಾ ಕನ್ನಡದ ಬಗ್ಗೆ ಅಭಿಮಾನದಿಂದ ಹೇಳುವುದಕ್ಕೆ ಕಾರಣ ಏನೆಂದರೆ ಇಲ್ಲಿ ಕನ್ನಡಕ್ಕೆ ಉತ್ತೇಜನ ಕೊಡುವ ಕಾರ್ಯಕ್ರಮವನ್ನು ಮಾನ್ಯ ಮಂತ್ರಿಗಳು ಕೊಟ್ಟಿರುವುದರಿಂದ ಖಂಡಿತವಾಗಿ ಪರಿಪೂರ್ಣವಾಗಿ ಇದರಲ್ಲಿ ಜಯಶೀಲರಾಗುತ್ತೀರಿ ಎಂದು ನಾನು ಇಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ, ಈ ಕನ್ನಡಕ್ಕೆ ಉತ್ತೇಜನ ಕೊಡುವುದರ ಜೊತೆಗೆ ಆಡಳಿತದಲ್ಲಿ ಚುರುಕು ಎನ್ನುವ ಬಗ್ಗೆ ಹೇಳಿದ್ದಾರೆ, ಇವತ್ತು ನಾವು ಹೇಳುವುದು ಕಾರ್ಯರೂಪಕ್ಕೆ ಬರಬೇಕಾದರೆ ಇವತ್ತು ನಮ್ಮ ಆಡಳಿತ ಯಂತ್ರ ಶುದ್ಧ ಆಗಬೇಕೆಂದು ನಾವು ಅನೇಕ ಭಾಷಣದಲ್ಲಿ ಹೇಳಿದ್ದೇವೆ. ಇದು ಬಹಳ ಸತ್ಯ. ಇವತ್ತು ನಮ್ಮ ಮಂತ್ರಿಮಂಡಲದವರು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ ಅದು ಹಾಗೆಯೇ ಗ್ರಾಮೀಣ ಪ್ರದೇಶದ ಜನರಿಗೆ ಮುಟ್ಟುವುದಿಲ್ಲ. ನಿಜವಾದ ಬಡವನಿಗೆ, ನಿಜವಾದ ಹಳ್ಳಿಗನಿಗೆ, ನಿಜವಾದ ಕೃಷಿಕನಿಗೆ. ನಿಜವಾದ ರೈತನಿಗೆ, ನಿಜವಾದ ನೌಕರನಿಗೆ ಅದು ಮುಟ್ಟುವುದಿಲ್ಲ. ಇವತ್ತು ನಮಗೆ ಗುರುತು ಇರುವ ಅಧಿಕಾರಿ ಹತ್ತಿರ ನಾವು ಒಂದು ಅಹವಾಲು ತೆಗೆದುಕೊಂಡು ಹೋದರೂ ಸಹ ಅವರು ಕೆಲಸ ಮಾಡುವುದಿಲ್ಲ. ಇವತ್ತು ಎಲ್ಲ ಅಧಿಕಾರಿಗಳೂ ಅಂತಹವರು ಎಂದು ನಾನು ಹೇಳುವುದಿಲ್ಲ, ನಮ್ಮಲ್ಲಿ ೨೨ ಕ್ಯಾರೆಟ್‌ನ ಅಧಿಕಾರಿಗಳೂ ಇದ್ದಾರೆ, ಅವರು ಬಂಗಾರ. ಹಾಗೇ ೧೨ ಕ್ಯಾರೆಟ್‌ನ, ೧೫ ಕ್ಯಾರೆಟ್‌ನ ಅಧಿಕಾರಿಗಳೂ ಕೂಡಾ ಇದ್ದಾರೆ. ಎಲ್ಲರನ್ನೂ ನಾವು ಒಂದೇ ಸಾಲಿನಲ್ಲಿ ಸೇರಿಸುವುದು ಸರಿಯಲ್ಲ. ಇವರಲ್ಲಿ ಕೆಲವರು ಒಳ್ಳೆಯವರೂ ಇದ್ದಾರೆ. ಆದರೆ ಕೆಲವರ ಹತ್ತಿರ ಹೋದರೆ ನಮ್ಮ ಕಡೆ ನೋಡುವುದೇ ಇಲ್ಲ. ನಾವು ನಮ್ಮ ಕಡೆಯ ಬಡವರ ಕಷ್ಟಗಳ ಬಗ್ಗೆ ಅವರ ಬಳಿ ಹೋದರೆ ತಲೆ ತಗ್ಗಿಸಿಕೊಂಡಿರುವವರು ೧೦–೧೫ ನಿಮಿಷಗಳಾದರೂ ತಲೆ ಎತ್ತುವುದಿಲ್ಲ. ಇದು ಅವರಿಗೆ ಭೂಷಣ ತರತಕ್ಕ ವಿಚಾರ ಅಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಗ್ರಾಮೀಣ ಪ್ರದೇಶದ ಬಡ ರೈತರ ಬಗ್ಗೆ, ಮೀನುಗಾರರ ಬಗ್ಗೆ, ಕೂಲಿಕಾರರ ಬಗ್ಗೆ ಬೀಡಿ ಕೆಲಸಗಾರರ ಬಗ್ಗೆ ದೂರು ತೆಗೆದುಕೊಂಡು ಹೋದಾಗ ಅದಷ್ಟು ಜರೂರಾಗಿ ಅದನ್ನು ನೋಡಿ ಅದನ್ನು ವಿಲೇವಾರಿ ಮಾಡುವ ವ್ಯವಸ್ಥೆ ಆಗುವ ಬಗ್ಗೆ ಇವತ್ತು ಕಾರ್ಯಕ್ರಮಗಳು ಆಗಬೇಕು. ಅದಕ್ಕಾಗಿ ಇವತ್ತು ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕೆಂದು ನಮ್ಮ ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ ಇದು ಸಮರ್ಥನೀಯವಾದ ವಿಚಾರ. ಈ ರಾಜ್ಯದಲ್ಲಿ ಅಧಿಕಾರಿಗಳು ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಇವತ್ತು ಅಧಿಕಾರಿಗಳು ಗಮನ ಇಟ್ಟು ಕೆಲಸ ಮಾಡಲಿಲ್ಲವೆಂದರೆ ಕೆಲಸ ಹಾಳಾಗುತ್ತದೆ. ಇದು ಒಳ್ಳೆಯ ವಿಚಾರ ಆಗುವುದಿಲ್ಲ. ಒಂದು ಶಾಲೆಯ ವಿಚಾರ, ಒಂದು ಆಸ್ಪತ್ರೆಯ ವಿಚಾರ, ಒಂದು ರಸ್ತೆಯ ವಿಚಾರ, ಒಂದು ಗ್ರಾಮದ ವಿಚಾರದಲ್ಲಿ ಅವರು ಗಮನ ಹರಿಸುವುದರಿಂದ ಅಲ್ಲಿರತಕ್ಕ ಎಲ್ಲಾ ಮತದಾರರಿಗೂ ಅನುಕೂಲವಾಗುತ್ತದೆ. ಹಿಂದೂಗಳಿಗಾಗಲಿ, ಮುಸಲ್ಮಾನರಿಗಾಗಲಿ, ಕ್ರೈಸ್ತರಿಗಾಗಲಿ ಸರ್ವರಿಗೂ ಉಪಕಾರವಾಗುವ ಅಭಿವೃದ್ಧಿ ಕೆಲಸಗಳ ಸಲುವಾಗಿ ಅಧಿಕಾರಿಗಳ ಹತ್ತಿರ ಹೋದಾಗ ಅಧಿಕಾರಿಗಳು ಆಫೀಸುಗಳಲ್ಲಿ ಸರಿಯಾಗಿ ಮುತುವರ್ಜಿ ವಹಿಸಿ ಅದನ್ನು ಮಾಡದಿದ್ದರೆ ಏನು ಅನಾಹುತವಾಗುತ್ತದೆ ಎನ್ನುವುದನ್ನು ನಾನು ಹೇಳಬೇಕಾಗಿಲ್ಲ. ಈ ಕಾರಣದಿಂದ ಆಡಳಿತ ಚುರುಕು ಮಾಡಿದರೆ ತನ್ನಷ್ಟಕ್ಕೆ ತಾನೇ ಸರಿಹೋಗುತ್ತದೆ ಯಾವ ಸರ್ಕಾರವಾಗಲಿ ಒಂದು ಕಾನೂನು ತಂದರೆ ತಲೆಯ ಮೇಲೆ ನೀರು ಹಾಕಿದರೆ ಅದು ಕಾಲಿನ ಕೆಳಗಡೆ ಹೋಗುತ್ತದೆ. ಆದರೆ ಕಾಲಿಗೆ ನೀರು ಹಾಕಿದರೆ ಅದು ತಲೆಯ ಮೇಲೆ ಹೋಗುವುದಿಲ್ಲ. ಈಗ ಒಳ್ಳೊಳ್ಳೆಯ ಕಾರ್ಯಕ್ರಮಗಳು ಇದ್ದರೂ ಕೂಡ ಉದಾಹರಣೆಗೆ ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನ ಕೊಡತಕ್ಕ ಕಾರ್ಯಕ್ರಮಗಳು ಏನಿವೆ, ಅವು ಜೋರಾಗಿ ನಡೆಯಬೇಕು. ಅದರ ಬಗ್ಗೆ ಸರ್ಕಾರದ ಅಭಿಪ್ರಾಯ ಗೊತ್ತಾಗಲಿಲ್ಲ. ಹಿಂದೆ ಇದು ನಡೆಯುತ್ತಿತ್ತು, ಈಗ ಕಳೆದ ಮೂರ್ನಾಲ್ಕು ತಿಂಗಳು

ಗಳಿಂದ ಬಡವರಿಗೆ ಹಣ ಸಿಗುತ್ತಿಲ್ಲ. ಅದು ಸಿಗುವ ವ್ಯವಸ್ಥೆಯಾಗಬೇಕು. ಇದು ಪ್ರಾಮುಖ್ಯವಾದ ವಿಚಾರ. ಇದರಿಂದ ಬಡವರಿಗೆ ಬಹಳ ಉಪಕಾರವಾಗುತ್ತದೆ.

ಇನ್ನು ಬಹಳ ಸಂತೋಷದ ವಿಚಾರ ಅಂದರೆ ಹಿಂದಿನ ಸರ್ಕಾರ ಬಡವರಿಗೆ ಬಟ್ಟೆಬರೆ, ಪಠ್ಯ ಪುಸ್ತಕ ತಾಳಿ ಕೊಡುತ್ತಿದ್ದ ವಿಚಾರ ರಹಸ್ಯವಾಗಿ ಏನು ಉಳಿದಿಲ್ಲ. ಅಂಗಿ ಬಟ್ಟೆ ಪಠ್ಯಪುಸ್ತಕ, ತಾಳಿ ಅವುಗಳು ಹೇಗಿವೆ ಅಂದರೆ, ಅಂಗಿಬಟ್ಟೆಯನ್ನು ಒಂದು ಸಾರಿ ನೀರಿಗೆ ಹಾಕಿದರೆ ಮತ್ತೆ ತೊಡುವುದಕ್ಕಾಗುವುದಿಲ್ಲ. ಹಸಿರು ಸೀರೆಯನ್ನು ನೀರಿಗೆ ಹಾಕಿದರೆ ಅದು ಬಿಳಿ ಸೀರೆಯಾಗಿ ಪರಿವರ್ತನೆಯಾಗುತ್ತದೆಂದು ಜನರು ಹೇಳುತ್ತಿದ್ದಾರೆ. ಇದು ಬಹಳ ಅನ್ಯಾಯ. ಈ ರೀತಿ ಬಟ್ಟೆ ಕುಗ್ಗಿ ಹೋಗುತ್ತದೆ. ೨ ಮೀಟರ್ ಬಟ್ಟೆ ನೀರಿಗೆ ಹಾಕಿದ ಮೇಲೆ ೧ ಮೀಟರ್ ಆಗಿರುವುದು ನಿಜ. ಮಕ್ಕಳಿಗೆ ಬಟ್ಟೆಗಳನ್ನು ಕೊಡುವಾಗ ಗಿಡ್ಡದ ಹುಡುಗರು ಇರುತ್ತಾರೆ, ಉದ್ದದ ಹುಡುಗರು ಇರುತ್ತಾರೆ. ತೋರದ ಹುಡುಗರು ಇರುತ್ತಾರೆ ಸಪೂರದ ಹುಡುಗರು ಇರುತ್ತಾರೆ ಅವರೆಲ್ಲರಿಗೂ ಒಂದೇ ರೀತಿ ಬಟ್ಟೆ ರೆಡಿ ಮಾಡುವುದು. ಉದ್ದದ ಮಕ್ಕಳಿಗೆ ಅಂಗಿ ಮೇಲೆ ಹೋಗುತ್ತದೆ, ಗಿಡ್ಡದ ಹುಡುಗರಿಗೆ ಕಾಲಿನ ಮೇಲೆ ಬರುತ್ತದೆ. ತೋರದ ಹುಡುಗರಿಗೆ ಅದು ಆಗುವುದೇ ಇಲ್ಲ, ಸಪೂರದ ಹುಡುಗರಿಗೆ ಅದು ಪ್ಯಾಂಟ್ ಆಗುತ್ತದೆ. ಸರ್ಕಾರ ತಪ್ಪು ಮಾಡುವುದು ಅಲ್ಲ, ಅವರು ಬಟ್ಟೆಗಳನ್ನು ರೆಡಿ ಮಾಡುವಾಗ ಎಲ್ಲರಿಗೂ ಒಂದೇ ರೀತಿ ರೆಡಿ ಮಾಡಿದ್ದಾರೆ. ಜನರಿಗೆ ಉಪಕಾರ ಮಾಡುವ ವಿಚಾರದಲ್ಲಿ ತಾಳಿ ಕೊಡುವ ವಿಚಾರದಲ್ಲಿ ಜಾತ್ಯಾತೀತ ಮನೋಭಾವನೆ ಇಲ್ಲದ ಪರಿಸ್ಥಿತಿ ಬಂದಿದೆ. ಮುಸಲ್ಮಾನರಿಗೆ ತಾಳಿ ಕೊಡಲಿಕ್ಕೆ ಏನು ಮಾಡುವುದು ಎನ್ನತಕ್ಕ ಭಾವನೆ ಇತ್ತು ಈ ರೀತಿಯಲ್ಲಿ ಅಲ್ಪಸಂಖ್ಯಾತರು ಮಾತನಾಡಿಕೊಳ್ಳುವ ಒಂದು ಬೇಜಾರು ಪರಿಸ್ಥಿತಿ ಬಂದಿತ್ತು. ಇಂತಹ ಒಂದು ಕೆಟ್ಟ ಪರಿಸ್ಥಿತಿ ಇತ್ತು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಂತಹ ವಿಚಾರವನ್ನು ಮಾಡುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಊರುಗಳಲ್ಲಿ ಇದು ಅಪಹಾಸ್ಯಕ್ಕೆ ಈಡಾಗಿತ್ತು. ನಮ್ಮ ಆರ್ಥಿಕಮಂತ್ರಿಗಳಾದ ರಾಜಶೇಖರಮೂರ್ತಿಯವರು ಅದನ್ನು ಸಂಪೂರ್ಣ ತೆಗೆದುಹಾಕಿರುವುದು ಬಹಳ ಸಂತೋಷದ ವಿಚಾರವೆಂದು ಹೇಳುವುದಕ್ಕೆ ಅಪೇಕ್ಷಿಸುತ್ತೇನೆ. ಅದಕ್ಕೆ ಬದಲಾಗಿ ಬೇರೆ ಇನ್ನಿತರ ಒಳ್ಳೆಯ ಕಾರ್ಯಕ್ರಮಗಳನ್ನು ಕೊಟ್ಟು ಉಪಕಾರ ಮಾಡುವಂತಹ ವ್ಯವಸ್ಥೆಯಾಗಬೇಕು.

ಇನ್ನು ತೆರಿಗೆ ವಿಚಾರದಲ್ಲಿ ಹೇಳುವುದಾದರೆ ಮೋಜು ಮಾಡುವವರಿಗೆ ಹೆಚ್ಚು ತೆರಿಗೆ ಬಿದ್ದಿದೆ. ಕುದುರೆ ಜೂಜು ಆಡುವವರ ಮೇಲೆ ಹೆಚ್ಚು ತೆರಿಗೆಯನ್ನು ಹಾಕಲಿ. ಬಡವರಿಗೆ ಕುದುರೆಯನ್ನು ನೋಡುವುದೇ ಕಷ್ಟ. ಕುದುರೆ ಜೂಜಿನವರಿಗೆ ಸಾರಾಯಿ ಕುಡಿಯುವವರಿಗೆ ಹೆಚ್ಚು ತೆರಿಗೆ ಬಿದ್ದಿದೆ. ಹೆಂಡವನ್ನು ಇಡೀ ರಾಜ್ಯದಲ್ಲಿ ರದ್ದುಮಾಡತಕ್ಕ ವಿಚಾರ ಪ್ರಸ್ತಾಪ ಮಾಡಿದ್ದಾರೆ ಇದರಿಂದ ಸರ್ಕಾರಕ್ಕೆ ೬೦ ಕೋಟಿ ರೂಪಾಯಿಗಳು ನಷ್ಟವಾದರೂ ಇದು ಬಹಳ ಒಳ್ಳೆಯ ಕಾರ್ಯಕ್ರಮ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದರಿಂದ ತೊಂದರೆಯಾದರೂ ಕೂಡ ಈ ನಿಟ್ಟಿನಲ್ಲಿ ಕೆಲಸ ಮಾಡಿರುವುದು ಸ್ವಾಗತ. ಹೆಂಡ ಕುಡಿಯುವವರಿಗೆ ವಿಷ ಬೆರಸಿದ ಹೆಂಡವನ್ನು ಕೊಟ್ಟು ಅವರು ಅದನ್ನು ಕುಡಿದು ಸಾಯತಕ್ಕದ್ದು ಪತ್ರಿಕೆಗಳಲ್ಲಿ ಓದಿ ಓದಿ ನಮಗೆ ಸಾಕಾಗಿ ಹೋಗಿತ್ತು. ದುರ್ವಿಶ್ರಣ ಹೆಂಡ ಸಾರಾಯಿ ಕುಡಿದು ಜನ ಸಾಯುತ್ತಿದ್ದರು. ಹಳ್ಳಿಗಳಲ್ಲಿ ಕುಡಿಯುತಕ್ಕವರು ಹರಿಜನ-ಗಿರಿಜನರು. ಹೆಚ್ಚಿನ ಸಂಖ್ಯೆಯಲ್ಲಿ ಕುಡಿಯುವವರು ಮತ್ತು ಸಾಯುವವರು ಹರಿಜನ ಮತ್ತು ಗಿರಿಜನರೇ ಎಂಬುದನ್ನು ಇತ್ತು ನಾವು ಕಾಣುತ್ತಿದ್ದೇವೆ. ಆದ್ದರಿಂದ ನಾವು ಹರಿಜನ ಗಿರಿಜನರ ಬಗ್ಗೆ ಬಹಳ ಕಳಕಳಿಯಿಂದ ಹೇಳುತ್ತೇವೆ. ೮೦ ಕೋಟಿ ರೂಪಾಯಿಗಳನ್ನು ನಿಮಗಾಗಿ ಇಟ್ಟು ಬಹಳ ಉಪಕಾರ ಮಾಡುತ್ತೇವೆ, ನಿಮಗಾಗಿ ಹಣವನ್ನು ತೆಗೆದಿಟ್ಟಿದ್ದೇವೆಂದು ಹೇಳುತ್ತೇವೆ. ಹೆಂಡ ಸಾರಾಯಿ ಎಲ್ಲವನ್ನೂ ಈ ಜನರೇ ಕುಡಿಯುತ್ತಾರೆ. ಆದರಿಂದ ಸರ್ಕಾರಕ್ಕೆ ಸಿಗತಕ್ಕ ೬೦ ಕೋಟಿ ರೂಪಾಯಿ ಹಣ ಅವರದೆ. ಹರಿಜನ ಗಿರಿಜನರಿಗೆ ಇಟ್ಟಿರತಕ್ಕ ಹಣದಲ್ಲಿ ನಾವು ಅವರ ಹೆಂಡತಿ ಮಕ್ಕಳಿಗೆ ಕೊಡುವುದಿಲ್ಲ. ವಿಷ ಬೆರಸಿದ ಹೆಂಡ ಸಾರಾಯಿ ಕುಡಿದು ಹಣವನ್ನು ಇವರು ಹಾಳು ಮಾಡುತ್ತಿದ್ದಾರೆ. ಇದರಿಂದ ಬರತಕ್ಕ ೬೦-೭೦ ಕೋಟಿ ರೂಪಾಯಿಗಳನ್ನು ಅವರಿಗೇ ಕೊಡಬೇಕು. ಇಲ್ಲಿ ದೊಡ್ಡದಾಗಿ ಒಳ್ಳೆಯದು ಮಾಡುತ್ತೇವೆಂದು ಹೇಳುವಾಗ ೬೦ ಕೋಟಿ ರೂಪಾಯಿಗಳನ್ನು ಬೇರೆ ರೂಪದಲ್ಲಿ ಈ ಜನರಿಗೆ ಸ್ಯಾಂಕ್ಷನ್ ಮಾಡಿದರೆ ಒಳ್ಳೆಯದಾಗುತ್ತದೆ. ಈ ರೀತಿ ಮಾಡಿದರೆ ಕೆಳಗೆ ಇರತಕ್ಕವರಿಗೆ ಒಳ್ಳೆಯ ಉಪಕಾರವಾಗುತ್ತದೆ. ಹೃತ್ಪೂರ್ವಕವಾಗಿ ಪಾನನಿರೋಧ ಜಾರಿ ಆಗಬೇಕೆಂದು ಹೇಳುವವನು ನಾನು, ಅಂತಹ ಸಂದರ್ಭದಲ್ಲಿ ಎಷ್ಟು ಬೇಕಾದರೂ ಮಾತನಾಡುವ ಇಷ್ಟ ನನಗೆ ಉಂಟು. ಎಲ್ಲಾ ಪಾಪಗಳಿಗೆ ಎಲ್ಲಾ ಸಾಲಗಳಿಗೆ ಎಲ್ಲಾ ಜಗಳಗಳಿಗೆ ಎಲ್ಲ ಬಡತನಕ್ಕೆ ಎಲ್ಲಾ ಹಾಳು ಸ್ಥಿತಿಗೆ ಈ ಹೆಂಡದ ಪಾನ ಕಾರಣವೆಂದು ಎಲ್ಲಾ ವೇದಗಳಲ್ಲಿ ಮತ್ತು ದೊಡ್ಡ ದೊಡ್ಡ ತಜ್ಞರು ಬರೆದ ಪುಸ್ತಕಗಳಲ್ಲಿ ಹೇಳುತ್ತಾರೆ.

ನಾವು ಸಂಪಾದನೆ ಮಾಡಿದ ದುಡ್ಡು ಅದಕ್ಕೇ ಹೋಗುತ್ತದೆ. ಹೆಂಡತಿ, ಮಕ್ಕಳು ಕುಟುಂಬಕ್ಕೆ ಯಾರಿಗೂ ಹೋಗುವುದಿಲ್ಲ. ಎನ್ನುವ ಮಾತು ಇತ್ತು. ಈ ದೃಷ್ಟಿಯಿಂದ ೧-೭-೯೦ರಿಂದ ಹೆಂಡದ ಮಾರಾಟ ನಿಷೇಧ ಮಾಡುತ್ತಿರುವುದಕ್ಕಾಗಿ ನಾನು ಶ್ರೀ ರಾಜಶೇಖರಮೂರ್ತಿಯವರನ್ನು ಅಭಿನಂದಿಸುತ್ತೇನೆ. ಏಕೆಂದರೆ ಥಕ್ಕನೆ ತೆಗೆದಿದ್ದಾರೆ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ತೊಂದರೆ ಆದರೂ ಕೂಡ ಇದಕ್ಕೆ ಬೇರೆ ವ್ಯವಸ್ಥೆ ಮಾಡಬೇಕೆಂದು ಬೇರೆ ಬೇರೆ ವಿಧಾನಗಳನ್ನು ನಮ್ಮ ಸದಸ್ಯರು ನೋಡುತ್ತಿದ್ದಾರೆ ಅದು ಬೇರೆ ವಿಚಾರ. ಇನ್ನು ರೈತರ ಬಗ್ಗೆ ಬಜೆಟ್‌ನಲ್ಲಿ ಏನೂ ಹೇಳಿಲ್ಲ ಎಂದು ಹೇಳಿದರೂ ಕೂಡ ಪಂಪುಸೆಟ್ಟುಗಳಿಗೆ ಸಹಾಯ ಮಾಡಬೇಕು. ಗ್ರಾಮೀಣ ಪ್ರದೇಶಕ್ಕೆ ನೀರಾವರಿ ಮಾಡುವುದರ ಬಗ್ಗೆ ಹೇಳತಕ್ಕದ್ದು ಬಹಳ ಪ್ರಾಮುಖ್ಯವಾದ ವಿಚಾರ. ಅವರು ಬರೆದಿರುವುದು ಸ್ವಲ್ಪವಾದರೂ ಚಿನ್ನಚಿನ್ನವೇ. ನಾಲ್ಕು ಸಾಲುಗಳಲ್ಲಿ ಹೇಳಿದರೂ ಕೂಡ ಅದು ಇಡೀ ಎಲ್ಲ ವಿವರಗಳನ್ನು ಕೊಡುತ್ತದೆ ಅದನ್ನು ಎರಡು ಪುಟಗಳಲ್ಲಿ ಬರೆದರೂ ಒಂದೇ. ಈ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಮಂಜೂರಾತಿ ಕೊಟ್ಟರೆ ಹಳ್ಳಿಗಳ ಉದ್ಧಾರ ಆಗುತ್ತದೆ ಎನ್ನುವ ಕಳಕಳಿ ಇಲ್ಲಿ ಉಂಟು. ಹೆಚ್ಚು ಉದ್ದವಾಗಿ ಬರೆಯದೇ ಇದ್ದರೂ ಇಲ್ಲಿ ಈ ಸೂಚನೆ ಇದೆ. ಇದನ್ನು ನಾವು ಗಮನಿಸಬೇಕು.

ಇನ್ನು ಬಹಳ ಪ್ರಮುಖವಾಗಿ ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಅಪೀಲು ಪ್ರಾಧಿಕಾರ ಉಂಟು. ಭೂನ್ಯಾಯ ಮಂಡಳಿಗಳಲ್ಲಿ ಒಕ್ಕಲುಗಳಿಗೆ ಕೊಟ್ಟಂಥ ಎಲ್ಲಾ ಭೂಮಿಯು ಪ್ರಾಧಿಕಾರದವರು ಇವತ್ತು ಧನಿಗಳಿಗೆ ಕೊಡುತ್ತಿದ್ದಾರೆ. ಇದನ್ನು ನಿಲ್ಲಿಸಬೇಕೆಂದು ಶ್ರೀ ಜಿ. ಎಸ್. ಆಚಾರ್ ಅವರು ಕೂಡ ಹೇಳಿದ್ದಾರೆ. ಜಿಲ್ಲಾ ಅಪಿಲೇಟ್‌ಗಳನ್ನು ನಿಲ್ಲಿಸಿಬಿಟ್ಟರೆ ನಿಜವಾಗಿಯೂ ಒಕ್ಕಲುಗಳಿಗೆ ಉಪಕಾರವಾಗುತ್ತದೆ, ಈಗ ಬರೀ ಧನಿಗಳಿಗೆ ಉಪಕಾರವಾಗಿದೆ ಭೂ ನ್ಯಾಯ ಮಂಡಳಿಗಳಲ್ಲಿ ಎಂಭತ್ತು ದಾವಾಂಶ ಒಕ್ಕಲುಗಳಿಗೆ ಒಂದಲ್ಲ ಇಪ್ಪತ್ತು ಸಲ ಆದಂಥ ಭೂಮಿ ಜಿಲ್ಲಾ ಪ್ರಾಧಿಕಾರಕ್ಕೆ ಹೋದಾಗ ಧನಿಗಳಿಗೆ ಆಗುತ್ತದೆ. ಆದ್ದರಿಂದ ಈ ಪ್ರಾಧಿಕಾರದ ಬಗ್ಗೆ ಪುನಃ ಆಲೋಚನೆ ಮಾಡಿ, ತಪ್ಪಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ ಅದೇ ರೀತಿಯಲ್ಲಿ ನಮ್ಮ ಇಡೀ ಜಿಲ್ಲೆಯಲ್ಲಿ ಎಷ್ಟು ಸಾವಿರ ಎಕರೆ ಅಕ್ರಮ ಭೂಮಿಯನ್ನು ತೆಗೆದುಕೊಂಡಿದ್ದಾರೆ ಅದನ್ನು ಸಕ್ರಮ ಮಾಡತಕ್ಕಂಥ ಕಾರ್ಯಕ್ರಮ ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ. ಹೇಳಲಿಕ್ಕೆ ಬಹಳ ವಿಷಯಗಳಿವೆ. ನೀರು ಸರಬರಾಜು ಯೋಜನೆ, ಆಡಳಿತವನ್ನು ಚುರುಕುಗೊಳಿಸುವುದು, ವಿದ್ಯಾ ಮಂದಿರ ಯೋಜನೆ ಇತ್ಯಾದಿಗಳಿವೆ. ಐದು ಸಾವಿರ ಶಾಲಾ ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದಾರೆ. ಇವತ್ತು ಶಾಲಾ ಕೊಠಡಿಗಳು ಇಲ್ಲದೆ ಎಷ್ಟೋ ಕಡೆ ಬಹಳ ತೊಂದರೆ ಆಗಿದೆ. ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೂಡ ಬಹಳ ತೊಂದರೆ ಇದೆ. ಈ ಐದು ಸಾವಿರ ಶಾಲಾ ಕೊಠಡಿಗಳನ್ನು ಕೊಡುವುದರಿಂದ ಸ್ವಲ್ಪವಾದರೂ ಉಪಕಾರವಾಗುತ್ತದೆ ಎಂಬುದನ್ನು ಯಾರೂ ಸಹ ಮರೆಯಬಾರದು. ಅದೇ ರೀತಿಯಲ್ಲಿ ಈ ಊಟೋಪಚಾರದ ಬಗ್ಗೆ ೧೫೦ರಿಂದ ೨೦೦ ರೂಪಾಯಿಗಳಿಗೆ ಹೆಚ್ಚು ಮಾಡುತ್ತೇವೆ ಎಂದು ಹೇಳಿದ್ದರು ಆದರೆ ಮಾಡಲಿಕ್ಕೆ ಆಗಲಿಲ್ಲ. ಈಗ ಕೊಡುತ್ತಿರುವ ಸಹಾಯಧನವನ್ನು ೧೦೦ರಿಂದ ೩೦೦ರಷ್ಟು ಹೆಚ್ಚಿಗೆ ಈ ಆಶ್ರಮ ಮತ್ತು ವಸತಿ ಶಾಲೆಗಳಲ್ಲಿ ಕೊಡತಕ್ಕಂಥ ಕಾರ್ಯಕ್ರಮವನ್ನು ಸಹ ಇದರಲ್ಲಿ ಅಳವಡಿಸಿದ್ದಾರೆ. ಇದು ಬಡವಿದ್ಯಾರ್ಥಿಗಳಿಗೆ ಬೇಕಾದಂಥ ಬಹಳ ಒಳ್ಳೆಯ ಕಾರ್ಯಕ್ರಮ. ಇಲ್ಲದಿದ್ದರೆ ಈ ನೂರು ರೂಪಾಯಿ ಎಲ್ಲಿಗೆ ಸಾಕಾಗುತ್ತದೆ ಎಂದು ನಾವು ಇಲ್ಲಿ ಅನೇಕ ಬಾರಿ ಹೇಳಿದ್ದೇವೆ. ಇದನ್ನು ಮುನ್ನೂರು ರೂಪಾಯಿಗೆ ಏರಿಸತಕ್ಕಂಥ ಕಾರ್ಯಕ್ರಮ ಬಹಳ ಸಂತೋಷದ ವಿಚಾರವಾಗಿದೆ. ಅದೇ ರೀತಿಯಲ್ಲಿ ಇನ್ನೂ ಹೇಳುತ್ತಾ ಹೋದರೆ ಅನೇಕ ವಿಚಾರಗಳಿವೆ. ಇನ್ನು ಹೋಮಿಯೋಪಥಿ, ಯುನಾನಿ ಮತ್ತು ಆಯುರ್ವೇದ ವೈದ್ಯರಿಗೆ ತೆರಿಗೆಯನ್ನು ಮಾಫಿ ಮಾಡಿದ್ದಾರೆ. ಇದು ಸ್ವಾಗತಾರ್ಹವಾದಂಥ ವಿಚಾರ. ಇದಕ್ಕಾಗಿ ಮಾನ್ಯ ಅರ್ಥಮಂತ್ರಿಗಳನ್ನು ನಿಜವಾಗಿಯೂ ಪ್ರಶಂಸಿಸಲೇಬೇಕು. ಅದೇ ರೀತಿ ಒಂದು ಲಕ್ಷದ ಒಳಗೆ ವಹಿವಾಟು ಇರತಕ್ಕಂಥವರನ್ನು ಈ ತೆರಿಗೆಯಿಂದ ಬಿಡುಗಡೆ ಮಾಡಿದ್ದಾರೆ. ಇದು ಕೂಡ ಸ್ವಾಗತಾರ್ಹವಾದ ವಿಚಾರ. ಪಾದರಕ್ಷೆಗಳ ಬಗ್ಗೆ ಒಂದೇ ರೀತಿಯಾದ ತೆರಿಗೆ ಹಾಕಿದ್ದಾರೆ. ಕಡಿಮೆ ಕ್ರಯದ ಪಾದರಕ್ಷೆಗೂ ಒಂದೇ ರೀತಿಯಾದ ತೆರಿಗೆ ಎಂಬ ಅಭಿಪ್ರಾಯ ಬರುತ್ತದೆ. ಒಟ್ಟಿನಲ್ಲಿ ಬಡವರಿಗೆ, ಜನಸಾಮಾನ್ಯರಿಗೆ, ಗ್ರಾಮಾಂತರ ಪ್ರದೇಶಗಳ ಜನರಿಗೆ ಇದರಿಂದ ಹೆಚ್ಚಿನ ತೊಂದರೆ ಆಗಲಿಕ್ಕಿಲ್ಲ. ಈ ಆಯವ್ಯಯದಲ್ಲಿ ಶ್ರೀಮಂತರಿಗೆ, ಸ್ವಲ್ಪ ಮೋಜಿ ಮಾಡತಕ್ಕಂಥ ಜನರಿಗೆ ಹೆಚ್ಚಿನ ತೊಂದರೆಯಾಗಬಹುದು ಎಂದು ನಾವು ತಿಳಿದುಕೊಳ್ಳಬಹುದು.

ಈ ಆಯವ್ಯಯ ಪಟ್ಟಿ ಹೆಚ್ಚು ಉಪಯುಕ್ತವಾದಂತಹ, ಶ್ರೀಮಂತರಿಗೆ ಹೆಚ್ಚು ತೆರಿಗೆ ಹಾಕಿರುವಂತಹ, ರೈತರನ್ನು ಮರೆಯದೇ ಇರುವಂತಹ, ನೀರು ಸರಬರಾಜಿಗೆ ಹಣ ಇಟ್ಟಿರುವಂತಹ, ಹಂಪೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವ, ಜಿಡ್ಡುಕಟ್ಟಿದ ಆಡಳಿತವನ್ನು ಚುರುಕುಗೊಳಿಸಲು ಹಣ ತೊಟ್ಟಂಥ, ಅನಾವಶ್ಯಕವಾದ ಅಗ್ಗದ ಸೀರೆ, ಬಟ್ಟೆ ಇತ್ಯಾದಿಗಳನ್ನು

ಕೈಬಿಡತಕ್ಕ ದಿಟ್ಟತನವನ್ನು ತೋರಿಸಿರುವಂತಹ ಈ ಆಯವ್ಯಯವನ್ನು ನಾನು ಸಮರ್ಥನೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಶ್ರೀಮಾನ್ ರಾಜಶೇಖರ ಮೂರ್ತಿಯವರು ಮಂಡಿಸಿದ ೧೯೮೦-೮೧ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ, ಕೆಲವು ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇವರಲ್ಲಿ ಅಪರದೇ ಆದಂತಹ ಭಾಷೆಯಲ್ಲಿ ಈ ಆಯವ್ಯಯವನ್ನು ಬಹಳ ಸುಂದರವಾಗಿ ಅವರು ಹೇಳಿದ್ದಾರೆ. ಅವರ ಹಿನ್ನೆಲೆಯಲ್ಲಿ ಸರ್ಕಾರದ ಮನಸ್ಸು ಏನಿದೆ ಎಂಬುದು ಪ್ರತ್ಯಕ್ಷವಾಗಿ ಪ್ರದರ್ಶನವಾಗಿದೆ. ಜನಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯದ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು, ಜನಸಮುದಾಯದ ಪ್ರತಿಯೊಬ್ಬರಿಗೂ ಅಭಿವೃದ್ಧಿಯ ಫಲವು ದೊರಕುವಂತೆ, ಸಂಪದ್ಭರಿತ ಸಮಾಜವನ್ನು, ಸಮಾನತೆಯ ನೆಲಗಟ್ಟಿನ ಮೇಲೆ ನಿರ್ಮಾಣ ಮಾಡಲು ನಾವು ಕಂಕಣಬದ್ಧರಾಗಿದ್ದೇವೆ ಎಂದು ಹೇಳಿರುವ ಎರಡು ವಾಕ್ಯಗಳನ್ನು ನಾವು ನೋಡಿದಾಗ, ಸರ್ಕಾರದ ಹೃದಯ ಯಾವ ರೀತಿ ಜನಸಾಮಾನ್ಯರ ಹಿತವನ್ನು ರಕ್ಷಿಸುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಬರೀ ಕೆಲವು ಶಬ್ದಗಳನ್ನು ಅಲಂಕಾರಿಕವಾಗಿ ಹೇಳಿಲ್ಲ, ಈ ದಿಸೆಯಲ್ಲಿ ಸ್ವಲ್ಪ ಮುಂದುವರಿದಿರುವುದು ಸ್ವಾಗತಾರ್ಹವಾದುದು ಎಂದು ಹೇಳಬಹುದು. ಮುಖ್ಯವಾಗಿ ಮನುಷ್ಯನ ಜೀವನವನ್ನು ಹಾಳು ಮಾಡುವಂಥ ಅವನನ್ನು ಕಷ್ಟಕ್ಕೆ ಈಡು ಮಾಡುವಂತಹ ಸೇಂದಿ ಮಾರಾಟವನ್ನು ಸಂಪೂರ್ಣವಾಗಿ ರದ್ದು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸೇಂದಿ ಗಿಡ ಇಲ್ಲ, ಇದರಿಂದ ಒಳ್ಳೆಯ ಸೇಂದಿಯೂ ಕೂಡ ಸಿಗುತ್ತಿಲ್ಲ. ಆದರೆ ಸರ್ಕಾರ ಮಾಡಿರುವುದು ಬರೀ ಲೈಸೆನ್ಸ್ ಕೊಡುವುದು. ಈ ರೀತಿಯಾಗಿ ಒಳ್ಳೆಯ ಸೇಂದಿ ಇಲ್ಲದೇ ಇದ್ದರೂ, ವಿಷವನ್ನು ಮಾರುವುದಕ್ಕೆ ಲೈಸೆನ್ಸ್ ಕೊಟ್ಟು ಹಣ ಪಡೆಯುವಂತಹ ದುಷ್ಟ ಪ್ರವೃತ್ತಿ ಸರ್ಕಾರದಲ್ಲಿ ಇತ್ತು. ಯಾವುದೇ ಸರ್ಕಾರ ಇರಲಿ, ಅದು ಕಾಂಗ್ರೆಸ್ ಸರ್ಕಾರ ಇರಲಿ ಅಥವಾ ಕಾಂಗ್ರೆಸ್ಸೇತರ ಸರ್ಕಾರ ಇರಲಿ, ಮಾಡತಕ್ಕಂಥ ಕೆಲಸ ಬಹಳ ಕೆಟ್ಟದ್ದು ಎಂಬುದನ್ನು ನಾನು ಒಪ್ಪುತ್ತೇನೆ ನಿಜವಾದ ಸೇಂದಿ ಸೆರೆ ಇದ್ದರೆ ಅದರಿಂದ ಕೆಲವು ಜನರಿಗೆ ಹಿತವಾಗುತ್ತಿತ್ತು. ಸರ್ಕಾರಕ್ಕೆ ಗೊತ್ತಿದ್ದು, ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಗೊತ್ತಿದ್ದರೂ ವಿಷವನ್ನು ಬೆರೆಸಿ, ನೀರನ್ನು ಮಾರಾಟ ಮಾಡುವಂಥ ಯೋಜನೆಗೆ ಹಣವನ್ನು ಕೊಡುತ್ತಿದ್ದರು. ಇದನ್ನು ಬಂದ್ ಮಾಡಿ ರಾಜಶೇಖರಮೂರ್ತಿಯವರು ನಮ್ಮ ಅಭಿನಂದನೆಗೆ ಪಾತ್ರರಾಗಿದ್ದಾರೆ. ಇದರ ಜೊತೆಗೆ ರಾಜಶೇಖರಮೂರ್ತಿಯವರು ಇನ್ನೂ ಸ್ವಲ್ಪ ಮುಂದಕ್ಕೆ ಹೋಗಿ ಮತ್ತೆ ಯಾವುದೋ ರೀತಿಯಲ್ಲಿ ಟ್ಯಾಕ್ಸ್ ಹಾಕಿ ಸೆರೆಯನ್ನೂ ಬಂದ್ ಮಾಡಿದ್ದರೆ ಅವರಿಗೆ ನಿಜವಾಗಿಯೂ ಇನ್ನೂ ಹೆಚ್ಚಿನ ಅಭಿನಂದನೆಗಳನ್ನು ನಾನು ಸಲ್ಲಿಸುತ್ತಿದ್ದೆ. ಮಹಾತ್ಮ ಗಾಂಧಿಜಿಯವರು, ಹೇಳಿದಂತೆ, ಕರ್ನಾಟಕ ರಾಜ್ಯ ಸಂಪದ್ಭರಿತ ಆಗಬೇಕಾದರೆ, ಈ ಸೇಂದಿ ಮತ್ತು ಸೆರೆಯನ್ನು ಬಂದ್ ಮಾಡಬೇಕೆಂದು ಹೇಳುತ್ತಿದ್ದರು. ಬಹುಶಃ ಈ ಎರಡನ್ನೂ ಒಮ್ಮೆಲೇ ಬಂದ್ ಮಾಡಲಾಗುವುದಿಲ್ಲವೆಂದು, ಒಂದು ಹೆಜ್ಜೆ ಮುಂದೆ ಹಾಕಿದ್ದಾರೆ, ಇನ್ನೊಂದು ಹೆಜ್ಜೆಯನ್ನು ಮುಂದಿನವರೆಗೆ ಬಿಟ್ಟಿದ್ದಾರೆ ಎಂದು ನಾನು ಭಾವನೆ ಮಾಡುತ್ತೇನೆ. ಈ ಸೆರೆಯ ಮೇಲೆ ಹಾಕಿರುವಂತಹ ಒಂದು ಲೀಟರಿಗೆ ೨೦ ರೂಪಾಯಿ ಟ್ಯಾಕ್ಸನ್ನು ೩೦ ರೂಪಾಯಿವರೆಗೆ ಏರಿಸಿದ್ದರೂ ಸಹಿತ ಬಹಳ ಸಂತೋಷವಾಗುತ್ತಿತ್ತು. ಇನ್ನೂ ೧೮ ಕೋಟಿ ರೂಪಾಯಿಗಳ ಉತ್ಪನ್ನ ಬರುತ್ತಿತ್ತು. ಈ ೧೮ ಕೋಟಿ ರೂಪಾಯಿಗಳ ರಾಜಸ್ವದಿಂದ ನಮ್ಮ ಯೋಜನೆಗಳನ್ನು ಹೆಚ್ಚು ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಈ ರೀತಿ ಮಾಡಿದ್ದರೆ ಇನ್ನೂ ಹೆಚ್ಚು ಅಭಿನಂದನೆಗೆ ಪಾತ್ರರಾಗುತ್ತಿದ್ದರು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸ್ನೇಹಿತರೇ, ಇವತ್ತಿನದಿವಸ ಅನೇಕ ಯೋಜನೆಗಳನ್ನು ಘೋಷಿಸಿ ಮಾಡುವಾಗ, ಈ ಯೋಜನೆಗಳ ಮೂರ್ತ ಸ್ವರೂಪ ಜನಗಳಿಗೆ ಮುಟ್ಟಬೇಕಾದರೆ, ಬಹಳ ನಿಧಾನವಾಗುತ್ತಿದೆ. ಈ ಕೆಲಸ ನಮ್ಮ ಅಧಿಕಾರಿಗಳಿಂದ ಆಗಬೇಕು. ನಮ್ಮ ರಾಜ್ಯದ ರೂಪರೇಷೆಯನ್ನು ಜಾರಿಗೆ ತರುವುದು ಅಧಿಕಾರಿಗಳ ಮೇಲೆ ಇದೆ. ಮಂತ್ರಿಗಳು ಮಾಡುವ ಯೋಜನೆಗಳಾಗಲೀ, ಎಂ.ಎಲ್.ಎ.ಗಳು ಮಾಡುವ ಕಾರ್ಯಭಾರಗಳಾಗಲೀ, ಕಾರ್ಯಾಚರಣೆಗೆ ಬರಬೇಕಾದರೆ, ಅಧಿಕಾರಿವರ್ಗ ದಕ್ಷತೆಯಿಂದ ಇರಬೇಕು. ಇವತ್ತು ಆ ದಕ್ಷತೆ ಅಧಿಕಾರಿಗಳಿಗೆ ಇದೆಯೇ ಎಂದು ನಾವು ಆತ್ಮನಿರೀಕ್ಷಣೆ ಮಾಡಿ ನೋಡಬೇಕಾಗಿದೆ. ನಿಜವಾಗಿಯೂ, ಅಂಕಿಸಂಖ್ಯೆಗಳನ್ನು ಪೂರೈಸುವುದು, ಮುಖ್ಯವಾಗಿ ನಾವು ಹಾಕಿರತಕ್ಕ ನಿರ್ಣಯಗಳನ್ನು ಜನರಿಗೆ ಅಳವಡಿಸುವಲ್ಲಿ ಅಧಿಕಾರಿಗಳು ಸಂಪೂರ್ಣವಾಗಿ ಲೋಪವನ್ನು ಮಾಡಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದರೂ ಇವರಿಗೆ ಮೂರು ತಿಂಗಳಿಗೊಮ್ಮೆ ಪಗಾರ ಹೆಚ್ಚು ಮಾಡುವುದು, ವರ್ಷಕ್ಕೊಮ್ಮೆ ಇಂಕ್ರಿಮೆಂಟ್ ಕೊಡುವುದು, ಕೇಂದ್ರದವರು ಹೆಚ್ಚು ಮಾಡಿದರು ಎಂದು ರಾಜ್ಯದವರು, ರಾಜ್ಯದವರು ಹೆಚ್ಚು ಮಾಡಿದರು ಎಂದು ಕೇಂದ್ರದವರು, ಈ ರೀತಿಯಾಗಿ ಕೊನೆಗೆ ಈ ಕರಭಾರವನ್ನು ರೈತರ ಮೇಲೆ ನಾವು ಹಾಕುತ್ತೇವೆ.

೩-೪೫ ಪಿ.ಎಂ.

ಮುಂಜಾನೆ ನಮ್ಮ ರೈತ ಪ್ರತಿನಿಧಿಗಳಿಂದ ನಂಜುಂಡಸ್ವಾಮಿ ಅವರು ಮಾತನಾಡುತ್ತಾ ರೈತ ಭಿಕ್ಷುಕನಲ್ಲ, ನಾವು ನಿಮ್ಮಲ್ಲಿ ಹಣವನ್ನು ಯಾವುದೇ ರೀತಿಯ ಆಸೆಗಾಗಿ ಭಿಕ್ಷೆ ಬೇಡಿ ಕೇಳುತ್ತಿಲ್ಲ. ರೈತರು ಹಕ್ಕಿನಿಂದ ಕೇಳುತ್ತಿದ್ದಾರೆ. ಹಕ್ಕಿನಿಂದ ಕೇಳುವ ರೈತರು, ನೌಕರಶಾಹಿ ಜನರ ಮೇಲೆ ಮಾಲೀಕರು ಎಂಬುದನ್ನು ಮರೆಯಬಾರದು ಎಂದು ಹೇಳಿದರು. ಇವತ್ತು ಯಾವ ರೈತ ಮಾಲೀಕನಾಗಿ ಯಾವ ನೌಕರರ ಮೇಲೆ ಈ ತನ್ನ ಪ್ರಭಾವವನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯ ಇದೆ? ಯಾವ ರೈತನಿಗೆ ನಿಜವಾಗಿ ನ್ಯಾಯ ಸಿಗುತ್ತಿದೆ ಎನ್ನುವುದರ ಕಡೆಗೆ ಸರಕಾರದ ಪ್ರತಿಯೊಬ್ಬ ಮಂತ್ರಿಗಳೂ ಲಕ್ಷ್ಯ ಕೊಡಬೇಕೆಂಬ ಮಾತನ್ನು ಹೇಳುತ್ತೇನೆ. ರೈತರಂದ್ದು ಬಿಡಿ, ಎಂ. ಎಲ್. ಎ. ಗಳು ಬರೆಂಥ ಪತ್ರಗಳಿಗೆ ಉತ್ತರ ಕೊಡಲಾರದಂಥ ಉನ್ಮತ್ತ ಅಧಿಕಾರಿಗಳು ಅನೇಕ ಜನ ನಮ್ಮಲ್ಲಿದ್ದಾರೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಏನು ಸರ್ಕ್ಯುಲರ್ ಕೊಟ್ಟಿದ್ದೀರಿ. ಎಂ.ಎಲ್.ಎ. ಗಳು ಪತ್ರ ಬರೆದರೆ, ಆ ಕಾರ್ಯಕ್ರಮವನ್ನು ಶೀಘ್ರಗತಿಯಿಂದ ಮಾಡಬೇಕು, ಮಾಡುವುದಕ್ಕೆ ಆಗದಿದ್ದರೆ, ಕಾರಣ ಕೊಟ್ಟು ಇಷ್ಟು ದಿವಸದ ಒಳಗಾಗಿ ಪತ್ರ ಬರೆಯಬೇಕು, ಬರೆಯದಿದ್ದರೆ ನಿಮ್ಮನ್ನು ಮನೆಗೆ ಕಳುಹಿಸುತ್ತೇವೆ ಎಂಬ ಹೇಳಿಕೆಯನ್ನು ಕೊಟ್ಟಿದ್ದರೆ ಜನರಲ್ ಅಡ್ಮಿನಿಸ್ಟ್ರೇಷನ್ ಸರಿಯಾಗಿ ಇದೆ ಎಂದು ಹೇಳಬಹುದಾಗಿತ್ತು. ಆದರೆ ಇವತ್ತು ಆ ಕೆಲಸ ಆಗಿಲ್ಲ. ಅಧಿಕಾರಿಗಳನ್ನು ಎಂ. ಎಲ್. ಎ. ಗಳನ್ನೂ ಇಬ್ಬರನ್ನೂ ನಿಲ್ಲಿಸಿದರೆ, ಅಧಿಕಾರಿಗಳು ತಮ್ಮದೇ ಆದ ಸರಕಾರ ಇದೆ ಎಂಬ ಭಾವನೆಗಳನ್ನು ವ್ಯಕ್ತ ಮಾಡುತ್ತಾರೆ. ಕಾಂಗ್ರೆಸ್ ಸರಕಾರವೇ ಇರಲಿ, ಜನತಾ ದಳದ ಸರಕಾರವೇ ಇರಲಿ, ಅದು ಯಾವುದೂ ನಮ್ಮ ಸರಕಾರ ಎಂದು ನಮಗೆ ಗೊತ್ತಾಗುವುದಿಲ್ಲ. ಇದು ಅಧಿಕಾರಿಗಳ ಸರಕಾರ ಆಗಿದೆ. ಅವರು ಹೇಳಿದಂತೆ ಆಗಬೇಕು, ಅವರು ಹೇಳಿದಹಾಗೆ ಆಗಬೇಕು ಎಂಬ ಭಾವನೆ ಜನರಲ್ಲಿ ಬಂದಿದೆ. ಆ ಭಾವನೆಯನ್ನು ತೆಗೆದುಹಾಕಲಿಕ್ಕೆ ಪ್ರಯತ್ನ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ಇನ್ನು ಬಜೆಟ್ ಕೊರತೆಯನ್ನು ನಿವಾರಣೆ ಮಾಡುವ ಬಗ್ಗೆ ಹೇಳುವುದಾದರೆ, ಎರಡು ವರ್ಷಗಳ ಹಿಂದೆ ನೌಕರರ ಪಗಾರವನ್ನು ಹೆಚ್ಚು ಮಾಡಿದ್ದೀರಿ. ಹೆಚ್ಚು ಮಾಡಿದಂಥ ಪಗಾರವನ್ನು ಅವನು ಯಾವುದಕ್ಕೆ ಉಪಯೋಗ ಮಾಡುತ್ತಾನೆ, ಅವನ ಮನೆತನಕ್ಕೆ ಉಪಯೋಗ ಮಾಡುತ್ತಾನೆಯೋ ಎಂದರೆ ಇಲ್ಲ. ಕುಡಿಯುವುದಕ್ಕೆ ಉಪಯೋಗ ಮಾಡುತ್ತಾನೆ, ಕ್ಲಬ್‌ಗೆ ಉಪಯೋಗ ಮಾಡುತ್ತಾನೆ, ಕೆಟ್ಟ ಕೆಲಸಕ್ಕೆ ಉಪಯೋಗ ಮಾಡುತ್ತಾನೆ. ಆದುದರಿಂದ ಅವರ ಮನೆತನದ ಹಿತವನ್ನು ಸಂರಕ್ಷಿಸುವ ದೃಷ್ಟಿಯಿಂದ ೨೦ ಪರ್ಸೆಂಟ್ ಪಗಾರವನ್ನು ನ್ಯಾಷನಲ್ ಸೇವಿಂಗ್ಸ್‌ನಲ್ಲಿ ತೊಡಗಿಸಿ ಅದನ್ನು ಹೆಚ್ಚು ಜನೋಪಯೋಗಿಯಾಗುವ ಕಾರ್ಯಕ್ರಮಗಳಿಗೆ ಉಪಯೋಗ ಮಾಡಿದರೆ, ದೇಶಕ್ಕೆ ಕಲ್ಯಾಣವಾಗುತ್ತದೆ. ಈ ದಿಸೆಯಿಂದ ನಿಮ್ಮ ಬಜೆಟ್‌ನಲ್ಲಿ ಹೇಳಿರುವಂತೆ ಸರಿಯಾಗಿ ಕೆಲಸ ಮಾಡಬೇಕೆಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀರಾವರಿ ಯೋಜನೆಗಳ ಬಗ್ಗೆ ನೀವು ಅನೇಕ ಮಾತುಗಳನ್ನು ಹೇಳಿದ್ದೀರಿ. ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಎಷ್ಟು ಹಣ ಬೇಕೋ ಅಷ್ಟು ಇಲ್ಲ ಎಂದು ಹೇಳಿದ್ದೀರಿ. ಈ ಕೃಷ್ಣಾ ಮತ್ತು ಕಾವೇರಿ ಯೋಜನೆಗಳು ಕೇವಲ ಪ್ರಚಾರಾರ್ಥವಾದ ಯೋಜನೆಗಳಾಗಿದೆಯೆ. ಹೊರತು ನಿಜವಾದ ಕಾರ್ಯಕ್ರಮಗಳಾಗುತ್ತಿಲ್ಲ. ಎರಡು ದಶಕಗಳಿಂದ ನಾವು ನೋಡಿದರೂ ಸಹಿತ, ಇನ್ನೂ ಸಹಿತ ಈ ಕಾರ್ಯಕ್ರಮಗಳು ಎಲ್ಲಿದ್ದವೋ ಅಲ್ಲಿಯೇ ಇವೆ. ಒಮ್ಮೆ ನೀವು ಜೀವ ಗಟ್ಟಿ ಮಾಡಿ. ಕೃಷ್ಣಾನದಿ ಯೋಜನೆಯನ್ನು ಮುಗಿಸುತ್ತೇವೆ, ಕಾವೇರಿ ನದಿ ಯೋಜನೆಯನ್ನು ಮಾಡಿ ಮುಗಿಸಿಬಿಡುತ್ತೇವೆ ಎಂದು ಹೇಳಿ; ಎಲ್ಲಾದರೂ ಒಂದು ಕಡೆ ತೆಗೆದುಕೊಳ್ಳಿ. ಹಣದ ಕೊರತೆ ಇದ್ದರೆ, ರೈತರ ಹೊಲದ ಮೇಲೆ ಸಾಲ ಮಾಡಿ, ರೈತರ ಹೊಲವನ್ನು ಒತ್ತೆ ಇಟ್ಟು ಹಣ ತೆಗೆದುಕೊಂಡು ಪೂರ್ತಿ ಮಾಡಿ. ಅನೇಕ ರೈತರು ಇದಕ್ಕೆ ಒಪ್ಪುತ್ತಾರೆ. ಕೃಷ್ಣಾ ನದಿ ದಂಡೆಯ ರೈತರು ಒಪ್ಪುತ್ತಾರೆ. ಆ ರೀತಿ ಮಾಡಿದರೆ ನಿಮಗೂ ಕೀರ್ತಿ ಬರುತ್ತದೆ. ಆದರೆ ಈ ಯೋಜನೆಗಳನ್ನು ವರ್ಷೇ ವರ್ಷೇ ಮುಂದಕ್ಕೆ ಹಾಕಿದರೆ, ಕಂಟ್ರಾಕ್ಟರ್‌ಗೆ ಹತ್ತು ಪಟ್ಟು ಹಣ ಹೆಚ್ಚು ಹೋಗುತ್ತದೆ. ಇವತ್ತು ಕೊಟ್ಟಂಥ ಕಾರ್ಯಕ್ರಮವನ್ನು ನಾಲ್ಕು ವರ್ಷವಾದರೂ ಮುಗಿಸುವುದಿಲ್ಲ. ಆಮೇಲೆ ಷೆಡ್ಯೂಲ್‌ರೇಟ್ ಹೆಚ್ಚಾಗಿದೆ, ರೊಕ್ಕ ಹೆಚ್ಚು ಕೊಡಬೇಕೆಂದು ಹೇಳುತ್ತಾನೆ. ಅದರ ಮೇಲೆ ಅಧಿಕಾರಸ್ಥರು ಬರೆಯುತ್ತಾರೆ. "It is a fact that schedule has been increased so the charge is increased" ಆಗ ನಾನು ಕಣ್ಣುಮುಚ್ಚಿ ಸಹಿ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ನೀವು ನಿಜವಾಗಿಯೂ ಟೈಮ್ ಬೌಂಡ್ ಪ್ರೋಗ್ರಾಂಗಳನ್ನು ಹಾಕಬೇಕು. ಕಾರ್ಯಕ್ರಮಗಳನ್ನು ಹಾಕುವುದರಲ್ಲಿ ಟೈಮ್ ಬೌಂಡ್ ಇದನ್ನು ಅನುಸರಿಸಬೇಕು. ಉದಾಹರಣೆಗೆ ಹೇಳುವುದಾದರೆ, ಗದಗ್‌ಗೆ ತುಂಗಭದ್ರಾ ವಾಟರ್ ಸಪ್ಲೈ ಸ್ಕೀಂ ಇದೆ. ದೇವರಾಜ ಅರಸು ಅವರು ಇದ್ದಾಗ ಅದಕ್ಕೆ ಫೌಂಡೇಷನ್ ಹಾಕಿದ್ದರು,

ಉದಾಹರಣೆಗೆ ಇದನ್ನು ನಾನು ಹೇಳುತ್ತಿದ್ದೇನೆ. ಇದೊಂದೇ ಅಲ್ಲ, ಇನ್ನೂ ಅನೇಕ ಕಡೆ ಬೇಕಾದಷ್ಟು ಇಂತಹ ಯೋಜನೆಗಳು ಇವೆ. ಆದರೂ ಸಹ ಇವತ್ತಿಗೂ ಅದು ಕಾರ್ಯಗತವಾಗಿಲ್ಲ. ಎಷ್ಟೋ ಜನ ಚೀಫ್ ಇಂಜಿನಿಯರ್ಸ್ ಬಂದು ಹೋದರು, ಅಧಿಕಾರಸ್ಥರು ಬಂದು ಹೋದರು, ಐ. ಎ. ಎಸ್. ಆಫೀಸರ್ಸ್ ಬಂದು ಹೋದರು. ಚೇರ್ಮನ್ ಮಾಡಿದರು, ಕಮಿಟಿ ಮೆಂಬರ್ಸ್ ಮಾಡಿದರು ಚೀಫ್ ಎಂಜಿನಿಯರ್ ಆದರು. ಆದರೂ ಇನ್ನೂ ತನಕ ಕೆಲಸ ಆಗಿಲ್ಲ. ಹಾಗಾದರೆ ನೀವು ಏತಕ್ಕೆ ಅವರನ್ನು ಮನೆಗೆ ಕಳುಹಿಸಲಿಲ್ಲ. ಏತಕ್ಕೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಸ್ವಂತ ಮನೆ ಕಟ್ಟಿದರೆ, ನಾವು ಅವರನ್ನು ಒದ್ದು ಹೊರಗೆ ಹಾಕುತ್ತೇವೆ. ಈ ರೀತಿ ಆದರೆ ಇವತ್ತು ಯಾವ ಯೋಜನೆ ಮಾಡುವುದಕ್ಕೆ ಸಾಧ್ಯ ಇದೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ (ವಿರೋಧ ಪಕ್ಷದ ಉಪನಾಯಕರು).— ಒಂದು ನಿಮಿಷ ತಾವು ದಯವಿಟ್ಟು ಕೇಳ್ಬೇಕಾಗಿ. ಮಾನ್ಯ ಅರ್ಥ ಮಂತ್ರಿಗಳು ಈ ವರ್ಷದ ಬಜೆಟ್ಟನ್ನು ಈ ಸಭೆಯಲ್ಲಿ ಮಂಡನೆ ಮಾಡಿದ್ದಾರೆ. ಅನೇಕ ಜನ ಹಿರಿಯ ಸದಸ್ಯರು, ಈಕಡೆಯಿಂದ, ಆಕಡೆಯಿಂದ, ಬಜೆಟ್ ಬಗ್ಗೆ ತಮ್ಮ ಭಾಷಣವನ್ನು ಮಾಡಿದ್ದಾರೆ. ಸರಕಾರಕ್ಕೆ ಅನೇಕ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ನನಗೆ ಗೊತ್ತಿರುವ ಹಾಗೆ ಹಿರಿಯ ಅಧಿಕಾರಿಗಳು ಯಾವಾಗಲೂ ಸಹಿತ ಇಲ್ಲಿರಬೇಕು. ನಾವು ನಿನ್ನೆಯಿಂದ ನೋಡುತ್ತಿದ್ದೇವೆ. ಅಧಿಕಾರಿಗಳು ಇಲ್ಲಿ ಕುಳಿತು ಮಾನ್ಯ ಸದಸ್ಯರುಗಳು ಮಾತನಾಡುವುದನ್ನು ಗಮನಿಸುವ ಹಾಗೆ ಕಂಡುಬರುತ್ತಿಲ್ಲ. ಇದರಿಂದ ಹೆಚ್ಚು ಆಡಳಿತ ಪಕ್ಷದವರಿಗೆ, ಮಾನ್ಯ ಮಂತ್ರಿಗಳಿಗೆ ಉಪಯೋಗ ಆಗುತ್ತದೆ. ಅಧಿಕಾರಿಗಳು ಇಲ್ಲಿದ್ದರೆ ನಮ್ಮ ಸದನದ ಅಭಿಪ್ರಾಯ ಏನು, ಸದಸ್ಯರ ಅಭಿಪ್ರಾಯ ಏನು ಎನ್ನುವುದು ಗೊತ್ತಾಗುತ್ತದೆ. ವಿಶೇಷವಾಗಿ ಇಲಾಖಾ ಮುಖ್ಯಸ್ಥರು, ಅರ್ಥ ಇಲಾಖೆಗೆ ಸಂಬಂಧಪಟ್ಟವರು, ಅಬಕಾರಿ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು, ಮುಖ್ಯ ಮಂತ್ರಿಗಳು ಇದ್ದಾಗ ಇರುತ್ತಾರೆ, ಆಮೇಲೆ ಹೊರಟು ಹೋಗುತ್ತಾರೆ. ನಾವೆಲ್ಲಾ ಸದಸ್ಯರು ಮಾತನಾಡತಕ್ಕಂಥಾದ್ದು ಅವರ ಕಿವಿಗೆ ಬಿದ್ದರೆ ಅನುಕೂಲ ಆಗುತ್ತದೆ ಎಂಬುದು ನನ್ನ ಅಭಿಪ್ರಾಯ. ಮಾನ್ಯ ಸಚಿವರು ಹಾಗೂ ಸರ್ಕಾರ ಇದನ್ನು ಗಮನಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಅಧಿಕಾರಸ್ಥರು ಇಲ್ಲಿ ಇರಬೇಕೆನ್ನುವುದನ್ನು ನಾನೂ ಸಹ ಒಪ್ಪುತ್ತೇನೆ. ನಾವು ಅಧಿಕಾರದಲ್ಲಿ ಹಿಂದೆ ಇದ್ದಂತಹ ಕಾಲದಲ್ಲಿ ಸಹ ಅಧಿಕಾರಿಗಳು ಇಲ್ಲಿ ಹಾಜರು ಇರಬೇಕೆಂದು ಹೇಳಿದ್ದೆವು. ಅವರು ಇಲ್ಲದಿದ್ದರೆ ನಾವು ಬರೀ ಇಲ್ಲಿ ಎಷ್ಟು ಬಡಕೊಂಡರೂ ಅವರು ಏನೂ ಮಾಡುವುದಿಲ್ಲ. ಅವರು ಇಲ್ಲಿ ಇದ್ದರೆ ನಮ್ಮ ಹಾವ ಭಾವಗಳ ಮೇಲೆ, ನಮ್ಮ ನಡೆ ನುಡಿಗಳ ಮೇಲೆ ಸಹ ಅಧಿಕಾರಸ್ಥರು ಲಕ್ಷ್ಯವಿಟ್ಟು ಅವರು ಮಾಡುವಂತಹ ತಪ್ಪುಗಳನ್ನು ತಿದ್ದಿಕೊಳ್ಳಬಹುದು. ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಏನಾದರೂ ಹೇಳಿಕೆ ಕೊಟ್ಟರೆ, ಮಂತ್ರಿಗಳ ವಾಕ್ಯವೇ ಆರ್ಡರ್ ಎಂದು ತಿಳಿದುಕೊಂಡು ಇಂಪ್ಲಿಮೆಂಟ್ ಮಾಡಬೇಕೆಂದು ಹಿಂದೆ ನಾವು ಆದೇಶ ಕೊಟ್ಟಿದ್ದೆವು. ಶ್ರೀಮಾನ್ ರಾಜಶೇಖರಮೂರ್ತಿಯವರು ಅಂತಹ ಆದೇಶವನ್ನು ಈಗ ಕೊಟ್ಟರೆ ಚೆನ್ನಾಗಿ ಕೆಲಸ ಆಗುತ್ತದೆ ಎಂದು ನಾನು ಭಾವನೆ ಮಾಡುತ್ತೇನೆ. ಇವತ್ತಿನ ದಿವಸ ಅಧಿಕಾರಸ್ಥರು ಈ ಕಡೆ ತಲೆ ಸಹ ಹಾಕುವುದಿಲ್ಲ. ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಿರಲಿ, ಮಂತ್ರಿಗಳು ಭಾಷಣ ಮಾಡುತ್ತಿರಲಿ, ಅವರು ಯಾರೂ ಇರುವಂತಿಲ್ಲ. ಅವರಿಗೆ ಪ್ರತಿ ತಿಂಗಳು ಒಂದನೇ ತಾರೀಖಿನೊಳಗೆ ಕೊಡಬೇಕಾದಂತಹ ಪಗಾರ ಕೊಡಲೇಬೇಕು, ಟ್ರಜರಿಯಲ್ಲಿ ಹಣವಿಲ್ಲದೆ ಖಾಲಿ ಇದ್ದರೂ ಸಹ ಸಾಲ ಮಾಡಿ ಆದರೂ ಅವರಿಗೆ ಪಗಾರ ತಂದು ಕೊಡಲೇಬೇಕು. ಅವರಿಗೇನು ಚಿಂತೆ? ಮಳೆ ಇಲ್ಲದಿದ್ದರೇನು, ಬೆಳೆ ಆಗದಿದ್ದರೇನು? ಆಗಾಗ ಪಗಾರ ಹೆಚ್ಚು ಮಾಡುತ್ತಿರಬೇಕು. ಈ ದೃಷ್ಟಿಯಿಂದ ತಾವು ಅಧಿಕಾರಸ್ಥರ ಮೇಲೆ ನಿಗಾ ಇಟ್ಟು ಆಡಳಿತದಲ್ಲಿ ಎಫಿಷಿಯನ್ಸಿ ಇಂಟರ್‌ಡ್ಯೂಸ್ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಅಧಿಕಾರಸ್ಥರು ಕ್ಲಬ್‌ಗಳಲ್ಲಿ ಜೂಜಾಟ ಆಡುವುದರಲ್ಲಿ ಬಹಳ ಮಂದಿ ಇರುತ್ತಾರೆ. ಅವರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ವಿಜಿಲೆನ್ಸ್‌ನವರು ಮತ್ತು ಲೋಕಾಯುಕ್ತರವರು ಏತಕ್ಕೆ ಇದ್ದಾರೆ ? ಲೋಕಾಯುಕ್ತರವರಿಗೆ ಅಕ್ನಾಲೆಡ್ಜ್‌ಮೆಂಟ್ ಕೊಟ್ಟರೆ ಮಾತ್ರ ಹೋಗಿ ಹಿಡಿಯುತ್ತಾರೆ ಇದಕ್ಕೆ ಲೋಕಾಯುಕ್ತ ಬೇಕೇ ? ನಾನು ಹೇಳುತ್ತೇನೆ ಅವರ ನಡವಳಿಕೆಗಳಲ್ಲಿ ಅವರು ನಡೆಸತಕ್ಕಂಥ ಕೆಲಸಕಾರ್ಯಗಳಲ್ಲಿ ನಿಗಾ ಇಟ್ಟಿರಬೇಕು. ಅಧಿಕಾರಸ್ಥರ ಮೇಲೆ ನಿಗಾ ಇಟ್ಟು ಅವರ ದಕ್ಷತೆಯನ್ನು ಪರಿಶೀಲನೆ ಮಾಡಿನೋಡಿದರೆ ನೂರಕ್ಕೆ ತೊಂಭತ್ತರಷ್ಟು ಜನ ಅಧಿಕಾರಸ್ಥರು ಮನೆಗೆ ಹೋಗುತ್ತಾರೆ. ಒಂದು ಪೇಪರ್ ಯಾವಾಗ ಬಂತು ? ಯಾವಾಗ ಹೋಯಿತು ಎನ್ನುವುದನ್ನು ನೋಡಿದರೆ ಸಾಕು; ಅವರ ದಕ್ಷತೆ ಗೊತ್ತಾಗುತ್ತದೆ. ಆದ್ದರಿಂದ ತಾವು ಅಧಿಕಾರಸ್ಥರಲ್ಲಿ ಎಫಿಷಿಯನ್ಸಿ ಅನ್ನು ಇಂಟ್ರಡ್ಯೂಸ್ ಮಾಡಿದರೆ ನಿಮ್ಮ ಅಡ್ಮಿನಿಸ್ಟ್ರೇಷನ್ ಸರಿಯಾಗುತ್ತದೆ. ಅಡ್ಮಿನಿಸ್ಟ್ರೇಷನ್ ಸರಿಯಾದ ಮೇಲೆ ಉಳಿದ

ನಿಮ್ಮ ಪ್ಲಾನ್ ಮತ್ತು ಎಸ್ಟಿಮೇಟ್ ಸರಿಯಾಗುತ್ತದೆ. ನಾನು ಇಷ್ಟು ಮಾತುಗಳನ್ನು ಹೇಳಿದ ಮೇಲೆ ಇನ್ನು ಒಂದೊಂದಾಗಿ ವಿಷಯಗಳ ಮೇಲೆ ಬರುತ್ತೇನೆ. ನನ್ನ ಸ್ನೇಹಿತರಾದ ದಿವಂಗತ ಅಬ್ದುಲ್‌ನಜೀರ್‌ಸಾಬ್‌ರವರು ಈಗ ಇಲ್ಲ. ಅವರು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಹಾಗೂ ನ್ಯಾಯ ಪಂಚಾಯತ್ ಮಸೂದೆ ತರುವಾಗ ಬಹಳ ಕಷ್ಟಪಟ್ಟರು. ಅವರು ಪಶ್ಚಿಮ ಬಂಗಾಲಕ್ಕೆ ಹೋಗಿ ಕಮ್ಯುನಿಸ್ಟರ ಮಾದರಿಯಲ್ಲಿ ಮಸೂದೆ ತಂದರು. ಆಗ ನಾನು ಅವರಿಗೆ ಹೇಳಿದೆ ನನ್ನ ಮಾತಿನ ಮೇಲೆ ವಿಶ್ವಾಸವಿತ್ತೋ ಏನೋ ಅದಕ್ಕೆ ಅವರಿಗೆ ನೀವು ಮಾಡುತ್ತಿರುವುದು ತಪ್ಪು, ಇದು ಸರಿಯಾಗುವುದಿಲ್ಲ, ಜನರು ಇದರಿಂದ ಬಹಳ ತೊಡಕಿಗೆ ಸಿಕ್ಕಿಹಾಕಿಕೊಳ್ಳುತ್ತಾರೆ ಚನ್ನಾಗಿ ವಿಚಾರ ಮಾಡಿ ಜಾರಿಗೆ ತರಬೇಕೆಂದು ಹೇಳಿದೆ. ಆದರೂ ಅವರಲ್ಲಿ ಒಂದು ವಿಶ್ವಾಸವಿತ್ತು; ಅದಕ್ಕೆ ಮಾಡಿದರು ಅವರು ತಪ್ಪು ಮಾಡಿದರು ಎಂದು ನಾನು ಹೇಳುತ್ತಿಲ್ಲ. ಅವರು ಒಂದು ಕಮಿಟ್‌ಮೆಂಟ್ ಮಾಡಿ ಕೊಂಡಿದ್ದರು; ಅದಕ್ಕೆ ಅವರು ಅದನ್ನು ವಿರೋಧ ಮಾಡಲಿಕ್ಕೆ ಆಗದೆ ಜಾರಿಗೆ ತಂದರು, ಆದರೆ ಇವತ್ತು ಏನಾಗಿದೆ? ಮಾನ್ಯ ರಾಜಶೇಖರಮೂರ್ತಿಯವರೇ ನಾನು ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಬೋರ್‌ವೆಲ್ ವಿಷಯ. ಒಂದು ಬೋರ್‌ವೆಲ್‌ಗೆ ಒಂದು ಅಡಿ ತೂತು ಕೊರೆಯು ವುದಕ್ಕೆ ಖಾಸಗಿಯವರಿಗೆ ೨೪ ರಿಂದ ೨೮ ರೂಪಾಯಿಗಳು ಕೊಟ್ಟರೆ ಅವರು ತೂತು ಕೊರೆಯುತ್ತಾರೆ. ಆದರೆ ನೀವು ಎಷ್ಟು ಕೊಡುತ್ತಿದ್ದೀರಿ ? ನಿಮ್ಮ ಷೆಡ್ಯೂಲ್ ರೇಟ್ ಪ್ರಕಾರ ೬೪ ರೂಪಾಯಿಗಳನ್ನು ಕೊಡುತ್ತಿದ್ದೀರಿ. ನಿಮ್ಮ ಷೆಡ್ಯೂಲ್ ರೇಟ್ ಬಿಟ್ಟು ೨೪ ರೂಪಾಯಿ ಕೊಡುವುದಕ್ಕೆ ಆಗುವುದಿಲ್ಲ. ನೀವು ೬೪ ರೂಪಾಯಿಗಳನ್ನು ಕೊಡಬೇಕು. ಇದರಲ್ಲಿ ಅಧಿಕಾರಸ್ಥರಿಗೆ ಎಷ್ಟು ಪಾಲು ಬರುತ್ತದೆ. ಅವರಿಗೆ ಎಷ್ಟು ಹೋಗುತ್ತದೆ. ಜಿಲ್ಲಾ ಪರಿಷತ್ತು ಅಧ್ಯಕ್ಷರಿಗೆ ಎಷ್ಟು ಬರುತ್ತದೆ ಇದನ್ನೆಲ್ಲಾ ಆಲೋಚನೆ ಮಾಡಿ ಎಂದು ಹೇಳುತ್ತೇನೆ. ಇದನ್ನು ತಾವು ಸುಧಾರಣೆ ಮಾಡದಿದ್ದರೆ ಇನ್ನು ಇಂತಹ ೧೦ ಜಿಲ್ಲಾ ಪರಿಷತ್ ಮಸೂದೆ ಜಾರಿಗೆ ತಂದು ಅಧಿಕಾರವನ್ನು ಜನಗಳ ಕೈಯಲ್ಲಿ ಕೊಟ್ಟರೂ ಸಹ ಏನೂ ಪ್ರಯೋಜನವಾಗುವುದಿಲ್ಲ. ನೀವು ಯಾರ ಕೈಯಲ್ಲಿ ಅಧಿಕಾರ ಕೊಟ್ಟಿದ್ದೀರಿ ? ಲಂಚಕೋರ ಅಧಿಕಾರಸ್ಥರ ಕೈಯಲ್ಲಿ ಅಧಿಕಾರ ಕೊಟ್ಟಿದ್ದೀರಿ, ಜನಗಳ ಕೈಯಲ್ಲಿ ಅಧಿಕಾರ ಕೊಟ್ಟಿಲ್ಲ. ತಾವು ಇದನ್ನು ಆಲೋಚನೆ ಮಾಡಿ. ಈ ಕೆಲಸವನ್ನು ಈಗ ಎಲ್ಲಾ ಜಿಲ್ಲಾಪರಿಷತ್ತಿನವರು ಮಾಡುವುದಕ್ಕೆ ಹೊರಟಿದ್ದಾರೆ. ಇದನ್ನು ತಾವು ಲಕ್ಷ್ಯದಲ್ಲಿಟ್ಟು ಕೆಲಸ ಮಾಡಬೇಕು. ಇನ್ನು ಧಾರವಾಡ ಜಿಲ್ಲಾ ಪರಿಷತ್ತಿನಲ್ಲಿ ಡಾಕ್ಟರ್ ರೆಡ್ಡಿ ಎನ್ನುವವರು, ನನಗೆ ಬರೆದಿರುವ ವರದಿಯ ಪ್ರಕಾರ ಲಕ್ಷಾಂತರ ರೂಪಾಯಿಗಳ ಔಷಧಿಯನ್ನು ಖರೀದಿ ಮಾಡಿದ್ದಾರೆ. ಆ ಔಷಧಿಗಳೆಲ್ಲವೂ ಟೈಮ್ ಬಾರ್ ಆಗಿರು ವಂತಹ ಔಷಧಿಗಳು. ಸುಮಾರು ೬೦ ಲಕ್ಷ ರೂಪಾಯಿಗಳ ಔಷಧಿ ಎಂದು ಹೇಳುತ್ತಾರೆ. ಹೌದೋ ಅಲ್ಲವೋ ಸರಿಯಾಗಿ ನನಗೆ ಗೊತ್ತಿಲ್ಲ. ಅಂಕಿಅಂಶಗಳು ಸರಿಯಾಗಿ ನನ್ನಲ್ಲಿ ಇಲ್ಲ. ಲಕ್ಷಾಂತರ ರೂಪಾಯಿಗಳ ಔಷಧಿಯನ್ನು ಟೈಮ್ ಮುಗಿದಿದ್ದರೂ ಸಹ ಕೊಂಡುಕೊಂಡಿದ್ದಾರೆ. ತಾವು ಈ ಬಗ್ಗೆ ಕೂಲಂಕಷವಾಗಿ ಅಭ್ಯಾಸ ಮಾಡಬೇಕು. ಅವರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳ ಬೇಕೆನ್ನುವುದನ್ನು ಸಹ ನಾನು ತಮಗೇ ಬಿಡುತ್ತೇನೆ. ಸುಮಾರು ೨೦ ಲಕ್ಷ ರೂಪಾಯಿಗಳ ಅವ್ಯವಹಾರವಾಗಿದೆ.

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ.—ಇನ್ನೂ ಹೆಚ್ಚು ಹಣದ ಅವ್ಯವಹಾರವಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಸರಿಯಾದ ಅಂಕಿ ಸಂಖ್ಯೆಗಳು ಗೊತ್ತಿಲ್ಲವೆ ಹೇಳಬಾರದೆಂದು ಲಕ್ಷಗಟ್ಟಲೆ ಆಗಿದೆ ಎಂದು ನಾನು ಅಷ್ಟೇ ಹೇಳಿದೆ ಸುಮಾರು ೬೦ ಲಕ್ಷದ ಅವ್ಯವಹಾರ ಆಗಿದೆಯೆಂದು ಹೇಳಿದ್ದಾರೆ, ಅದು ಎಷ್ಟೇ ಇರಲಿ, ಇಪ್ಪತ್ತಾದರೂ ಇರಬಹುದು, ೬೦ ಆದರೂ ಇರಬಹುದು. ನೀವು ಎಷ್ಟೋ ಹಣವನ್ನು ಖರ್ಚು ಮಾಡಿದ್ದೀರಿ, ನೌಕರ ದಾರರಿಗೆ ಕೊಟ್ರಿ, ಔಷಧಿಗೆ ಕೊಟ್ರಿ, ಹರಿಜನರ ಹೆಸರಿನ ಮೇಲಂತೂ ಹೇಳಲಾರದಷ್ಟು ಅವ್ಯವಹಾರವಾಗಿದೆ. ಹರಿಜನ ಅಭಿವೃದ್ಧಿ ಕಾರ್ಯಕ್ರಮ ಗಳಿಂದ ಒಬ್ಬ ಹರಿಜನರ ಅಭಿವೃದ್ಧಿಯೂ ಆಗಿಲ್ಲ. ತಾವು ಚೆನ್ನಾಗಿ ವಿಚಾರ ಮಾಡಿ ನೋಡಿ. ಹರಿಜನರ ಅಭಿವೃದ್ಧಿಯಾಗಿದೆಯೆಂದರೆ ನಾವು ನಿಜವಾಗಿ ಶಿರಸಾವಹಿಸಿ ಒಪ್ಪಿಕೊಳ್ಳುತ್ತೇವೆ. ನೀವು ಕಷ್ಟಪಟ್ಟು ಬಜೆಟ್ ತಯಾರು ಮಾಡಿದ ಮೇಲೆ ಎಲ್ಲಾ ಹಣ ಹೋಗುವುದು ಬೇರೆಯವರಿಗೆ. ಇಂಥಾ ಅಪವ್ಯಯವಾಗುವುದನ್ನು ತಡೆಗಟ್ಟದಿದ್ದರೆ ನೀವು ಎಷ್ಟೇ ಬಜೆಟ್‌ನ್ನು ಉಳಿಸಿದರೂ ಸಹಿತ ವ್ಯರ್ಥವಾದೀತೆಂದು ನಾನು ಹೇಳಬೇಕಾಗುತ್ತದೆ, ಆಮೇಲೆ, ಮುಸಲ್ಮಾನರಿಗೆ ಹಿತ ಮಾಡುತ್ತೇವೆಂದು ನಮ್ಮ ಜನತಾ ದಳದವರು, ಮಾನ್ಯ ಸಿಂಧ್ಯಾ ಸಾಹೇಬರ ಸರ್ಕಾರದವರು ಒಂದು ಯೋಜನೆಯನ್ನು ಮಾಡಿದರು. ಮುಸಲ್ಮಾನರ ಸಲುವಾಗಿ ಒಂದು ಅಸೋಸಿಯೇಷನ್ ಮಾಡಿದರು, ಸಂಘ ಮಾಡುತ್ತೇ ವೆಂದು ಮಾಡಿದರು, ಕಾರ್ಪೊರೇಷನ್ ಮಾಡಿದರು, ಇದಾದನಂತರ ಯಾವ ಮುಸಲ್ಮಾನನಿಗೆ ಒಂದು

ಉದ್ಯೋಗ ಹಾಕಿಕೊಟ್ಟಂತ ಉದಹಾರಣೆ ತಮಗೆ ಗೊತ್ತಿದ್ದರೆ ನನಗೆ ಹೇಳಿ. ನಾನು ನನ್ನ ತಪ್ಪು ಒಪ್ಪಿಕೊಳ್ಳುತ್ತೇನೆ. ಏನೂ ಆಗಿಲ್ಲ. ಮುಸಲ್ಮಾನರಿಗೆ ಮಾಡುತ್ತೇವೆಂದು ಬಾಯಲ್ಲಿ ಹೇಳಿದ್ದಾರೆಯೇ ಹೊರತು ಯಾವ ಮುಸಲ್ಮಾನರಿಗೂ ಪ್ರಯೋಜನವಾಗಲಿಲ್ಲ. ಆ ಬಜೆಟ್‌ನಲ್ಲಿ ಮಾತ್ರ ಮುಸಲ್ಮಾನರ ಹೆಸರನ್ನು ಹೇಳಲಾಗಿದೆ. ಮುಸಲ್ಮಾನರು ಇನ್ನೂ ಗುಡಿಸಲಿನಲ್ಲಿ ಬಡವನಾಗಿ ಹಾಗೇ ಉಳಿದಿದ್ದಾನೆ. ಹೀಗಾಗುವುದರಿಂದ ನಮ್ಮ ಬಜೆಟ್ ಸೋರಲಿಕ್ಕೆ ಹತ್ತಿದೆಯೆನ್ನುವಂಥ ಮಾತನ್ನು ನಾನು ಹೇಳುತ್ತೇನೆ, ನಮ್ಮ ಕಾಲಕ್ಕೆ ಒಂದು ಶೆಡ್ಯೂಲ್ಡ್ ಕ್ಯಾಸ್ಟ್ ಫೈನಾನ್ಸ್ ಕಾರ್ಪೊರೇಷನ್‌ನ್ನು ಮಾಡಿದರು. ಅದಕ್ಕೆಲ್ಲಾ ಹಣವನ್ನು ಕೊಟ್ರು. ಜನತಾದಳದವರು ಬಂದು ಇನ್ನೂ ಹೆಚ್ಚು ಹಣವನ್ನು ಕೊಟ್ರು. ಆದರೆ ಇನ್ನೂ ತನಕ ಅವರ ಅಭಿವೃದ್ಧಿಯಾಗಲಿಲ್ಲ. ಯಾರೋ ಒಬ್ಬರನ್ನು ಇದಕ್ಕೆ ಛೇರ್ಮನ್‌ರಾಗಿ ನೇಮಿಸಿದರು. ಆ ಛೇರ್ಮನ್‌ರು ಒಂದು ಸಾರಿ ಸಾಲಕ್ಕೆ ಅರ್ಜಿ ಹಾಕ್ರಿ ಎಂದು ಅರ್ಜಿ ಕರೆದ. ಅರ್ಜಿಗೆ ಹತ್ತು ರೂಪಾಯಿಗಳು. ೧೦ ರೂಪಾಯಿ ಕೊಟ್ಟು ಅರ್ಜಿ ಹಾಕಿದವರ ೧೦ ರೂಪಾಯಿಯೂ ಹೋಯಿತು, ಸಾಲವೂ ಸಿಗಲಿಲ್ಲ. ಅವರು ಇನ್ನೂ ಬಡವರಾಗಿಯೇ ಉಳಿದಿದ್ದಾರೆ. ಇದನ್ನು ಮಾನ್ಯ ಸಚಿವರು. ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನಾಲ್ಕು ಜನ ಹರಿಜನ ಮಂತ್ರಿಗಳು ಇದ್ದಾರೆ. ಈ ನಾಲ್ಕು ಜನ ಸಾಲದಾಗಿ ಇನ್ನೂ ಒಬ್ಬಬ್ಬರು ಹಣಕಿ ಹಾಕುತ್ತಿದ್ದಾರೆ. ಇಂಥಾ ಹೊತ್ತಿನಲ್ಲಿ ಹರಿಜನರ ನಿಜವಾದ ಅಭಿವೃದ್ಧಿ ಮಾಡಿದರೆ ನಿಮಗೆ ದೇವರು ಕೀರ್ತಿಯನ್ನು ಕೊಡುತ್ತಾನೆ. ಈ ರೀತಿ ಕೆಲಸ ಮಾಡಬೇಕೆಂದು ಕಳಕಳಿಯಿಂದ ತಮ್ಮನ್ನು ಕೇಳಿಕೊಳ್ಳುತ್ತೇನೆ. ೩೧ನೇ ಮಾರ್ಚಿ, ಈ ದಿನಾಂಕ ಮಹಾ ಡೇಂಜರಸ್ ಡೇ. ನಿಮ್ಮ ಬಜೆಟ್‌ನ್ನು ಪಾಸ್ ಮಾಡುವಂಥ ದಿನ ಇದು. ಆಗದ ಕೆಲಸಗಳೆಲ್ಲ ಅವತ್ತು ಆಗಿಬಿಡುತ್ತವೆ. ಇದರ ಬಗ್ಗೆ ತಾವು ನಿಗಾ ವಹಿಸಿ, ಮಾರ್ಚಿ ೩೧ಕ್ಕೆ ಯಾವುದೇ ಕೆಲಸ ಇರಲಿ, ಅದಕ್ಕೆ ಖರ್ಚು ಮತ್ತೆ ಅಧಿಕಾರಸ್ಥರು ತಮ್ಮದೇನು ಐತೋ ಅದನ್ನು ತೆಗೆದುಕೊಳ್ಳುತ್ತಾರೋ ಅದರ ಬಗ್ಗೆ ನಿಗಾ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಯಾವುದಾದರು ದೇಶದ ದೃಷ್ಟಿಯಿಂದ ರಾಜ್ಯದ ದೃಷ್ಟಿಯಿಂದ ಮತ್ತು ಯೋಜನೆಯ ದೃಷ್ಟಿಯಿಂದ ಮಹತ್ವವನ್ನು ಕೊಡಬೇಕು. ನಿಜವಾಗಿ ಅಧಿಕಾರಸ್ಥರ ಕೈಯನ್ನು ಬೆಚ್ಚಗೆ ಮಾಡುವ ದೃಷ್ಟಿಯಿಂದ ಅನೇಕ ಯೋಜನೆಗಳನ್ನು, ಅನೇಕ ಸಬ್ಸಿಡಿಗಳನ್ನು ಅನೇಕ ಗ್ರ್ಯಾಂಟ್‌ಗಳನ್ನು ಖರ್ಚು ಹಾಕಿ ಮತ್ತೆ ಸರ್ಕಾರವನ್ನು ಬರಿದು ಮಾಡುತ್ತಾರೆ. ಇವತ್ತು ಸೆಂಟ್ರಲ್ ಸಬ್ಸಿಡಿ ಬಂದು ಒಂದು ವರ್ಷವಾದರೂ ಸಹಿತ ಇನ್ನೂ ಇಂಡಸ್ಟ್ರಿಯಲಿಸ್ಟ್‌ಗಳಿಗೆ ಹಣ ಕೊಡದೇ ಇದ್ದರೆ ನಾವು ಯಾವ ರೀತಿ ಇಂಡಸ್ಟ್ರಿಗಳನ್ನು ಸುಧಾರಣೆ ಮಾಡುತ್ತೇವೆ ? ಇವತ್ತು ನೀವು ಫೈನಾನ್ಸ್ ಮಿನಿಸ್ಟರ್ ಆಗಿದ್ದೀರಿ. ಹಿಂದೆ ಇಂಡಸ್ಟ್ರಿಯಲ್ ಮಿನಿಸ್ಟರ್ ಕೂಡ ಆಗಿದ್ರಿ. ಇಂಡಸ್ಟ್ರಿಯಲ್ ಮಿನಿಸ್ಟರ್ ಆಗಿದ್ದಾಗ ತಮಗೆ ಅನುಭವ ಇದೆ. ಬಹಳ ಹಿಂದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮತ್ತು ಮಾನ್ಯ ವೀರೇಂದ್ರ ಪಾಟೀಲರು ಹೊರಗಿನವರುಗಳನ್ನು ಆಹ್ವಾನ ಮಾಡಿ ಇಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿಸಿದರು.

ಆಗ ನಾವು ಅವರಿಗೆ ಹಾಸ್ಯ ಮಾಡುತ್ತಿದ್ದೆವು. ಏನ್ರಿ ಹೊರಗಿನವರನ್ನು ಕರೆದು ಇಂಡಸ್ಟ್ರಿಗಳನ್ನು ಮಾಡಿಸುತ್ತಿದ್ದೀರಿ, ನಮ್ಮಲ್ಲಿ ಯಾರೂ ಇಲ್ಲವೇ ಎಂದು. ಇಂಡಸ್ಟ್ರಿ ಮಾಡುತ್ತೇವೆಂದು ಬಂದವರಿಗೆ ಸರ್ಕಾರದವರು ಕೊಡ ಮಾಡಿದಂಥ ಸಬ್ಸೀಡಿಯನ್ನು ಕೊಡದಿದ್ದರೆ ಹೇಗೆ ? ಬೆಲ್ಲದ ಗಣಪ ಬೆಲ್ಲದ ನೈವೇದ್ಯ ಮಾಡಿಕೊಡಬೇಕು ಎಂದ ಹಾಗಾಗುತ್ತದೆ. ನಮ್ಮಲ್ಲಿ ಹಣ ಇಲ್ಲ. ಬಜೆಟ್ ಪ್ರಾವಿಷನ್ ಇಲ್ಲವೆಂದರೆ ಹೇಗೆ ? ಬಜೆಟ್ ಪ್ರಾವಿಷನ್ ಮಾಡುವವರು ಯಾರು ? ಮಂತ್ರಿಗಳೇ ? ಅಧಿಕಾರಸ್ಥರೇ ? ನೀವು ಏನು ಮಾಡಿದರೂ ಸಹಿತ ಬಜೆಟ್‌ನಲ್ಲಿ ಹಣ ಇಲ್ರಿ ಎಂದು ಹೇಳಿದರೆ ಹೇಗೆ ? ನಿಜವಾಗಿ ಹಣಕ್ಕಿಂತ ಮನಸ್ಸು ಇರಬೇಕು. ಮನಸ್ಸು ಇದ್ದರೆ ಎಲ್ಲವನ್ನೂ ಮಾಡಬಹುದು. ಒಬ್ಬ ಎಂ.ಎಲ್.ಸಿ.,ಗೆ ಬಡ್ಡಿ ಇಲ್ಲದ ಸಾಲ ಎಂದು ಮೂರು ಕೋಟಿ ರೂಪಾಯಿಗಳನ್ನು ಕೊಟ್ಟರು. ಅವ ಎಲ್ಲ ಹಾಕಿಕೊಂಡು ಹೋಗಿಬಿಟ್ಟ. ಯಾರಾದರೂ ೫೦ ರೂಪಾಯಿ ತಿಂದ ಅಂದರೆ ಅದನ್ನು ಮಹಾ ದೊಡ್ಡ ಅಪರಾಧ ಮಾಡಿಬಿಟ್ಟ ಎಂದು ತೊಂದರೆ ಕೊಡುತ್ತಾರೆ. ಇಂಥಾ ಅಧಿಕಾರಸ್ಥರಿಗೆ ಯಾವ ರೀತಿಯಿಂದ ಪ್ರೋತ್ಸಾಹ ಸಿಗುತ್ತದೆಂದು ನಾನು ಕೇಳುತ್ತೇನೆ ? ಅದು ನಿಜ. ನೀವು ಹೇಳಬಹುದು. ಏನೆಂದರೆ, ಅಧಿಕಾರಸ್ಥರನ್ನು ಬಿಟ್ಟು ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಎಂದು ನಾನು ಒಪ್ಪುತ್ತೇನೆ. ಅಧಿಕಾರಸ್ಥರನ್ನು ಬಿಟ್ಟು ಏನೂ ಮಾಡುವುದಕ್ಕಾಗುವುದಿಲ್ಲ. ಇದು ಗಂಡ ಹೆಂಡಿರ ಸಂಸಾರ ಇದ್ದ ಹಾಗೆ. ಒಂದು ವೇಳೆ ಹೆಂಡತಿಯಾದವಳು ಅಡ್ಡ ದಾರಿ ಹಿಡಿದಳು. ಎಂದರೆ ಅವಳನ್ನು ಸರಿದಾರಿಗೆ ತರತಕ್ಕಂಥ ಕರ್ತವ್ಯವು ಗಂಡನ ಪಾಲಿನದ್ದು. ಆ ಕೆಲಸವನ್ನು ಗಂಡನಾದವನು ಮಾಡದೇ ಬೇರೆ ಮಾರ್ಗವು ಇರುವುದಿಲ್ಲ. ಹಾಗೆಯೇ ತಪ್ಪು ದಾರಿಯಲ್ಲಿ ಸಾಗುತ್ತಿರುವ ನಮ್ಮ ಅಧಿಕಾರಿಗಳನ್ನು ಸರಿಯಾದ ಮಾರ್ಗಕ್ಕೆ ತರುವ ಪ್ರಯತ್ನವನ್ನು ಸರಕಾರದವರು ಮಾಡಬೇಕು. ಕುದುರೆಯಂತ ಕುದುರೆ ಸವಾರರು ಸರಿಯಾಗಿ ಪಳಗಿದವರಾಗಿರಬೇಕಾಗುತ್ತದೆ. ಯಾವನೇ ಅಧಿಕಾರಿ ತನ್ನ ಕರ್ತವ್ಯಲೋಪ ಎಸಗಿದ್ದು ಕಂಡುಬಂದಲ್ಲಿ ಅಂಥವರನ್ನು ಮನೆಗೆ ಕಳುಹಿಸುವ ಕ್ರಮ ತೆಗೆದುಕೊಳ್ಳಬೇಕು. ಇವೊತ್ತು

ಸರಕಾರಿ ನೌಕರರಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕಂಥವರೂ ಇದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಬಹಳಷ್ಟು ಜನರು ಕೆಲಸ ಮಾಡದೇ ತಮ್ಮದೇ ಆದ ರೀತಿನೀತಿಗಳಲ್ಲಿರುತ್ತಾರೆ. ಕೆಲಸ ಮಾಡುತ್ತಿರುವವರು ಮಾಡುತ್ತಾ ಇರುತ್ತಾರೆ. ಅವರಿಗೆ ನಿಜವಾಗಿ ನ್ಯಾಯಯುತವಾಗಿ ಸಿಗ ಬೇಕಾದ ಭಡ್ತಿಯಾಗಲೀ, ಇನ್ನಾವುದೇ ಸೌಲಭ್ಯವಾಗಲೀ ಸಕಾಲದಲ್ಲಿ ಸಿಗುವುದಿಲ್ಲ. ಈ ಕೆಲಸ ಮಾಡದ ವರ್ಗ ಏನಿದೆ, ಅವರು ಬೇರೆ ಬೇರೆ ರೀತಿಯಾದ ಇನ್‌ಫ್ಲೂಯನ್ಸ್ ತಂದು ಭಡ್ತಿಗಿಟ್ಟಿಸಿಕೊಳ್ಳುತ್ತಾರೆ ಕೆಲಸ ಮಾಡುವವರು ಇನ್‌ಫ್ಲುಯೆನ್ಸ್ ಇಲ್ಲದೇ ಹಾಗೆಯೇ ಉಳಿಯುತ್ತಾರೆ. ಹೀಗೆ ಆಗದಂತೆ ನೋಡಿಕೊಳ್ಳಬೇಕು. ನಿಜವಾಗಿ ಯಾರು ಪ್ರಾಮಾಣಿಕರಿದ್ದಾರೆ. ಅವರಿಗೆ ಮಾನ್ಯತೆ ಸಿಗುವಂತಾಗ ಬೇಕು. ಹಾಲಿರುಳೂ ದುಡಿಯುವ ನೌಕರವರ್ಗವನ್ನು ನಿರ್ಲಕ್ಷಿಸ ಬಾರದು. ಈ ತಾರತಮ್ಯ ಹೋಗಬೇಕು. ಆ ದೃಷ್ಟಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸಣ್ಣ ಸಣ್ಣ ಕೆಲಸಗಳನ್ನು ಮಾಡುವಲ್ಲಿ ಕೂಡ ಅಧಿಕಾರಿಗಳು ಎಷ್ಟು ಲೋಪದೋಷಗಳನ್ನು ಮಾಡುತ್ತಾರೆ ಎಂಬುದನ್ನು ಇಲ್ಲಿ ಹೇಳಲು ಕೂಡ ನನಗೆ ವ್ಯಥೆಯಾಗುತ್ತದೆ, ಕೇಂದ್ರ ಸರಕಾರದವರು ಕಾಲಕಾಲಕ್ಕೆ ಹಾಕಿಕೊಳ್ಳುವ. ಯೋಜನೆಗಳನ್ನು ಕೂಡಲೇ ರಾಜ್ಯದಲ್ಲಿ ಜಾರಿಗೆ ತರುವ ಬಗ್ಗೆ ಚಾಣಾಕ್ಷತನದಿಂದ ಸಲಹೆಗಳನ್ನು ರೂಪ ರೇಷೆಗಳನ್ನು ಅಧಿಕಾರಿಗಳು ಮಂತ್ರಿಯವರಿಗೆ ಕೊಡಬೇಕು, ಮಂತ್ರಿಗಳಿಗೆ ಪೂರಕವಾಗಿ ಅವರು ಕರ್ತವ್ಯ ನಿರ್ವಹಿಸುವಲ್ಲಿ ಜಾಗೃತರಾಗಿರಬೇಕು. ಆದರೆ ಎಷ್ಟು ಜನರು ಈ ಕೆಲಸವನ್ನು ಮಾಡುತ್ತಾರೆ? ಅಂಥ ಅಧಿಕಾರಿ ವರ್ಗ ನಮ್ಮಲ್ಲಿ ಎಷ್ಟು ಇದೆ ? ದೆಹಲಿಯಲ್ಲಿ ನಮ್ಮ ರಾಜ್ಯ ಸರಕಾರದ ಕರ್ನಾಟಕ ಭವನ ಇದೆ. ಅಲ್ಲಿ ಡಿ.ಸಿ. ಇದ್ದಾರೆ, ಇಂಜಿನೀಯರ್ ಇದ್ದಾರೆ, ಮತ್ತಿತರ ಸಿಬ್ಬಂದಿಯೂ ಸಾಕಷ್ಟು ಪ್ರಮಾಣದಲ್ಲಿ ಇದೆ. ಆದರೆ ಅಲ್ಲಿನ ಅವ್ಯವಸ್ಥೆಯು ಎಲ್ಲರಿಗೂ ತಿಳಿದ ವಿಚಾರ. ಯಾವ ವ್ಯವಸ್ಥೆಯೂ ಸೂಕ್ತವಾಗಿಲ್ಲ. ಮಂತ್ರಿವರ್ಯರು ಹೋದಾಗ ಅವರು ಬಂದು ನೋಡುತ್ತಾರೆ. ಅವರಿಗೆ ತಕ್ಕ ವ್ಯವಸ್ಥೆ ಮಾಡುತ್ತಾರೆ. ಉಳಿದವರಿಗೆ ಯಾವ ರೀತಿಯಾದ ಲಕ್ಷವನ್ನು ಸರಿಯಾಗಿ ಕೊಡುತ್ತಾ ಇಲ್ಲ. ಅಲ್ಲಿ ಅನೇಕ ಕಾರುಗಳು ಇವೆ. ಅದರಿಂದ ಏನು ಉಪಯೋಗ ? ಅವುಗಳಿಂದ ಸರಿಯಾದ ಸೇವೆ ಲಭ್ಯವಾಗುತ್ತಾ ಇದೆಯೇ ? ಒಂದೊಂದು ಕಾರಿಗೆ ಇಬ್ಬರು ಡ್ರೈವರ್‌ಗಳಿದ್ದಾರೆ. ಅದಕ್ಕೆ ಎಷ್ಟು ಖರ್ಚು ಬರುತ್ತದೆ ಎಂದು ನೋಡಿದ್ದೀರಾ ? ಅದರ ಖರ್ಚನ್ನು ಹೋಲಿಸಿದಲ್ಲಿ ಅದು ಪ್ರಯೋಜನಕಾರಿಯೇ ಎಂಬುದನ್ನು ಪರಿಶಿಲಿಸಿ ನೋಡಬಹುದು. ಕರ್ನಾಟಕ ಭವನಕ್ಕೆ ತಗಲುವ ಖರ್ಚನ್ನು ಲೆಕ್ಕ ಹಾಕಿದ್ದೀರಾ ? ಅಲ್ಲಿನ ವೆಚ್ಚದಲ್ಲಿ ಉಳಿತಾಯ ಮಾಡಲು ಯೋಚಿಸಬೇಕು. ಉಳಿತಾಯವನ್ನು ಮಾಡುವುದಾದಲ್ಲಿ ಜಿಲ್ಲೆಯ ಕರ್ನಾಟಕ ಭವನದ ವೆಚ್ಚದಲ್ಲಿ ಉಳಿತಾಯ ಮಾಡಬೇಕು. ಆ ಬಗ್ಗೆ ಪರಿಶೀಲಿಸಿ. ಇಷ್ಟು ವೆಚ್ಚ ಮಾಡಿದಾಗಲೂ ಕೂಡ ಸಚಿವರಿಗೆ ಅಲ್ಲಿ ಸೂಕ್ತ ತಂಗುವ ವ್ಯವಸ್ಥೆಯಾಗುತ್ತಾ ಇಲ್ಲ. ಅಲ್ಲಿಯ ಹೋಟೆಲ್‌ನಲ್ಲಿ ಊಟ ತಿಂಡಿ ವ್ಯವಸ್ಥೆಯೂ ಸರಿಯಾಗಿಲ್ಲ, ಅದನ್ನು ಯಾರಿಗಾದರೂ ಕಂಟ್ರಾಕ್ಟ್ ಆಧಾರದ ಮೇಲೆ ಖಾಸಗಿ ವ್ಯವಸ್ಥೆಯವರಿಗೆ ಕೊಟ್ಟರೆ ಅದನ್ನು ಸರಿ ಮಾಡಬಹುದು. ಈಗಿರುವ ವ್ಯವಸ್ಥೆಯಿಂದ ಉತ್ತಮ ಊಟ-ತಿಂಡಿ ವ್ಯವಸ್ಥೆಯಾಗಲಾರದು. ಅಲ್ಲಿರುವ ಕಾರುಗಳಲ್ಲಿ ಒಂದೆರಡು ಕಾರುಗಳನ್ನು ಇಟ್ಟುಕೊಂಡು ಉಳಿದವುಗಳನ್ನು ಮಾರಾಟ ಮಾಡಿ. ಇನ್ನೂ ಹಲವಾರು ರೀತಿಯಲ್ಲಿ ಅಲ್ಲಿಯ ಅನಗತ್ಯ ವೆಚ್ಚಗಳನ್ನು ನಿಲ್ಲಿಸಬೇಕು. ಸರಿಯಾದ ಸೇವಾ ಸೌಲಭ್ಯಗಳನ್ನು ದೊರೆಯುವಂತೆ ನೋಡಿಕೊಳ್ಳಬೇಕು. ಡೆಲ್ಲಿಯ ಆಂಧ್ರ ಭವನದಲ್ಲಿ ಊಟ-ತಿಂಡಿ ವ್ಯವಸ್ಥೆಯನ್ನು ಕಂಟ್ರಾಕ್ಟ್ ಕೊಟ್ಟಿದ್ದಾರೆ. ಅಲ್ಲಿ ೯ ರೂಪಾಯಿಗಳಿಗೆ ಒಳ್ಳೆಯ ಊಟವನ್ನು ಕೊಡುತ್ತಾರೆ. ಹೀಗೆ ಖಾಸಗಿಯವರಿಗೆ ಕಂಟ್ರಾಕ್ಟ್ ಕೊಡುವುದರಿಂದ ಜನರಿಗೆ ಒಳ್ಳೆಯ ಊಟ-ತಿಂಡಿ ಸಿಗುತ್ತದೆಯಲ್ಲದೆ ನಿಮಗೂ ಕೂಡ ಜವಾಬ್ದಾರಿ ತಪ್ಪುತ್ತದೆ. ಆದುದರಿಂದ ಈ ಒಂದು ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ನಮ್ಮ ಶಾಸಕರ ಭವನದ ವ್ಯವಸ್ಥೆಯನ್ನು ತಾವುಗಳು ನೋಡಿಲ್ಲವೇ ? ಅಲ್ಲಿ ಎಂದಾದರೂ ತಾವುಗಳು ಊಟ ಮಾಡಿದ್ದೀರಾ ?

ಶ್ರೀ ಕೆ ಹೆಚ್. ಪಾಟೀಲ್.—ಅಲ್ಲಿ ಊಟ ಮಾಡಿ, ಜಾಂಡಿಸ್ ರೋಗಕ್ಕೆ ಬಲಿಯಾಗಲು ನಾನು ತಯಾರಾಗಿಲ್ಲ. ಶಾಸಕರ ಭವನದಲ್ಲಿನ ವ್ಯವಸ್ಥೆಯನ್ನು ನೋಡುವವರು ಮಾನ್ಯ ಅಧ್ಯಕ್ಷರು. ಅವರು ಅವರ ಕೆಲಸವನ್ನು ಸರಿಯಾಗಿಯೇ ಮಾಡುತ್ತಾರೆ ಅವರು ಜನರ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿಯುಳ್ಳವರಾಗಿದ್ದಾರೆ. ಅವರು ಆ ಬಗ್ಗೆ ಹೆಚ್ಚು ಲಕ್ಷ್ಯ ಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ಏನಾದರೂ ಅವ್ಯವಸ್ಥೆಯು ಇದ್ದಲ್ಲಿ, ಮಾನ್ಯ ಚಂದ್ರೇಗೌಡರು, ನಾವು, ನೀವು, ಕೂಡಿ ಹೇಳಿದರೆ ಅದನ್ನು ಸರಿಪಡಿಸಲು ಅಧ್ಯಕ್ಷರು ಮುಂದಾಗುತ್ತಾರೆ. ಅದು ಸರಕಾರದ ಕೆಲಸವಲ್ಲ, ಅದು ಮಾನ್ಯ ಅಧ್ಯಕ್ಷರ ಕೆಲಸವಾದುದರಿಂದ ಅವರಿಂದ ಹೇಳಿ ಮಾಡಿಸೋಣ.

ಇನ್ನು ಸಹಕಾರ ಚಳುವಳಿಯ ಬಗ್ಗೆ ತಮ್ಮ ಬಜೆಟ್‌ನಲ್ಲಿ ಮಾನ್ಯ ಅರ್ಥಸಚಿವರು ಒಂದು ಅಕ್ಷರವನ್ನೂ ಎತ್ತಲಿಲ್ಲ. ಈಗಲಾದರೂ ತಮ್ಮದೆ ಆವಂಥ ವಾಕ್ಯದಲ್ಲಿ ನಿಜವಾಗಿ ಜನಸಾಮಾನ್ಯರ ಹಿತಕ್ಕೆ ಅನುಕೂಲಕರವಾಗುವ ರೀತಿಯಲ್ಲಿ, ಸಮಾಜಕ್ಕೆ ಒಳಿತಾಗುವ ರೀತಿಯಲ್ಲಿ ಸಹಕಾರ ಚಳುವಳಿಯ ಬಗ್ಗೆ ಒಂದು ನೀತಿಯನ್ನು ಸೇರಿಸಿಕೊಳ್ಳಬೇಕು. ಜನರನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಹಕಾರ ಚಳುವಳಿಯೊಂದೇ ಮಾರ್ಗವಾಗಿದೆ, ಡೆಮಾಕ್ರಸಿ ಸರ್ವೈವ್ ಆಗಬೇಕಾದರೆ ಸಮಾಜವಾದ ಜಾರಿಯಲ್ಲಿರಬೇಕು. ಸಹಕಾರ ಚಳುವಳಿಯು ಪ್ರಜಾಪ್ರಭುತ್ವದ ಮೂಲವಾದಂಥ ಟ್ರೇಡ್ ಸೆಂಟರ್ ಆಗಿದೆ. ಇದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದರೂ ಅದು ಕಡಿಮೆಯೆಂದೇ ಹೇಳಬೇಕು. ನಾನು ಅಧಿಕಾರದಲ್ಲಿದ್ದಾಗ ಅಧಿಕಾರಿಗಳಿಗೆ ಸರಿಯಾಗಿ ವರ್ತನೆ ಮಾಡಿ, ಎಂದು ತಿಳಿಸುತ್ತಿದ್ದೆನು. ಯಾವ ಅಧಿಕಾರಿಯೇ ಆಗಲಿ ಒಂದು ವಾರದೊಳಗೆ ರಿಪ್ಲೈ ಕೊಡದಿದ್ದಲ್ಲಿ ಅವರ ಮೇಲೆ ಕ್ರಮ ಜರುಗಿಸುವುದಾಗಿ ನಾನು ಫಾರೆಸ್ಟ್ ಮಿನಿಸ್ಟರಾಗಿದ್ದಾಗ ಸರ್ಕ್ಯುಲರ್ ಹೊರಡಿಸಿದ್ದೆ. ನಿಮ್ಮಿಂದ ಸಹ ನಾನು ಅಂಥಾ ಕ್ರಮ ಬಯಸುತ್ತೇನೆ. ಎಂಎಲ್‌ಎಗಳ ಸ್ಥಿತಿ ನೋಡಿ. ಎಂಎಲ್‌ಎಗಳಿಂದ ಪತ್ರ ಬಂದರೆ ಆ ಕೆಲಸ ಆಗುತ್ತದೆಯೋ ಇಲ್ಲವೋ ಎಂದು ಹೇಳಿಬಿಟ್ಟರೆ ಎಷ್ಟೋ ಉಪಕಾರವಾಗುತ್ತದೆ. ಆದರೆ ಈಗ ಒಂದು ಪತ್ರ ಬರೆದರೆ ಅದಕ್ಕೆ ಉತ್ತರವೇ ಬರುವುದಿಲ್ಲ. ಜನ ತಮ್ಮ ಕುಂದು ಕೊರತೆಗಳನ್ನು ನಮಗೆ ತಿಳಿಸಿದಾಗ ನಾವು ಮಂತ್ರಿಗಳಿಗೆ ಕಾಗದ ಬರೆದಿರುತ್ತೇವೆ. ಆದರೆ ಇಲ್ಲಿ ಅಸೆಂಬ್ಲಿ ಮುಗಿದ ಮೇಲೂ ನಮಗೆ ಉತ್ತರ ಸಿಗುವುದಿಲ್ಲ. ಕೊಶ್ಚನ್ಸ್ ಗತಿಯೂ ಅಷ್ಟೇ. ಹೋದ ಸಲದ ಪ್ರಶ್ನೆ ಈ ಸಲದ ಸಿಟಿಂಗ್‌ನಲ್ಲೂ ಬರುವುದಿಲ್ಲ. ಈ ಸಲದ್ದು ಇನ್ಯಾವಾಗಲೋ ಬರುವುದು ? ಹೀಗಾದರೆ ಎಂಎಲ್‌ಎಗಳು ತಮ್ಮ ಕರ್ತವ್ಯ ಮಾಡುವುದು ಹೇಗೆ ? ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ ಅಧಿಕಾರಿಗಳ ಟ್ರಾನ್ಸ್‌ಫರ್ ಕೋರಿ ಎಂಎಲ್‌ಎಗಳು ಅವರ ಬಳಿ ಹೋಗುತ್ತಾರೆ ಎಂದು. ಏಕೆ ಎಂಎಲ್‌ಎಗಳು ಅವರ ಹತ್ತಿರ ಹೋಗುತ್ತಾರೆ ? ರೊಕ್ಕ ಸಂಪಾದನೆಗೋಸ್ಕರ ಈ ದಂಧೆ ಮಾಡುವ ಕೆಲವು ಎಂಎಲ್‌ಎಗಳಿರಬಹುದು. ಆದರೆ ಎಲ್ಲರೂ ಆ ರೀತಿ ಇರುವುದಿಲ್ಲ. ತನ್ನ ಮತದಾರರ ಕ್ಷೇತ್ರದಲ್ಲಿ ಜನರ ಕಲ್ಯಾಣ ಮಾಡುವುದಕ್ಕಾಗಿ ಎಂಎಲ್‌ಎಗಳು ಮಂತ್ರಿಗಳ ಹತ್ತಿರ ಹೋಗುತ್ತಾರೆ. ಅವರ ಕಾರ್ಯ ಈಡೇರಿಸದಿದ್ದರೆ ಮಂತ್ರಿಗಳು ಏಕೆ ಇರಬೇಕು ? ಎಂಎಲ್‌ಎಗಳು ಏಕೆ ಇರಬೇಕು ?

(ಗೊಂದಲ)

ನಮ್ಮನ್ನು ತಾಲ್ಲೂಕು ಬೋರ್ಡ್ ಚೇರ್ಮನ್ ಮಾಡಿದ್ದಾರೆ. ಆದರೆ ಯಾವ ಕಮಿಟಿಗಳಿಗೂ ಸಂಬಂಧಪಟ್ಟ ಅಧಿಕಾರಗಳು ಬರುತ್ತಿರಲಿಲ್ಲ. ಆಗ ನಾವು ಏನು ಮಾಡಬೇಕು ? ಅವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಬೇಕು ? ಈ ಬಗ್ಗೆ ವಿಷದವಾಗಿ ಸರ್ಕಾರ ಇದನ್ನು ಸ್ಪಷ್ಟೀಕರಿಸಬೇಕು. ಸರ್ಕಾರ ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಅದರ ಪ್ರಕಾರ ಪ್ರತಿ ಎಂಎಲ್‌ಎ......

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಒಳ್ಳೆಯ ಮಾತನ್ನು ಹೇಳುತ್ತಿದ್ದೀರಿ. ಮಂಡಲ ಪಂಚಾಯಿತಿ ವ್ಯವಸ್ಥೆಯಾದ ಮೇಲೆ ನಮ್ಮ ಶಾಸಕರ ಸ್ಥಿತಿ ಏನಾಗಿದೆ. ಎಂದರೆ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿರುತ್ತಾರೆ. ಒಂದು ಘಟನೆ ನಡೆಯಿತು. ತಾಲ್ಲೂಕು ಪಂಚಾಯಿತಿಯ ಎಲ್ಲ ಸದಸ್ಯರೂ ಸರ್ವಾನುಮತದಿಂದ ಶಿಕಾರಿಪುರ ತಾಲ್ಲೂಕಿನ ಪಿಡಬ್ಲ್ಯೂಡಿ ಇಲಾಖೆಯ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರನ್ನು ಸಸ್ಪೆಂಡ್ ಮಾಡಿ ಎಂದು ಕಾಂಗ್ರೆಸ್, ಜನತಾದಳ, ಬಿಜೆಪಿ ಎಲ್ಲರೂ ಪಕ್ಷಬೇದ ಮರೆತು ಒತ್ತಾಯಿಸಿದರು ಕೊನೆಗೆ ಅದು ಈಡೇರದಿದ್ದಾಗ ಪಂಚಾಯಿತಿ ಸಭೆಗೇ ಬಹಿಷ್ಕಾರ ಹಾಕಿದರು. ಕೊನೇ ಪಕ್ಷ ಒಂದು ವರ್ಷ ಸತತವಾಗಿ ರಜಾ ಹಾಕಪ್ಪ ಎಂದು ಹೇಳಿದರೂ ಇದುವರೆಗೂ ಆತ ರಜ ಮೇಲೆ ಹೋಗಿಲ್ಲ. ಹೀಗೆ ನಿಜವಾಗಿಯೂ ಶಾಸಕರ ಸ್ಥಿತಿ ಈ ಸ್ಥಿತಿಗೆ ಇಳಿದಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಅದೇ ಸ್ಥಿತಿ ನಮ್ಮ ಜಿಲ್ಲೆಯಲ್ಲೂ ಇದೆ, ಎಲ್ಲ ಕಡೆಯೂ ಇದೆ.

ಶ್ರೀ ಎಂ. ವೆಂಕಟೇಶ್ (ಹೆಚ್.ಡಿ. ಕೋಟೆ).—ಈ ಹಿಂದೇನೂ ಇದೇ ಸ್ಥಿತಿ ಇತ್ತು.

ಒಬ್ಬ ಮಾನ್ಯ ಸದಸ್ಯರು.—ಅಧಿಕಾರಿಗಳ ವರ್ಗಾವಣೆ ಅಧಿಕಾರವನ್ನೆಲ್ಲ ಜಿಲ್ಲಾಪರಿಷತ್ತಿಗೆ ಕೊಟ್ಟಿರುವುದರಿಂದಲೇ ಶಾಸಕರಿಗೆ, ಸರ್ಕಾರಕ್ಕೆ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಆಗುತ್ತಿಲ್ಲ. ಅದಕ್ಕೋಸ್ಕರವೇ ಸನ್ಮಾನ್ಯ ಬಸವಲಿಂಗಪ್ಪನವರು ತಾಲ್ಲೂಕು ಬೋರ್ಡ್ ಜಿಲ್ಲಾ ಪರಿಷತ್‌ಗಳಿಗೆ ಅಧಿಕಾರ ಕೊಟ್ಟಿರೋದು ಸಮರ್ಪಕವಾಗಿಲ್ಲವೆಂದು ಹೇಳುತ್ತಿರುವುದು. ಈ ಬಗ್ಗೆ ಒಂದು ಪ್ರತ್ಯೇಕ ಚರ್ಚೆಯನ್ನು ಇಡಿರಿ. ತದನಂತರ ಶಾಸಕರಿಗೆ ಗೌರವ ಸಿಗುತ್ತದೆ. ಇಲ್ಲದಿದ್ದರೆ ಇವತ್ತಿನ ಆಕ್ಟಿನ ಪ್ರಕಾರ ನಮಗೆ ಯಾವುದೇ ಗೌರವವೂ ಸಿಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಇದಕ್ಕೆ ಚಂದ್ರೇಗೌಡರು ಒಪ್ಪುವುದಿಲ್ಲವಲ್ಲ.

ಒಬ್ಬ ಮಾನ್ಯ ಸದಸ್ಯರು.—ಅವರು ಪಾಪ ಮೀಟಿಂಗ್‌ಗಳಿಗೆ ಹೋಗುವುದಿಲ್ಲ, ಅಲ್ಲಿನ ಎಂಎಲ್‌ಎಗಳ ದುಸ್ಥಿತಿ ಅವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್.—ಇವತ್ತಿನ ದಿವಸ ಡೆಮಾಕ್ರಸಿ ಬೆಳೆಯ ಬೇಕಾದರೆ ಅದು ಸಹಕಾರ ಸಂಘಗಳಿಂದ ಮಾತ್ರ ಎಂದು ಅನೇಕ ವರ್ಷಗಳಿಂದ ನಾನು ಹೇಳುತ್ತಿದ್ದೇನೆ, ನಾನು ಮಂತ್ರಿಯಾಗಿದ್ದಾಗಲೂ ಇದನ್ನು ಪ್ರತಿಪಾದನೆ ಮಾಡುತ್ತಿದ್ದೆ. ಆಗ ನಮ್ಮ ರಾಜ್ಯದಲ್ಲಿ ೧೭೫ ತಾಲ್ಲೂಕುಗಳಿದ್ದವು.

ಈಗ ಅವನ್ನು ೨೨೪ ಕಾನ್‌ಸ್ಟಿಟ್ಯೂಯೆನ್ಸಿಗಳಾಗಿ ಮಾಡಿದ್ದಾರೆ. ಈ ೨೨೪ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಮೊಟ್ಟಮೊದಲನೆಯದಾಗಿ ನೀವು ಏನು ಕೆಲಸ ಮಾಡಬೇಕು ಎಂದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಗಲಿ, ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಗಲೀ ಅಲ್ಲಿನವರು ಒಂದಕ್ಕೆ ೧೨ ಪಟ್ಟು ಹರಾಮಿ ಪಗಾರವನ್ನು ತಿನ್ನುತ್ತಿದ್ದಾರೆ. ಅವರಿಗೆ ಸರಿಯಾದ ಕೆಲಸ ಹಚ್ಚಬೇಕು. ಇದಕ್ಕೆ ಸರಿಯಾದ ಪ್ರಾಜೆಕ್ಟ್ ತಯಾರು ಮಾಡಿ. ಯಾವ ಯಾವ ತಾಲ್ಲೂಕಿನಲ್ಲಿ ಬೆಳೆಯನ್ನು ಏನು ಬೆಳೆಯುತ್ತಾರೆ, ಜೋಳ ಎಲ್ಲಿ ಬೆಳೆಯುತ್ತಾರೆ, ರಾಗಿಯನ್ನು ಎಲ್ಲಿ ಬೆಳೆಯುತ್ತಾರೆ, ಗೋಧಿಯನ್ನು ಎಲ್ಲಿ ಬೆಳೆಯುತ್ತಾರೆ, ಅವುಗಳನ್ನು ಯಾವ ರೀತಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯ ಇದೆ. ಆ ರೀತಿ ಪರಿವರ್ತನೆ ಮಾಡುವುದಕ್ಕೆ ನಮ್ಮಲ್ಲಿ ಟೆಕ್ಸಾಕ್ ಎಂಬ ಒಂದು ಸಂಸ್ಥೆಯನ್ನು ಮಾಡಿದ್ದೀರಿ. ಅವರು ಯಾವುದು ಪ್ರಾಜೆಕ್ಟ್ ತಯಾರು ಮಾಡುತ್ತಿದ್ದಾರೆ, ಅದನ್ನು ನೋಡುವ ಹಾಗೆ ಮಾಡಿ. ಇವತ್ತು ಕೋಲಾರದಂಥ ಪ್ರದೇಶದಲ್ಲಿ ಹಣ್ಣಿನ ಬಗ್ಗೆ ಅನೇಕ ಯೋಜನೆಗಳನ್ನು ತಯಾರು ಮಾಡಬೇಕು. ಹಾಸನಕ್ಕೆ ಹೋದರೆ ಪೊಟಾಟೋನಿಂದ ಸ್ಟಾರ್ಚ್ ತಯಾರು ಮಾಡತಕ್ಕಂಥ ಕಾರ್ಖಾನೆಗಳನ್ನು ಪ್ರಾರಂಭ ಮಾಡಬಹುದು. ಆ ರೀತಿ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದರೆ ಒಂದು ರೂಪಾಯಿಗೆ ಸುಮಾರು ಐವತ್ತು ರೂಪಾಯಿಗಳವರೆಗೂ ಲಾಭ ಆಗುತ್ತದೆ. ಇದು ರೈತರಿಗೆ ಸಿಗುತ್ತದೆ. ಹೀಗೆ ರೈತರ ಉತ್ಪನ್ನವನ್ನು ಹೆಚ್ಚು ಮಾಡಿಕೊಟ್ಟರೆ ದೇಶದ ಉತ್ಪನ್ನ ಕೂಡಾ ಬೆಳೆಯುತ್ತದೆ. ನಿಮಗೆ ಟ್ಯಾಕ್ಸ್ ಸಿಗುತ್ತದೆ. ಮತ್ತು ಅದರ ಜೊತೆಗೆ ಸಾಲಕ್ಕೆ ಕೈ ಇಡುವುದು ಕೂಡಾ ಕಡಿಮೆ ಆಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನಾನು ಯಡಿಯೂರಪ್ಪನವರಿಗೂ ಹೇಳುತ್ತೇನೆ. ಇವತ್ತು ಹಣವನ್ನು ಸೂಟ್ ಬಿಡಿ ಎಂದು ಹೇಳುವ ಬದಲು ಇದೇ ಹಣವನ್ನು ಇವತ್ತು ಏನು ೪೦೦ ಕೋಟಿ ರೂಪಾಯಿ ಎಂದು ನಾವು ಹೇಳುತ್ತಿದ್ದೇವೆ, ಆ ನಾಲ್ಕು ನೂರು ಕೋಟಿ ರೂಪಾಯಿಗಳ ಹಣವನ್ನು ರೈತರ ಹೆಸರಿನಲ್ಲಿ ತೆಗೆದಿಡಿ ರಾಜಶೇಖರಮೂರ್ತಿಯವರೇ, ಆ ರೀತಿ ಹಣವನ್ನು ತೆಗೆದಿಟ್ಟು ಉದ್ಯೋಗಗಳನ್ನು ಪ್ರಾರಂಭಮಾಡಿ, ರೈತರ ಅಭಿವೃದ್ಧಿಗಾಗಿ, ರೈತರ ಮಾಲನ್ನು ಪರಿವರ್ತನೆ ಮಾಡುವಂಥ ಸಂಸ್ಥೆಗಳನ್ನು ಕಟ್ಟಿ. ಆ ಸಂಸ್ಥೆಗಳಿಗೆ ಬೇಕಾಗುವಂಥ ಹಣವನ್ನು ಸಾಲದ ರೂಪದಲ್ಲಿ ಹೊರಗಿನಿಂದ ತನ್ನಿ. ಆ ರೀತಿ ತಂದಂಥ ಹಣದಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದನ್ನು ಕೈಗಾರಿಕೆ ಪ್ರಾರಂಭ ಮಾಡಿದರೆ ಸಾವಿರಗಟ್ಟಲೆ ಜನರಿಗೆ ಉದ್ಯೋಗ ಸಿಗುತ್ತದೆ, ಆಗ ರೈತರ ಉತ್ಪನ್ನ ಕೂಡಾ ಹೆಚ್ಚಾಗುತ್ತದೆ. ನಿಮಗೆ ಉದಾಹರಣೆಗೆ ಹೇಳಬೇಕೆಂದರೆ ನಮ್ಮ ಊರು ಒಂದು ಸಣ್ಣ ಊರು. ಅಲ್ಲಿ ಹತ್ತಿಯನ್ನು ಬೆಳೆಯುತ್ತಿದ್ದಾರೆ. ಹತ್ತಿಯನ್ನು ಖರೀದಿ ಮಾಡುವುದಕ್ಕೆ ಮದ್ರಾಸ್ ಮತ್ತು ಬಾಂಬೆಯಿಂದ ಜನರು ಬರುತ್ತಾರೆ. ನಾನು ಗದಗ್ ಕಾಟನ್ ಸಿಲ್ಕ್ ಫ್ಯಾಕ್ಟರಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾಗ ಅಲ್ಲಿ ಹತ್ತಿಯನ್ನು ಲಿಲಾವು ಮಾಡುವಂಥ ಸಂದರ್ಭದಲ್ಲಿ ಹತ್ತಿಯ ಬೆಲೆ ಬಾಂಬೆಯಲ್ಲಿ ೧೬೦೦ ರೂಪಾಯಿ ಇದ್ದರೆ ಖರೀದಿದಾರರು ಅದನ್ನು ೮೫ ರೂಪಾಯಿಗೆ ಕೇಳುತ್ತಿದ್ದಾಗ ನಾನು ಒಮ್ಮೆ ಸಿಟ್ಟಿಗೆದ್ದು ಹೇಳಿದೆ. ಎಲ್ಲಾ ದೊಡ್ಡ ದೊಡ್ಡ ವ್ಯಾಪಾರಸ್ಥರು ಅಲ್ಲಿ ಕುಳಿತಿದ್ದರು. ಸಿಟ್ಟಿಗೆದ್ದು ಹತ್ತಿಯನ್ನು ಬೆಂಕಿಗೆ ಹಾಕಿಸುತ್ತೇನೆ, ನಾನು ನಿಮಗೆ ಕೊಡುವುದಿಲ್ಲ ಎಂದು ಹೇಳಿದೆ ದೊಡ್ಡದಾಗಿ ಪತ್ರಿಕೆಯಲ್ಲಿ ಕೆ. ಹೆಚ್. ಪಾಟೀಲರು ಹತ್ತಿಯನ್ನು ಬೆಂಕಿಯಲ್ಲಿ ಹಾಕಿಸುತ್ತೇನೆ ಎಂದು ಹೇಳಿದರು ಎಂದು ಪ್ರಕಟವಾಯಿತು. ಇವತ್ತು ಮಿಲ್ಲನ್ನು ಪ್ರಾರಂಭ ಮಾಡಿದ ಮೇಲೆ ಮದ್ರಾಸ್, ಬಾಂಬೆ ಮತ್ತು ಕಲ್ಕತ್ತದಿಂದ ಬರುವ ಏದೆಗಾರಿಕೆ ಯಾವ ದೊರೆಗೂ ಇಲ್ಲ. ಏಕೆಂದರೆ ನಾವು ಅವರೆಲ್ಲರಿಗಿಂತಲೂ ಹೆಚ್ಚಿಗೆ ಹಣವನ್ನು ಕೊಟ್ಟು ಹತ್ತಿ ತೆಗೆದುಕೊಳ್ಳುತ್ತೇವೆ. ಅಷ್ಟೇ ಅಲ್ಲ, ರೈತರಿಗೆ ಹೆಚ್ಚಿನ ಹಣವನ್ನು ಸಹಾ ಕೊಡುತ್ತೇವೆ. ನೂರು ರೂಪಾಯಿ ಷೇರನ್ನು ಇಟ್ಟವನಿಗೆ ಇವತ್ತು ಮೂರುವರೆ ಸಾವಿರ ರೂಪಾಯಿಯಿಂದ ನಾಲ್ಕು ಸಾವಿರ ರೂಪಾಯಿಗಳವರೆಗೆ ಹಣವನ್ನು ಮುಟ್ಟಿಸುತ್ತೇವೆ. ನಿಜವಾಗಿಯೂ ಈ ವಿಷಯವನ್ನು ಹೇಳುವಾಗ ನನಗೆ ಬಹಳ ಅಭಿಮಾನವಾಗುತ್ತದೆ, ಇದಕ್ಕಿಂತ ಯಾವ ಉದ್ದಿಮೆಯನ್ನು ಮಾಡುವುದಕ್ಕೆ ಜನರಿಗೆ ಸಾಧ್ಯವಿದೆ ? ಬಿರ್ಲಾ ಟಾಟಾದವರು ಮಾತ್ರ ವೈಯಕ್ತಿಕವಾಗಿ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಸಾಮೂಹಿಕವಾಗಿ ಕೆಲಸವನ್ನು ಮಾಡಬೇಕಾದರೆ ನಿಜವಾಗಿಯೂ ಇಂಥ ಸಹಕಾರಿ ಸಂಸ್ಥೆಗಳಿಂದಲೇ ಸಾಧ್ಯ. ಎಲ್ಲಿಯಾದರೂ ಒಂದು ಸಹಕಾರಿ ಸಂಸ್ಥೆ ಕೆಟ್ಟ ಕೂಡಲೇ ಕೆಟ್ಟಿದೆ ಎಂದು ಎದೆಯನ್ನು ಹೊಡೆದುಕೊಳ್ಳಬೇಡಿ. ನಿಜವಾಗಿಯೂ ಒಂದು ಸಹಕಾರಿ ಸಂಸ್ಥೆ ಕೆಟ್ಟರೆ ಅವನು

ತೆಗೆಯಿರಿ. ಕೊಳೆತ ಹಣ್ಣನ್ನು ಬುಟ್ಟಿಯಿಂದ ಎತ್ತಿ ಎಸೆಯುವ ಹಾಗೆ ಕಿತ್ತು ಒಗೆಯಿರಿ. ಆಗಲೂ ಸರಿಯಾಗಲಿಲ್ಲ ಎಂದು ಹೇಳಿದರೆ ನಮ್ಮಲ್ಲೇ ಏನೋ ದೋಷ ಇದೆ. ನಾವು ಇನ್ನು ಡೆಮಾಕ್ರಸಿಗೆ ಫಿಟ್ ಆಗಿಲ್ಲ ಎಂದು ತಿಳಿದುಕೊಳ್ಳಬೇಕು. ನಮ್ಮ ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕು ಅಲ್ಲಿ ಅವರನ್ನು ಕರೆದುಕೊಂಡು ಒಂದು ಹಾಕಿ ಸಂಸ್ಥೆಗಳನ್ನು ನಡೆಸಿ. ವೈಯಕ್ತಿಕವಾಗಿ ನಡೆಸುತ್ತಾನೆ, ವೈಯಕ್ತಿಕವಾಗಿ ಬೇಡುತ್ತಾನೆ. ಆದರೂ ಸಹಕಾರಿ ಜೀವನದೊಳಗೆ ನಾವು ಫೇಲ್ ಆಗುತ್ತೇವೆ ಎಂದು ಹೇಳಿದರೆ ಏನು ಅರ್ಥ ? ಯಾವ ರೀತಿಯಿಂದ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚಿಸಿ. ಇದನ್ನು ತಾವು ದಯಾವಿಟ್ಟು ನೋಡಬೇಕು. ನಾನು ಕರ್ನಾಟಕ ರಾಜ್ಯ ಸಹಕಾರಿ -ದರೂ ಹೊರಗಿನ ರಾಜ್ಯದವರು ನನ್ನನ್ನು ಸಹಕಾರಿ ಎಂದು ಪರಿಗಣನೆ ಮಾಡಿ, ನೂರಾರು ಮಿಲ್ಲುಗಳ ಸಂಸ್ಥೆಯ ಅಧ್ಯಕ್ಷನನ್ನಾಗಿ ಮಾಡಿರುವಾಗ ನಮ್ಮ ಸರ್ಕಾರದಲ್ಲಿ, ನಮ್ಮ ರಾಜ್ಯದಲ್ಲಿ ಈ ರೀತಿಯಾಗಿ ಬಂಡ್ ಆದ ಮಿಲ್‌ಗಳನ್ನು ಎರಡನೆಯವರಿಗೆ ಕೊಡುತ್ತಾರೆ ಎನ್ನುವುದನ್ನು ನೋಡಿದರೆ ನನ್ನ ರಕ್ತ ಕುದಿಯುತ್ತದೆ, ದಯವಿಟ್ಟು ಅದನ್ನು ಮಾಡಬೇಡಿ ಎಂದು ಕಳಕಳಿಯಿಂದ ತಮ್ಮಲ್ಲಿ ಭಿನ್ನಹ ಮಾಡುತ್ತೇನೆ. ಯಾವ ಪ್ರಸಂಗಕ್ಕೂ ಸಹಿತ ಸಹಕಾರಿ ಸಂಸ್ಥೆಗಳನ್ನು ಹೊರಗಿನವರಿಗೆ ಕೊಡಬಾರದು. ಹೊರಗಿನವರಿಗೆ ಕೊಡುವುದರಿಂದ ನಾವು ''ಆಳು ಬಡಕಲಾಗಿದೆ, ಅದು ಬಾಲ ತಿನ್ನುತ್ತದೆ ಎಂದು ಹೇಳಿ ಕಟುಕರ ಮನೆಗೆ ಕೊಟ್ಟ ಹಾಗೆ ಆಗುತ್ತದೆ''. ಅದನ್ನು ದಯಮಾಡಿ ಮಾಡಬೇಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ನಾವು ಹುಟ್ಟಿಸಿರುವುದೇ ಆ ಸಂಸ್ಥೆಯ ಹೆಸರನ್ನು ಉಳಿಸುವ ಸಲುವಾಗಿ, ರೈತರ ಕಲ್ಯಾಣಕ್ಕಾಗಿ ಆ ಸಂಸ್ಥೆಯನ್ನು ಕಟ್ಟಿರುವುದು. ರೈತರಿಗೆ ನಾಲ್ಕು ರೂಪಾಯಿ ಹೆಚ್ಚಿಗೆ ಕೊಡಬೇಕು ಎನ್ನುವ ಉದ್ದೇಶದಿಂದ ಮಾಡಿರುವುದು. ಆದರೆ ಅದನ್ನೇ ವ್ಯಾಪಾರಸ್ಥರಿಗೆ ಕೊಟ್ಟು ಅವನು ಎಷ್ಟೇ ಚಲೋ ಆಗಿ ನಡೆಸಿದರೂ ಸಹಾ ರೈತರ ಮಾಲನ್ನು ಎಂಟಾಣೆಗೆ ತೆಗೆದುಕೊಳ್ಳುತ್ತಾನೆಯೋ ಹೊರತು ರೂಪಾಯಿದು ರೂಪಾಯಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಅದಕ್ಕಾಗಿ ನಮ್ಮ ಉದ್ದೇಶವೇ ಇದಾಗಿರುವುದರಿಂದ ಆ ವ್ಯವಹಾರಕ್ಕೆ ತಾವು ಕೈ ಹಾಕಬಾರದು. ಇಲ್ಲಿ ಒಂದು ಸೆಂಟೆನ್ಸ್ ಬಂದಿದೆ. ''ಏನೋ ಅದನ್ನು ನಿಕೃಷ್ಟಾವಸ್ಥೆಯಲ್ಲಿ ಎರಡನೆಯವರಿಗೆ ಕೊಡಬೇಕಾದೀತು'' ಎಂದು ಹೇಳಿದ್ದೀರಿ. ಆ ಸೆಂಟೆನ್ಸ್‌ಗೆ ಮಹತ್ವ ಕೊಡಬೇಡಿ. ಅದನ್ನು ಕೈಬಿಡಬೇಕು ಎಂದು ಕಳಕಳಿಯಿಂದ ಬಿನ್ನಹ ಮಾಡುತ್ತೇನೆ. ಇಲ್ಲಿ ತಾವು ಏನು ಹೇಳಿದ್ದೀರಿ ಎಂದರೆ '.ಕೆಲವು ಸಂದರ್ಭಗಳಲ್ಲಿ ಖಾಸಗಿಯವರಿಗೆ ವಹಿಸಿ ಕೊಡಬೇಕಾಗಿಯೂ ಬರಬಹುದು. ಆ ವಿಷಯಗಳನ್ನು ಕುರಿತಂತೆ ಮಾನ್ಯ ಸದಸ್ಯರು ಉಪಯುಕ್ತ ಸಲಹೆಗಳನ್ನು ಕೊಡಬೇಕು'' ಎಂದು ನಾನು ಕೇಳುತ್ತೇನೆ ಎಂದು ಇದೆ.

೪-೧೫ ಪಿ. ಎಂ.

ಮಾನ್ಯ ರಾಜಶೇಖರಮೂರ್ತಿಯವರಿಗೆ ನಾವು ಸಲಹೆ ಕೊಡುತ್ತೇವೆ ನಿಜವಾಗಿಯೂ ನನಗೆ ಅನ್ನಿಸುತ್ತದೆ, ಯೋಗ್ಯವಾದ ಸಲಹೆಗಳನ್ನು ನಾವು ಕೊಡುತ್ತೇವೆಯೋ ಅಥವಾ ಇಲ್ಲವೋ ಎಂದು. ಒಮ್ಮೊಮ್ಮೆ ನಾವು ಏನೇನೋ ಹೇಳುತ್ತೇವೆ. ಬೇರೆ ಪ್ರಸಂಗ ಇದ್ದರೆ ಸರ್ಕಾರ ಕೊಟ್ಟು ಬಿಡಲಿ ಎಂದು ಹೇಳುತ್ತೇವೆ. ಈ ಪ್ರವೃತ್ತಿ ನಮ್ಮ ಪಕ್ಷದಲ್ಲೂ ಇದೆ, ಪ್ರತಿಪಕ್ಷದಲ್ಲೂ ಸಹ ಇರಬಹುದು. ಒಟ್ಟಾರೆ ಜನಹಿತವನ್ನು ಮಾಡತಕ್ಕ ರೈತರ ಬಗ್ಗೆ ಎಲ್ಲರದ್ದೂ ಒಂದೇ ಪಕ್ಷ. ಈ ದೃಷ್ಟಿಯಿಂದ ನಾವು ರೈತರ ಹಿತವನ್ನು ನೋಡಬೇಕು. ನೀವು ಕೇಳುತ್ತೇನೆಂದು ಹೇಳಿದಿರಿ ಸ್ವಾಗತಾರ್ಹವಾಗಿದೆ. ನಿಜಕ್ಕೂ ಈ ವಿಷಯವನ್ನು ಕೈಬಿಡಬೇಕು. ಮತ್ತು ಏನೇ ಆಗಲಿ, ಕಷ್ಟ ಪಟ್ಟು ಆದರೂ ಸಹ ನಮಗೆ ಆಗದಿದ್ದರೆ ವಿರೋಧ ಪಕ್ಷದವರನ್ನು ಕರೆದು ಎಲ್ಲರೂ ಕೂಡಿಕೊಂಡು ಈ ಬಗ್ಗೆ ಪ್ರಯತ್ನ ಮಾಡೋಣ. ಸಹಕಾರಿ ಸಂಸ್ಥೆಯನ್ನು ಕಟ್ಟಿ ರೈತರ ಕಲ್ಯಾಣಕ್ಕಾಗಿ ದುಡಿಯೋಣ, ಮುಂದುವರಿಯೋಣ ಎಂದು ಕಳಕಳಿಯಿಂದ ನಾನು ಭಿನ್ನಹ ಮಾಡುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಅಫಿಷಿಯಲ್ಸ್‌ಗಳು ಒಂದೇ ಕಡೆ ಬೇರೂರಿದ್ದಾರೆ. ಜನತಾದಳ ಸರಕಾರ ಬಂದರೂ ಇರುತ್ತಾರೆ, ಕಾಂಗ್ರೆಸ್ ಪಕ್ಷದ ಸರ್ಕಾರ ಬಂದರೂ ಇರುತ್ತಾರೆ. ಯಾವುದೂ ಪಕ್ಷ ಇರಲಿ ಅವರದ್ದು ತಪ್ಪು ಅಲ್ಲ ಅವರು ಇರುತ್ತಾರೆ. ಬಹಳ ದಿವಸ ಒಬ್ಬ ಮನುಷ್ಯ ಒಂದು ಕಡೆ ಇದ್ದರೆ ಅವನು ಒಂದೇ ಕೆಲಸದಲ್ಲಿ ತನ್ಮಯ ಆಗಿಬಿಡುತ್ತಾನೆ. ಒಬ್ಬ ಮನುಷ್ಯನನ್ನು ಒಂದು ಕಡೆ ಇಟ್ಟರೆ ಆತ ಜನತಾದಳ ಸರ್ಕಾರ ಇರಲಿ ಅಥವಾ ಕಾಂಗ್ರೆಸ್ ಸರ್ಕಾರ ಇರಲಿ, ಯಾವುದೇ ಸರ್ಕಾರ ಇದ್ದರೂ ಅವರ ಜೊತೆ ಹೊಂದಿಕೊಂಡು ಗೆಳೆಯ ಆಗಿಬಿಡುತ್ತಾನೆ. ಮುಂದೆ ಆತನನ್ನು ಎರಡನೇ ಜಾಗಕ್ಕೆ ವರ್ಗ ಮಾಡಿದರೆ ಈ ಗೆಳತನ ಹೋಗುತ್ತದೆ, ಆತ ಮತ್ತೆ ಸುಧಾರಿಸಬೇಕಾಗುತ್ತದೆ. ಆದ್ದರಿಂದ ಈಗ ಇದ್ದವರನ್ನು ಸಾರಾಸಗಟಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗ ಮಾಡಿದರೆ ಅವರು ಸುಧಾರಣೆಯಾಗಿ ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ಅವರು ಅಧಿಕಾರಸ್ಥರಾಗಿಯೇ ಇರುತ್ತಾರೆ, ಹಾಗೂ ನಮ್ಮನ್ನೆಲ್ಲಾ ನಡೆಸುವಂತಹವರು ಆಗುತ್ತಾರೆ.

ನಮ್ಮನ್ನೆಲ್ಲಾ ಗುಲಾಮರನ್ನಾಗಿ ಮಾಡುವಂತಹ ಶಕ್ತಿ ಇವೊತ್ತಿನ ದಿವಸ ಅವರಿಗೆ ಬಂದಿದೆ. ಈ ದೃಷ್ಟಿಯಿಂದ ಹೇಳುತ್ತಿದ್ದೇನೆ. ತಮಗೆ ಗೊತ್ತಿರುವ ಹಾಗೆ ಸಬ್-ರಿಜಿಸ್ಟ್ರಾರ್‌ಗಳು ಅನೇಕ ಜನ ಸಿಗುತ್ತಾರೆ ಎಷ್ಟು ರೀತಿಯಿಂದ ಅವರುಗಳನ್ನು ನಾವು ನೋಡಬಹುದು. ಅವರ ಬಂಗಲೆ ಏನು, ವೈಭವ ಏನು ಎಂದು ನೋಡಬಹುದು. ಮಾನ್ಯ ಶಾಸಕರಾದ ಜಿ. ಎಸ್. ಆಚಾರ್‌ರವರನ್ನು ಕೇಳಿ ಒಂದು ಸೊಸೈಟಿಯು ಒಬ್ಬ ಛೇರ್ಮನ್ ಒಂದು ಐವತ್ತು ರೂಪಾಯಿ ಕಚೇರಿಯಂದು ಬಳಸಿದ್ದ ಅಂದರೆ ಅವನು ಮಕ್ಕಳು ಮರಿ ಸಹಿತ ಅದನ್ನು ವಸೂಲು ಮಾಡಲಾಗುತ್ತದೆ. ಇವೊತ್ತು ಅಧಿಕಾರಸ್ಥರು ಬಳಸಿದಂತಹ ಹಣ ಹಾಗೆಯೇ ಉಳಿದಿದೆ. ಸೊಸೈಟಿಯು ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾಗ ಡಿಫಲ್‌ಕೇಶನ್ ಮಾಡಿ ಜನರಲ್‌ಬಾಡಿ ಮೀಟಿಂಗ್ ಅನ್ನು ಕರೆಯದೆ ಇಂಪೊರ್ಟೆಡ್ ಗೂಡ್ಸ್ ಅನ್ನು ವ್ಯಾಪಾರ ಮಾಡಿದರೆ, ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಿ ಎಂದು ಪತ್ರ ಬರೆದರೆ, ಹತ್ತು ವರ್ಷವಾಯಿತು ಅವನ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಅವನಿಗೆ ಪ್ರೊಮೋಷನ್ ಕೂಡ ಕೊಡಲಾಗಿದೆ ಇಂತಹವರಿಗೆ ಜನತಾ ದಳದವರು ಬಂದರೂ ಪ್ರೊಮೋಷನ್ ಕೊಡುತ್ತಾರೆ, ಕಾಂಗ್ರೆಸ್ ಬಂದರೂ ಪ್ರೊಮೋಷನ್ ಕೊಡುತ್ತಾರೆ. ಏಕೆಂದರೆ ಯಾರೇ ಅಧಿಕಾರಕ್ಕೆ ಬಂದರೂ ಅವರುಗಳನ್ನು ತಮ್ಮ ಕಡೆ ಮಾಡಿಕೊಳ್ಳುವಂತಹ ಶಕ್ತಿಯನ್ನು ಅವರು ಪಡೆದಿದ್ದಾರೆ. ದಯವಿಟ್ಟು ಇಂತಹವರ ಬಗ್ಗೆ ತಾವು ನಿಗಾವಹಿಸಿ, ಅಧಿಕಾರೇತರರಿಗೆ ಯಾವ ಶಿಕ್ಷೆ ಕೊಡುತ್ತೀರಿ. ಅದೇ ಶಿಕ್ಷೆಯನ್ನು ಅಧಿಕಾರಿಗಳಿಗೂ ಕೊಡುತ್ತೀರಿ ಎಂದಾದರೆ ಆಡಳಿತ ಎಲ್ಲಾ ಹಂತದಲ್ಲೂ ಸುಧಾರಣೆ ಆಗುತ್ತದೆ.

ಇವೊತ್ತು ನಿಮ್ಮ ಇಂಡಸ್ಟ್ರಿಗಳನ್ನೇ ತೆಗೆದುಕೊಳ್ಳೋಣ. ಸಕ್ಕರೆ ಮಿಲ್ ಇರಬಹುದು, ಕಾಟನ್ ಟೆಕ್ಸ್‌ಟೈಲ್ ಮಿಲ್ ಇರಬಹುದು, ಯಾವುದೇ ಆಗಲಿ ಫೇಲ್ ಆಗುತ್ತದೆ. ಒಬ್ಬ ಐ. ಎ. ಎಸ್. ಅಧಿಕಾರಿಯನ್ನು ವಿಧಾನ ಸೌಧದಿಂದ ಅಲ್ಲಿಗೆ ಹಾಕಿ. ಅವನ ಎಫಿಷಿಯೆನ್ಸಿ ಅಲ್ಲಿ ನೋಡಬಹುದು. ಒಂದು ವರ್ಷ ಬೇರೆ ಕಡೆ ಹಾಕಿ, ಒಂದು ವರ್ಷ ಒಂದು ಇನ್‌ಸ್ಟಿಟ್ಯೂಷನ್ ಅನ್ನು ಸರಿಯಾಗಿ ನಡೆಸುತ್ತಾನೆಯೇ ಎಂದು ನೋಡಬಹುದು. ಇವೊತ್ತು ಸೋಪ್ ಫ್ಯಾಕ್ಟರಿಯಲ್ಲಿ ಒಬ್ಬನನ್ನು ಹಾಕಿದ್ದೀರಿ, ಐ.ಎ.ಎ.ಸ್. ಆಫೀಸರ್ ಅನ್ನು ಹಾಕಿಯೂ ಇವೊತ್ತು ೧೧ ಕೋಟಿ ರೂಪಾಯಿ ಲುಕ್ಸಾನ ಆಗಿದೆ. ಏಕೆ ಲುಕ್ಸಾನು ಆಗಿದೆ. ಹಳ್ಳಿಯಲ್ಲಿ ಒಬ್ಬ ಸೋಪ್ ಫ್ಯಾಕ್ಟರಿ ಇಟ್ಟುಕೊಂಡರು ಸಹ ಆತ ಲಾಭ ಮಾಡಿಕೊಳ್ಳುತ್ತಾನೆ, ಆದರೆ ದೊಡ್ಡ ದೊಡ್ಡ ಮೆಷಿನ್ ಹಾಕಿ ಕೋಟಿಗಟ್ಟಲೆ ಹಣವನ್ನು ಬಜೆಟ್‌ನಲ್ಲಿ ಭರ್ತಿ ಮಾಡಿದರೂ ಸಹಿತ ಲುಕ್ಸಾನು ಆಗುತ್ತದೆ. ಯಾವ ಕಾರಣದಿಂದ ಲುಕ್ಸಾನು ಆಗುತ್ತದೆ. ಇವರಿಗೆ ೫ ಸಾವಿರದಿಂದ ೧೦ ಸಾವಿರ ರೂ.ಗಳ ವರೆಗೆ ಪಗಾರ ಕೊಡಬೇಕಾಗಿದೆ. ಇವರು ಒಮ್ಮೆ ಬಾಂಬೆಗೆ ಹೋಗಿ ಬಂದರೆ ೧೦ ಸಾವಿರ, ದೆಹಲಿಗೆ ಹೋಗಿ ಬಂದರೆ ೨೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡಿರುವುದರಿಂದ ಬಡಬೋರೇಗೌಡನಿಗೆ ಭಾರವಾಗುತ್ತದೆ, ಬೊಕ್ಕಸಕ್ಕೆ ನಷ್ಟ ಆಗುತ್ತದೆ. ಇದರಿಂದ ಏನು ಸಾಧನೆಯಾಗುತ್ತದೆ. ಅವರನ್ನು ಸುಧಾರಣೆ ಮಾಡುವುದಕ್ಕೆ ಆಗುತ್ತದೆ ಎಂದರೆ ನಾವು ತಿದ್ದಿಕೊಳ್ಳೋಣ. ನಾನು ಸಹ ನನ್ನ ಟೀಕೆಯನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಇವೊತ್ತು ತಮಗೆ ಬೇಡವಾದವರನ್ನು ಶಿವಮೊಗ್ಗಕ್ಕೆ ವರ್ಗ ಮಾಡುತ್ತಾರೆ. ಶಿವಮೊಗ್ಗದಲ್ಲಿ ಇವರಿಗೆ ಏನು ಕೆಲಸ? ಕೀಲಿ ಹಾಕುವುದು ಹಾಗೂ ಕೀಲಿ ತೆಗೆಯುವುದು, ಇದಕ್ಕಾಗಿ ೧೦ ಸಾವಿರ ರೂಪಾಯಿಗಳ ಪಗಾರ. ಇದನ್ನು ನೋಡುವವರು ಯಾರು ? ಇದು ನಿಮ್ಮ ನಜರಿಗೆ ಬರಬೇಕಾದರೆ ಎಷ್ಟು ವರ್ಷಬೇಕು. ಯಾರಾದರೂ ತಕರಾರು ಮಾಡಿದ ಮೇಲೆ ನಮಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ ನಮಗೆ ಗೊತ್ತಾಗುವುದಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿ, ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ಇವುಗಳ ರಿಪೋರ್ಟ್ ಬಂದರೂ ಸಹ ಅವು ಡಸ್ಟ್ ಬಿನ್‌ಗಳಿಗೆ ಹೋಗುತ್ತವೆ. ಆ ರಿಪೋರ್ಟ್‌ಗಳಲ್ಲಿರುವ ವಿಷಯವನ್ನು ವಿಚಾರ ಮಾಡುವುದಿಲ್ಲ. ಇದನ್ನು ತಾವು ಆಲೋಚನೆ ಮಾಡಬೇಕು. ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ನಾವುಗಳು ಅಂದರೆ ಎಂ. ಎಲ್. ಎ.ಗಳು ಹೋಗುತ್ತೇವೆ. ರಿಪೋರ್ಟ್ ಬರೆಯುತ್ತೇವೆ. ರಿಪೋರ್ಟ್ ಕೊಡುತ್ತೇವೆ, ಇವೊತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಚಂದ್ರೇಗೌಡರು ಅಧ್ಯಕ್ಷರಾಗುತ್ತಾರೆ, ಜನತಾ ದಳದ ಸರ್ಕಾರ ಬಂದರೆ ನಮ್ಮ ಪಕ್ಷದವರು ಅಧ್ಯಕ್ಷರಾಗುತ್ತಾರೆ. ಇಬ್ಬರೂ ಕೂಡಿ ರಿಪೋರ್ಟ್ ಕೊಡುತ್ತೇವೆ. ಇಂತಹ ತಪ್ಪುಗಳು ಆಗಿವೆ ಎಂದು ರಿಪೋರ್ಟ್ ಕೊಡುತ್ತೇವೆ. ನಮ್ಮಲ್ಲಿ ಒಂದು ಗಾದೆ ಮಾತು ಹೇಳಿದ್ದಾರೆ. ''Auditor's report is read and recorded'' ಎಂದು ಹೇಳುತ್ತಾ ''Auditor's report is read and filed.'' ಇದನ್ನು ಪೂರ್ಣವಾಗಿ ಓದುವವರು ಯಾರು ? ನಮ್ಮ ಕೊ-ಆಪರೇಟಿವ್ ಸೊಸೈಟಿ ಇವೊತ್ತು ಈ ಸ್ಥಿತಿಗೆ ಬಂದಿದೆ. ಇದರಿಂದಲೇ ದಯವಿಟ್ಟು ತಾವು ಇದರ ಬಗ್ಗೆ ಹೊಸ ರೂಪು ರೇಷೆಗಳನ್ನು ಕೊಡಬೇಕೆಂದು ನಾನು ಆಸೆ ಮಾಡುತ್ತೇನೆ.

ಇನ್ನು ಕೆ.ಇ.ಬಿ. ಬಗ್ಗೆ ಹೇಳಬೇಕಾದರೆ ನನಗೆ ವ್ಯಸನ ಅನಿಸುತ್ತದೆ. ಈ ಕೆ.ಇ.ಬಿ.ಯಲ್ಲಿ ನಿಷ್ಣಾವಂತರನ್ನು, ನಿಷ್ಣಾತರನ್ನು ಅನುಭವಿಕರನ್ನು ನೋಡಿ ಛೇರ್ಮನ್, ಸೆಕ್ರೆಟರಿ ಮಾಡಿದಿರಿ. ಆದರೂ ಅವರಿಗೆ ಪತ್ರ ಬರೆದರೆ ಆ ಪತ್ರಕ್ಕೆ ಉತ್ತರವೇ ಇಲ್ಲ. ನಿಮಗೆ ಆಶ್ಚರ್ಯವೆನಿಸಬಹುದು, ಏನೆಂದರೆ, ಈ ಮಿಲ್‌ಗಳು ಏಕೆ ಲುಕ್ಸಾನಿನಲ್ಲಿದೆ ಎಂದು ಮಾನ್ಯ ರಾಜಶೇಖರ ಮೂರ್ತಿಯವರು ನಮ್ಮನ್ನು ಕೇಳುತ್ತಾರೆ. ಆದರೆ ಆ ಮಿಲ್‌ಗಳಲ್ಲಿ ಲುಕ್ಸಾನು ಯಾರಿಂದ ಆಗಿದೆ ಎನ್ನುವುದನ್ನು ತಾವು ಆಲೋಚನೆ ಮಾಡುವುದಿಲ್ಲ, ಇವತ್ತು ಒಂದು ತಿಂಗಳಿಗೆ ೭–೮ ಲಕ್ಷ ತೆಗೆದುಕೊಳ್ಳುತ್ತೀರಿ, ಒಂದು ದಿವಸದಲ್ಲಿ ೧೩ ರಿಂದ ೧೭–೧೮ರತನಕ ಬಂದ್ ಆಗುತ್ತದೆ ಇದು ಟೈಂ ಷೆಡ್ಯೂಲ್ ಅಲ್ಲ, ಟ್ರಿಪ್‌ನಿಂದ ಆಗುತ್ತದೆ. ಇದಕ್ಕೆ ಯಾರು ಹೊಣೆಗಾರರು, ಏನು ಕಾರಣ ? ಇದರಿಂದ ಆಗತಕ್ಕಂಥ ಲುಕ್ಸಾನುಗಳಿಗೆ ಯಾರು ಹೊಣೆಗಾರರು, ನಮ್ಮ ಮಿಲ್‌ನಲ್ಲಿ ದಿನಾ ಇಷ್ಟು ಹೊತ್ತಿಗೆ ವಿದ್ಯುಚ್ಛಕ್ತಿ ಬಂದ್ ಆಯಿತು, ಇಷ್ಟು ಹೊತ್ತಿಗೆ ಚಾಲು ಆಯಿತು ಎಂದು ಕಳಿಸಿಕೊಡುತ್ತಾರೆ. ವಿದ್ಯುಚ್ಛಕ್ತಿ ಬಂದ್ ಆಗುವುದರಿಂದ ೮–೧೦ ಲಕ್ಷ ರೂಪಾಯಿ ವರ್ಕ್ ಲುಕ್ಸಾನು ಆಗಿದೆ, ಇಷ್ಟಾದರೂ ಸಹಿತ ನಿಮಗೆ ಟ್ಯಾಕ್ಸ್ ಎಷ್ಟು ಕೊಡುತ್ತೇವೆ ಅಂದರೆ ೭–೮ ಲಕ್ಷ ರೂಪಾಯಿ ಒಂದು ಮಿಲ್‌ನಿಂದ ಕೆ.ಇ.ಬಿ.ಗೆ ಕೊಡುತ್ತೇವೆ. ಅದೇ ಮಿಲ್ಲನ್ನು ಉಳಿದವರು ನಡೆಸಿದರೆ ಅಷ್ಟು ಕೊಡುವುದಿಲ್ಲ. ೩–೪ ಲಕ್ಷ ಕೊಡುತ್ತಾರೆ, ಅವರು ಲಾಭದಲ್ಲಿ ಬರುತ್ತಾರೆ. ಸರ್ಕಾರದಲ್ಲಿ ರಾಮ ಲಕ್ಷ್ಮಣ ಲೆಕ್ಕ ಇಲ್ಲ, ರಾಮನ ಲೆಕ್ಕ ಅಷ್ಟೇ ಇರುತ್ತದೆ. ನಿಮಗೆ ಪೂರ್ತಿ ಸಹಕಾರ ಕೊಡುತ್ತಾನೆ, ಟ್ಯಾಕ್ಸ್‌ಗಳನ್ನು ಕೊಡುತ್ತಾನೆ ೧೦–೧೨ ಲಕ್ಷ ರೂಪಾಯಿ ಟ್ಯಾಕ್ಸ್ ಕೊಡುತ್ತಾನೆ, ೭–೮ ಲಕ್ಷ ರೂಪಾಯಿ ಕೆ.ಇ.ಬಿ.ಗೆ ಕೊಡುತ್ತಾನೆ, ಉಳಿದ ಎಲ್ಲಾ ರೀತಿಯ ಸೌಕರ್ಯಗಳನ್ನು ಕೊಡುವಾಗ ಉಳಿದವರು ಅಷ್ಟು ಲಾಭ ತೋರಿಸುವುದಿಲ್ಲ ಎಂದು ಹೇಳಬಹುದು. ಆದರೆ ನಿಜವಾಗಿ ಲಾಭ ಯಾರಿಗೆ ದೊರಕುತ್ತದೆ. ಜನರ ಮೇಲೆ ಪರಿಣಾಮ ಆಗಬೇಕು. ರೈತರಿಗೆ ಎಷ್ಟು ಲಾಭ ಆಗುತ್ತದೆ ಎನ್ನುವುದರ ಕಡೆಗೆ ನಾವು ಲಕ್ಷ್ಯ ಕೊಡಬೇಕು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ತಾವು ಆರ್ಥಿಕ ಮಂತ್ರಿಗಳಾಗಿದ್ದೀರಿ, ಒಂದು ರೌಂಡ್ ನೀವು ಎಲ್ಲಾ ಕೋ-ಆಪರೇಟೀವ್ ಇಂಡಸ್ಟ್ರಿಗಳಿಗೆ ಭೇಟಿ ಕೊಡಿ. ಭೇಟಿಕೊಟ್ಟು ಅವರ ಕಳಕಳಿಯ ಸಲಹೆಗಳನ್ನು ಕೇಳಬೇಕು, ಅವರ ಸಲಹೆಗಳನ್ನು ಕೇಳಿ ಮುತುವರ್ಜಿ ವಹಿಸಿ, ಕೆ.ಇ.ಬಿ.ನವರನ್ನು ನಿಮ್ಮ ಛೇಂಬರಿಗೆ ಕರೆಸಿ ವಿಚಾರಮಾಡಿ. ಇವತ್ತು ಕೆ.ಇ.ಬಿ.ನಲ್ಲಿ ಕಾಮನ್‌ಸೆನ್ಸ್ ಇದೆಯೋ ಏನೋ ಗೊತ್ತಿಲ್ಲ. ನಮ್ಮ ಭಾಗದಲ್ಲಿ ವಿದ್ಯುಚ್ಛಕ್ತಿ ಮುಂಜಾನೆ ೭ಕ್ಕೆ ಬಂದ್ ಆಗುತ್ತದೆ. ಏಳೂವರೆಗೆ ಚಾಲೂ ಆಗುತ್ತದೆ, ಮುಂಜಾನೆ ಏಳಕ್ಕೆ ಬಂದ್ ಆಗಿ, ಏಳೂವರೆಗೆ ಚಾಲೂ ಆದರೆ ಆಲ್ ಎಲೆಕ್ಟ್ರಿಕ್ ಹೋಂಗೆ ಏಕೆ ಕೊಟ್ಟಿದ್ದೀರಿ ಬಂದ್ ಮಾಡಿಬಿಡಿ. ಆಲ್ ಎಲೆಕ್ಟ್ರಿಕ್ ಹೋಂಗೆ ವಿದ್ಯುತ್ ಕೊಟ್ಟು ಅಡಿಗೆ ಮಾಡುವಾಗ ಹುಡುಗರು ಶಾಲೆಗೆ ಹೋಗುವಾಗ, ನಾವು ಅಸೆಂಬ್ಲಿಗೆ ಬರುವಾಗ ವಿದ್ಯುಚ್ಛಕ್ತಿ ಬಂದ್ ಆದರೆ ನಮ್ಮ ಗತಿ ಏನು ಆಗಬೇಕು. ನಮಗೆ ಕೂಳು ಎಲ್ಲಿಂದ ಸಿಗಬೇಕು, ಸ್ನಾನ ಎಲ್ಲಿಂದ ಮಾಡಬೇಕು ? ಆದ್ದರಿಂದ ಯಾವಾಗ ಬಂದ್ ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡಿಯಾದರೂ ಬಂದ್ ಮಾಡಿರಿ, ಯಾರ್ಯಾರಿಗೆ ಯಾವಾಗ ಬಂದ್ ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡದೆ, ವ್ಯವಹಾರ ಜ್ಞಾನವಿಲ್ಲದೆ ಬಂದ್ ಮಾಡಿದರೆ ಜನರಿಗೆ ತೊಂದರೆಯಾಗುತ್ತದೆ. ಮಾನ್ಯ ಸಿಂಧ್ಯರವರು ಮಹಾಭಾರತ ನೋಡುವಾಗ ಎಲೆಕ್ಟ್ರಿಸಿಟಿ ಬಂದ್ ಆಗುತ್ತದೆ ಎಂದು ಹೇಳಿದರು. ಇಂತಹ ಮಾತುಗಳನ್ನು ತಾವು ನಿಜವಾಗಲೂ ಅಲ್ಲಿನ ಛೇರ್ಮನ್‌ರ. ಚೀಫ್ ಇಂಜಿನಿಯರ್‌ರವರ ಲಕ್ಷ್ಯಕ್ಕೆ ತರಬೇಕು? ದುರ್ದೈವ ಇವತ್ತು ಟ್ರಿಪಿಂಗ್ ಬಹಳ ಆಗುತ್ತದೆ ಎಂದು ಅವರಿಗೆ ವರದಿ ಕೊಟ್ಟೆವು ಕುಲಕೋಟಿಯಲ್ಲಿ ಒಂದು ಸಬ್‌ಸ್ಟೇಷನ್ ಸ್ಯಾಂಕ್ಷನ್ ಆಯಿತು. ಸಬ್ ಸ್ಟೇಷನ್ ಆದಮೇಲೆ ಹೊಲ ಇಲ್ಲ ಎಂದು ಹೇಳಿದರು, ಹೊಲ ಕೊಡಿಸಿ ಈಗಾಗಲೇ ೨ ವರ್ಷವಾಯಿತು, ಸಾಮಾನುಗಳೆಲ್ಲಾ ರೆಡಿ ಇದೆ ಎಂದು ಹೇಳುತ್ತಿದ್ದರು, ಇನ್ನೂ ತನಕ ಕೆಲಸ ಆಗಿಲ್ಲ ಹಾಗೇ ಇದೆ. ಅದೇ ಖಾಸಗಿಯವರು, ಟಾಟಾ, ಬಿರ್ಲಾರವರು ಈ ರೀತಿ ತೆಗೆದಿದ್ದರೆ ಆಗುತ್ತಿತ್ತು. ಇದನ್ನು ನಾವು ಪರೀಕ್ಷೆ ಮಾಡಿ ನೋಡಿದೆವು. ನಾವು ಯಾವಾಗಲೂ ಸಹಕಾರಿ ರಂಗದಲ್ಲಿರತಕ್ಕಂಥ ಸಂಸ್ಥೆಗಳನ್ನು ಯಾವರೀತಿ ಪರಿಶೀಲನೆ ಮಾಡುತ್ತೇವೋ ಅದೇ ರೀತಿ ಸರ್ಕಾರಿ ರಂಗದಲ್ಲಿರತಕ್ಕಂಥವನ್ನು ಪರಿಶೀಲನೆ ಮಾಡಿ ನೋಡಿದರೆ ಅದಕ್ಷತೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದಕ್ಕಾಗಿ ತಾವು ವಿಶೇಷವಾದಂಥ ಶ್ರಮವನ್ನು ವಹಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ರೂರಲ್ ಹೌಸಿಂಗ್ ಸಲುವಾಗಿ ಒಂದು ಮಾತನ್ನು ಹೇಳುತ್ತೇನೆ. ಬಹಳ ಸಂತೋಷ. ನಿಮ್ಮ ಭಾಷಣದಲ್ಲೂ ಸಹಿತ ಹೌಸಿಂಗ್ ಹೆಚ್ಚು ಮಾಡುತ್ತೇವೆ, ಒಂದು ಲಕ್ಷ ಮನೆಗಳನ್ನು ಕಟ್ಟುತ್ತೇವೆ. ೧೦ ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳುತ್ತೀರಿ. ನಾನು ಮೊನ್ನೆ ಹುಡ್ಕೋದಲ್ಲಿ ಮಾತನಾಡುವಾಗ ಅವರು ಹೇಳಿದರು. ಹೌಸಿಂಗ್ ಕಾರ್ಯಕ್ರಮಗಳು ಕರ್ನಾಟಕ ರಾಜ್ಯದಲ್ಲಿ ಬಹಳ ಬೆಳೆಯುತ್ತಿವೆ, ಅವರಿಗೆ ಎಷ್ಟಾದರೂ ಸಹಾಯ ಮಾಡಲಿಕ್ಕೆ ತಯಾರಿದ್ದೇವೆ ಎಂದು ಹೇಳಿದರು, ನಾನು ಅದನ್ನು ಡೆಲ್ಲಿಯಲ್ಲಿ ಭೇಟಿಯಾದಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ಅವರೇನೋ ತಯಾರಿದ್ದಾರೆ, ನಾವು ಮಾಡುವ ಕೆಲಸ ಏನಿದೆ. ಇವತ್ತು ಹೌಸಿಂಗ್‌ನಲ್ಲಿ ಯಾವಾಗ

ಮನೆ ಬೇಕಾಗುತ್ತದೆ ಆಗ ನಾವು ಹೋಗಿ ಹೊಲ ಅಕ್ವೈರ್ ಮಾಡುತ್ತೇವೆ. ಮುನ್ನೋಟದಿಂದ ಎಲ್ಲೆಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಬೆಳವಣಿಗೆ ಆಗುತ್ತದೆ ಅಲ್ಲಿ ಬೇಕಾಗುವ ಸ್ಥಳವನ್ನು ಏಕೆ ಅಕ್ವೈರ್ ಮಾಡಬಾರದು. ಅಕ್ವೈರ್ ಮಾಡಿ ಆ ಸ್ಥಳವನ್ನು ಇಟ್ಟರೆ ಯಾವಾಗ ಬೇಕಾದರೂ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬರುತ್ತದೆ. ಮೊದಲೇ ಅಕ್ವೈರ್ ಮಾಡುವುದಕ್ಕೆ ನಿಮಗೆ ಏನು ತೊಂದರೆಯಾಗುತ್ತದೆ. ಸರ್ಕಾರದವರು ಮನೆ ಕಟ್ಟಿಸುತ್ತಾರೆಂದು ತಿಳಿದುಕೊಂಡಿರುತ್ತಾರೆ. ಸ್ಥಳ ತೆಗೆದುಕೊಳ್ಳುವಾಗ ಸವಿಸ್ತಾರವಾಗಿ ತೆಗೆದುಕೊಂಡು ಹಣ ಪಡೆದುಕೊಂಡು ಆಫೀಸರ್ಸ್ ಖರ್ಚು ಅದರ ಮೇಲೆ ಹಾಕಿ ಹೇರಳವಾದಂಥ ಹಣವನ್ನು ನಮ್ಮ ಬಡಬೋರೇಗೌಡನ ಮೇಲೆ ಹಾಕಿದರೆ ಜನ ಹೇಗೆ ತಾಳ್ಮೆಯಿಂದ ಇರುತ್ತಾರೆ ಇವತ್ತು ಹೌಸಿಂಗ್ ಸ್ಕೀಮು ಬಡವರಿಗಾಗಿ ಇರುವಂತಹದ್ದು. ಇದರ ಚಾಲನೆಗೆ ಅನೇಕ ಅಡಚಣೆಗಳು ಬರುತ್ತಿವೆ. ಬೆಂಗಳೂರು ನಗರದಲ್ಲಿ ಕೆಲವು ಖದೀಮರು ಹೌಸಿಂಗ್ ಸೊಸೈಟಿಗಳನ್ನು ಮಾಡಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿರುವುದು ನೂರಾರು ಜನರಿಗೆ ಮೋಸ ಮಾಡಿರುವುದು ಬೆಳಕಿಗೆ ಬಂದಿದೆ. ಜಿ. ವಿ. ಕೆ, ರಾವ್‌ಕಮಿಟಿಯವರು ಹೌಸಿಂಗ್ ಸೊಸೈಟಿಗಳ ಬಗ್ಗೆ ಕೊಟ್ಟಿರುವ ರಿಪೋರ್ಟ್ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು, ನಿಜವಾದಂತಹ ಸದಸ್ಯರುಗಳಿಗೆ ಅನುಕೂಲ ಮಾಡಿ ಕೊಡುವುದು ಒಳ್ಳೆಯದು. ಸುಪ್ರೀಂಕೋರ್ಟ್ ಜಡ್ಜ್ ಒಬ್ಬರು ಸದಸ್ಯರಾಗಿದ್ದು; ಮನೆ ಮಾಡಿಕೊಂಡಿದ್ದರೆ ತಪ್ಪಲ್ಲ. ಉತ್ತಮವಾಗಿ ಕೆಲಸ ಮಾಡತಕ್ಕ ಸಹಕಾರ ಸಂಘಗಳಿಗೆ ರಕ್ಷಣೆ ಇಲ್ಲದೇ ಹೋದರೆ, ಸಹಕಾರ ಚಳುವಳಿಗೆ ಮೈಲಿಗೆ ಆಗುವಂಥ ವಾತಾವರಣ ಬರುತ್ತದೆ. ಸಹಕಾರ ಕ್ಷೇತ್ರ ಪವಿತ್ರವಾದಂಥ ಕ್ಷೇತ್ರ ದೇವರ ಮನೆಗೆ ಹೋದರೆ, ಎಷ್ಟು ಶಾಂತವಾತಾವರಣ ಉಂಟಾಗುತ್ತದೆಯೋ, ಹಾಗೆ ಸಹಕಾರ ಚಳುವಳಿಯಲ್ಲಿಯೂ ಒಂದು ನೆಮ್ಮದಿ ಉಂಟಾಗುತ್ತದೆ. ಈ ಚಳುವಳಿಯಲ್ಲಿ ಕೆಲಸ ಮಾಡುವವರಿಗೆ ಪ್ರೋತ್ಸಾಹ ಸಿಗಬೇಕು. ರೈತರ ಕಲ್ಯಾಣಕ್ಕಾಗಿ ಸಹಕಾರ ಸಂಘಗಳ ಮುಖಾಂತರ ಪ್ರೊಸೆಸಿಂಗ್ ಯೂನಿಟ್‌ಗಳನ್ನು ಮಾಡಿ, ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI M. BHAKTHAVATSALAM (K.G.F.).—Mr. Speaker Sir, it is my honour and privilege to extend my thanks on behalf of myself and my party to the address given by His Excellency the Governor of our State, pertaining to the Budget Session of 1990-91.

It is a thought provoking speech and meant to accelerate the economy of the State.

The policies that are adopted to improve the State are worthy one and appreciated by one and all, The budget estimation for the year 1990-91 is enthusiastically welcomed. This has been followed on the principles to improve the status of the poor people. The priority given to the unemployment problems, the housing problems and the supply of water schemes are more laudable.

At this juncture, my pleadings are that the Kolar district for its administrative convenience and efficient service, should be divided into South and North districts and for the South district, in view of the majority of Scheduled Caste population, it would be more appropriate to name it in the name of Dr. Ambedkar and Kolar Gold Field should be made its headquarters.

Then, the closure of B.G.M.L. should be stopped. The State Public Sector industry should be started. Housing colony for aided, un-aided and government teachers should be constructed at K.G.F. A Special Employment Exchange for SC/ST and Minorities should be established. Additional income generating societies to women folk should be created and equal rights for women in property should be given.

Diesel Generator should be installed for pumping of drinking water at Bethamangala water tank. A Fire Station should be opened at K.G.F. The police staff should be increased at K.G.F.

I myself and on behalf of my party extend our support to the Congress (I) Government at all occasions for their progressive policies and programmes and its doctrines, Thank you.

† ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ).—ಸನ್ಮಾನ್ಯ ಅಧ್ಯಕ್ಷರೇ, ೧೯೮೦–೮೧ನೇ ಸಾಲಿಗೆ ಸಂಬಂಧಪಟ್ಟಂತೆ ಮಾನ್ಯ ಹಣಕಾಸಿನ ಸಚಿವರು ಮಂಡಿಸಿದಂಥ ಈ ಬಜೆಟ್ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿ ಕೆಲವು ವಿಷಯಗಳನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ, ಇವೊತ್ತಿನ ದಿವಸ ಈ ಒಂದು ಸಂದರ್ಭದಲ್ಲಿ ಈ ಬಜೆಟ್ಟಿನ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳುವುದಾದರೆ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಹಿಂದಿನ ಸರ್ಕಾರದವರು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಿ ಅದಕ್ಕೆ ಹಣಕಾಸಿನ ನೆರವನ್ನು ಕೊಟ್ಟಿದ್ದರು. ಆದರೆ ಶ್ರೀಮಾನ್ ಬೊಮ್ಮಾಯಿಯವರು ಬಂದಮೇಲೆ ಈ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಯಾಗಬೇಕಾದರೆ ಇಲ್ಲಿ ಒಂದು ಅಭಿವೃದ್ಧಿ ಮಂಡಲಿ ಮಾಡಬೇಕಾದ್ದು ಅವಶ್ಯವಾಗಿದೆ ಎಂದು ತಿಳಿದುಕೊಂಡು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಮಾಡಿ ಸುಮಾರು ಎರಡು ಕೋಟಿ ರೂಪಾಯಿ ಬಜೆಟ್‌ನಲ್ಲಿ ಇಟ್ಟಿದ್ದರು. ಆದರೆ ರಾಜ್ಯಪಾಲರ ಆಡಳಿತದಲ್ಲಿ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಂಥ ಹಣದಲ್ಲಿ ಒಂದು ಪೈಸಾ ಕೂಡ ಖರ್ಚು ಮಾಡದೆ ಇರುವುದರಿಂದ ನಮ್ಮ ಭಾಗ ಬಹಳ ಹಿಂದೆ ಬಿದ್ದಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಹೈದರಾಬಾದ್ ಕರ್ನಾಟಕ ಭಾಗದವರಾದ ವೀರೇಂದ್ರ ಪಾಟೀಲರವರು ಕೆಲವೊಮ್ಮೆ ಭಾಷಣಗಳನ್ನು ಮಾಡುವಾಗ ನಮ್ಮ ಭಾಗದಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ರಚನೆ ಆಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಈ ಮಾತನ್ನು ಹಿಂದೆ ಹಲವಾರು ಸಾರಿ ಹೇಳಿದ್ದಾರೆ. ನಮ್ಮ ಪ್ರದೇಶದ ಜನರ ಪರವಾಗಿ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಪ್ರಸ್ತುತ ಸಾಲಿನಲ್ಲಿ ೪೦ ಕೋಟಿ ರೂಪಾಯಿಗಳನ್ನು ಈ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಗೆ ಎನಿಟ್ಟಿದ್ದಾರೆ ಅದು ಆ ಪ್ರದೇಶದ ಅಭಿವೃದ್ಧಿಗೆ ಸಂಪೂರ್ಣವಾಗಿ ಖರ್ಚಾಗಬೇಕು. ಇವೊತ್ತು ನಮ್ಮ ಭಾಗ ಬಹಳ ಹಿಂದುಳಿದಿದೆ. ಹಿಂದುಳಿದ ಪ್ರದೇಶಗಳಾದ ಬೀದರ್, ರಾಯಚೂರು, ಗುಲ್ಬರ್ಗ ಭಾಗಗಳು ಏನಿವೆ ಆ ಭಾಗಗಳಲ್ಲಿ ಯಾವ ಕೆಲಸಗಳನ್ನೂ ಮಾಡಿಲ್ಲ. ಎಲ್ಲಾ ರಂಗಗಳಲ್ಲಿಯೂ ನಮ್ಮ ಏರಿಯಾ ಬಹಳ ಹಿಂದೆ ಬಿದ್ದಿದೆ. ಆದ್ದರಿಂದ ಅದರ ಬಗ್ಗೆ ವಿಚಾರ ಮಾಡಿ ಅದಕ್ಕೆ ಹಣಕಾಸಿನ ನೆರವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯನ್ನು ಮಾಡುವಾಗ ವಿಶೇಷವಾಗಿ ಒಂದು ವಿಷಯವನ್ನು ಗಮನದಲ್ಲಿಡಬೇಕಾಗಿದೆ. ಆಂಧ್ರಪ್ರದೇಶದಲ್ಲಿರತಕ್ಕ ತೆಲಂಗಾಣ ಅಭಿವೃದ್ಧಿ ಮಂಡಲಿ ಮತ್ತು ಮಹಾರಾಷ್ಟ್ರ ಪ್ರದೇಶದಲ್ಲಿರತಕ್ಕ ಮಹಾರಾಷ್ಟ್ರ ಅಭಿವೃದ್ಧಿ ಮಂಡಲಿ, ಇವುಗಳ ಬಗ್ಗೆ ಅಧ್ಯಯನ ಮಾಡಿ ಸರಿಯಾದ ರೀತಿಯಲ್ಲಿ ಈ ೪೦ ಕೋಟಿ ರೂಪಾಯಿಗಳು ಸರಿಯಾದ ರೀತಿಯಲ್ಲಿ ಖರ್ಚು ಆಗುವಂತೆ ಮಾಡಬೇಕು. ಜನರ ಅಭಿವೃದ್ಧಿ ಕೆಲಸಗಳು ಆಗುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈಗ ಬಹಳಷ್ಟು ದುಡ್ಡು ಕೊಡುವಂಥ ಪ್ರಸಂಗ ಇರುವುದರಿಂದ, ಬಹಳ ಎಚ್ಚರಿಕೆ ವಹಿಸಿ ನಮ್ಮ ಹೈದರಾಬಾದ್ ಕರ್ನಾಟಕದಲ್ಲಿರತಕ್ಕ ಶಾಸಕರನ್ನು ಈ ಒಂದು ಅಭಿವೃದ್ಧಿ ಮಂಡಲಿಯಲ್ಲಿ ಸೇರಿಸಿ, ಆ ಒಂದು ಅಭಿವೃದ್ಧಿ ಮಂಡಲಿಯ ಮುಖಾಂತರ ಪ್ರತಿಯೊಂದು ತಾಲ್ಲೂಕಿಗೂ ೨೦–೨೫ ಲಕ್ಷ ರೂಪಾಯಿಗಳಂತೆ ಕೊಟ್ಟಿದ್ದೇ ಆದರೆ ಯಾವ ಯಾವ ಭಾಗದಲ್ಲಿ, ಯಾವ ಯಾವ ತಾಲ್ಲೂಕಿನಲ್ಲಿ ಏನೇನು ಕೆಲಸಗಳು ಆಗಿಲ್ಲ, ಆ ಕೆಲಸಗಳನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಮ್ಮ ಹಣಕಾಸಿನ ಸಚಿವರು ಈ ಒಂದು ವಿಷಯದಲ್ಲಿ ಹೆಚ್ಚು ಗಮನಹರಿಸಿ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಗೆ ಹೆಚ್ಚು ಹಣವನ್ನು ಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನೂ ಮತ್ತೊಂದು ವಿಚಾರ ಅಂದರೆ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಸಾಕಷ್ಟು ನೀರಾವರಿ ಪ್ರದೇಶ ಇದ್ದರೂ ಸಹ ಇದಕ್ಕೆ ಹೆಚ್ಚಿನ ಹಣಕಾಸಿನ ನೆರವನ್ನು ಕೊಡದೇ ಇರುವುದರಿಂದ ಅನ್ಯಾಯವಾಗುತ್ತಿದೆ. ಬೆಂಗಳೂರು ರಾಜಧಾನಿಯಿಂದ ದೂರ ಇರತಕ್ಕ ಗುಲ್ಬರ್ಗ ಮತ್ತು

ಬೀದರ್ ಜಿಲ್ಲೆಗಳಲ್ಲಿ ಹೆಚ್ಚಿನ ನೀರಾವರಿ ಪ್ರದೇಶ ಇದ್ದರೂ ಸಹ ನೀರಾವರಿಗಾಗಿ ಹೆಚ್ಚಿನ ಹಣಕಾಸು ನೆರವು ಕೊಡದೇ ಇರುವುದರಿಂದ ನೀರಾವರಿ ಯೋಜನೆಯಲ್ಲಿ ಕಾಲುವೆ ಕೆಲಸಗಳಲ್ಲಿ ಕುಂಠಿತವಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಭಾಗದಲ್ಲಿರತಕ್ಕ ನೀರಾವರಿ ಕಾರ್ಯಗಳಿಗೆ ಹೆಚ್ಚಿನ ಗಮನಹರಿಸಿ ಹೆಚ್ಚಿನ ಸೌಲಭ್ಯ ಒದಗಿಸಿಕೊಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಖೇದ ಆಗುತ್ತದೆ. ಏಕೆಂದರೆ ನಮ್ಮ ಭಾಗದ ಕಾರಂಜಾ ಯೋಜನೆ ಬಹಳ ಬೃಹತ್ ಪ್ರಮಾಣದ ಯೋಜನೆ. ಇದಕ್ಕೆ ಈ ವರ್ಷ ೬ ಲಕ್ಷ ರೂಪಾಯಿ ಮಾತ್ರ ಇಟ್ಟಿದ್ದಾರೆ. ಇದು ಮೈನ್‌ಟೆನೆನ್ಸಿಗೂ ಕೂಡ ಸಾಲುವುದಿಲ್ಲ. ಇದನ್ನು ಅರ್ಥಮಾಡಿಕೊಂಡು ನಮ್ಮ ಅರ್ಥ ಮಂತ್ರಿಗಳು ಮತ್ತು ಲೋಕೋಪಯೋಗಿ ಇಲಾಖಾ ಮಂತ್ರಿಗಳು ಕಾರಂಜಾ ನೀರಾವರಿ ಯೋಜನೆಗೆ ಹೆಚ್ಚಿನ ಹಣಕಾಸಿನ ನೆರವು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಅದೇ ರೀತಿ ಅಪ್ಪರ್ ಮುಲ್ಲಾಮಾರಿ ಯೋಜನೆ. ಲೋಯರ್ ಮುಲ್ಲಾಮಾರಿ ಯೋಜನೆ, ಚುಳಕಿನಾಳ ಯೋಜನೆಗೆ ಬಜೆಟ್ಟಿನಲ್ಲಿ ಹೆಚ್ಚಿನ ಹಣಕಾಸಿನ ನೆರವನ್ನು ಕೊಡದೇ ಇದ್ದರೆ ನಮ್ಮ ಭಾಗಕ್ಕೆ ತೊಂದರೆಯಾಗುತ್ತದೆ. ಅಪ್ಪರ್ ಮುಲ್ಲಾಮಾರಿ ಯೋಜನೆಗೆ ೬೦ ಲಕ್ಷ ರೂಪಾಯಿಗಳ ಹಣವನ್ನು ಮಾತ್ರ ಇಡಲಾಗಿದೆ. ಚುಳಕಿನಾಳ ಯೋಜನೆಗೆ ೨,೫೦,೦೦೦೦೦ ರೂಪಾಯಿಗಳನ್ನು ಇಡಲಾಗಿದೆ. ಲೋಯರ್ ಮುಲ್ಲಾಮಾರಿಗೆ ೩ ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಹಿಂದುಳಿದಂತಹ ಪ್ರದೇಶವನ್ನು ಮುಂದಕ್ಕೆ ತರಬೇಕಾದರೆ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣಕಾಸಿನ ನೆರವನ್ನು ಕೊಟ್ಟರೆ ಮಾತ್ರ ಅದು ಮುಂದಕ್ಕೆ ಬರುತ್ತದೆ. ಹೈದರಾಬಾದ್ ಕರ್ನಾಟಕದ ಭಾಗ ಕೂಡ ಕನ್ನಡ ನಾಡಿನ ಒಂದು ಭಾಗ. ಆ ಹಿಂದುಳಿದಂತಹ ಪ್ರದೇಶವನ್ನು ಮುಂದಕ್ಕೆ ತರಲು ಹೆಚ್ಚಿನ ಅನುಕೂಲತೆಯನ್ನು ಸರಕಾರ ಮಾಡಿಕೊಡಲು ಪ್ರಯತ್ನ ಪಡಬೇಕು. ಬೀದರ್ ರಾಯಚೂರು ಜಿಲ್ಲೆಗಳಲ್ಲಿ ರಸ್ತೆ ವ್ಯವಸ್ಥೆ ಸರಿಯಾಗಿಲ್ಲ, ಅವ್ಯವಸ್ಥೆಯಾಗಿದೆ. ನಾವು ಅಲ್ಲಿಗೆ ಹೋದರೆ ಯಾವುದೋ ರಾಜ್ಯದಲ್ಲಿ ಹೋಗುತ್ತಿದ್ದೇವೆನ್ನುವ ಭಾವನೆ ಬರುತ್ತದೆ. ನಮಗೆ ಸ್ವಾತಂತ್ರ್ಯ ಬಂದು ಸುಮಾರು ೪೦–೪೫ ವರ್ಷಗಳು ಕಳೆದರೂ ಕೂಡ ರಸ್ತೆಗಳು ಸರಿಯಾಗಿಲ್ಲ. ಪ್ರಸ್ತುತ ವರ್ಷದ ಬಜೆಟ್‌ನಲ್ಲಿ ಇದಕ್ಕೆ ಹೆಚ್ಚು ಹಣವನ್ನು ಇಡುವ ಮೂಲಕ ಆ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕು. ಅಲ್ಲಿನ ರಸ್ತೆಯನ್ನು ದುರಸ್ತಿ ಮಾಡುವುದು, ಟಾರ್ ಹಾಕುವುದು ಇಲ್ಲವೇ ಹೊಸದಾಗಿ ರಸ್ತೆಗಳನ್ನು ಮಾಡುವುದು ಈ ಕೆಲಸಗಳಿಗೋಸ್ಕರ ಸರಕಾರದವರು ಹೆಚ್ಚಿನ ಹಣಕಾಸಿನ ನೆರವನ್ನು ಕೊಡಬೇಕು. ಹಿಂದೆ ಜನತಾ ದಳದ ಸರಕಾರ ಅಧಿಕಾರದಲ್ಲಿದ್ದಾಗ ನಮ್ಮ ಭಾಗದಲ್ಲಿರತಕ್ಕಂತಹ ರಸ್ತೆಗಳನ್ನು ರಾಷ್ಟ್ರೀಕರಣ ಮಾಡುವ ಮುಖಾಂತರವಾಗಿ ಮತ್ತು ಗ್ರಾಮಗಳಿಗೆ ಹೆಚ್ಚಿನ ಬಸ್ ಸೌಕರ್ಯ ಮಾಡುವ ಮೂಲಕ ಜನರಿಗೆ ಅನುಕೂಲವನ್ನು ಮಾಡಿಕೊಟ್ಟಿತ್ತು. ಆದರೆ ಈ ಬಸ್‌ಗಳು ಹೋಗಬೇಕಾದರೆ ಅಲ್ಲಿನ ರಸ್ತೆಗಳು ಸರಿಯಾಗಿ ಇರಬೇಕು. ಇದು ಅತ್ಯಂತ ಅವಶ್ಯ ಇದೆ. ಮಾನ್ಯ ಮಂತ್ರಿಗಳು ಈ ವರ್ಷ ಇಲ್ಲವೇ ಮುಂದಿನ ವರ್ಷವಾದರೂ ನಮ್ಮ ಭಾಗದಲ್ಲಿರತಕ್ಕಂತಹ ರಸ್ತೆಗಳನ್ನು ಸರಿಯಾದಂತಹ ರೀತಿಯಲ್ಲಿ ರಿಪೇರಿ ಮಾಡಿಸಲು ಹೆಚ್ಚಿನ ಹಣಕಾಸಿನ ನೆರವನ್ನು ಕೊಡಬೇಕು. ಇದು ಹಿಂದುಳಿದಂತಹ ಭಾಗವೆಂದು ಕೇವಲ ಭಾಷಣದಲ್ಲಿ ಹೇಳಿದರೆ ಮಾತ್ರ ಸಾಲದು. ಹೈದರಾಬಾದ್ ಕರ್ನಾಟಕದಲ್ಲಿ ನೈಸರ್ಗಿಕವಾದ ಸಂಪತ್ತು ಬಹಳ ಇದೆ. ಈ ಸಂಪತ್ತನ್ನು ಉಪಯೋಗ ಮಾಡಿಕೊಂಡರೆ ಇದು ಕೂಡ ಹೆಚ್ಚಿನ ಅನುಕೂಲತೆಯನ್ನು ಮಾಡಿಕೊಡುವಂತಹ ಒಂದು ಏರಿಯಾ ಆಗಬಹುದೆಂದು ಹೇಳಬಹುದು. ಇನ್ನು ನಮ್ಮ ಭಾಗದಲ್ಲಿ ಹಲವಾರು ತಾಂಡಾ, ವಾಡಿಗಳಿವೆ ಅಲ್ಲಿಗೆ ಸರಿಯಾದಂತಹ ಮತ್ತು ಹೆಚ್ಚಿನ ರಸ್ತೆ ವ್ಯವಸ್ಥೆ ಇಲ್ಲ, ವಿದ್ಯುಚ್ಛಕ್ತಿ ವ್ಯವಸ್ಥೆ ಇಲ್ಲ ಅಂತಹ ಹಿಂದುಳಿದ ಗ್ರಾಮಗಳನ್ನು ಉದ್ಧಾರ ಮಾಡಬೇಕಾದರೆ ಅವರಿಗೆ ಸರಿಯಾದಂತಹ ಸೌಕರ್ಯವನ್ನು ಒದಗಿಸಿಕೊಡಬೇಕು. ಲಂಬಾಣಿ ಪಂಗಡದವರು ಮತ್ತು ಆ ತಾಂಡಾ ಮತ್ತು ವಾಡಿಗಳಲ್ಲಿರತಕ್ಕಂತಹವರು ಸರಿಯಾದಂತಹ ವ್ಯವಸ್ಥೆ ಇಲ್ಲದೆ ಊರು ಬಿಟ್ಟು ಬೇರೆ ಬೇರೆ ಕಡೆಯು ಗುಡ್ಡಗಾಡು ಪ್ರದೇಶಕ್ಕೆ ಹೋಗಿ ಅಲ್ಲಿ ಉಪ ಜೀವನ ಮಾಡುವುದು ಕಷ್ಟವಾಗುತ್ತದೆ. ಮುಂದಿನ ವರ್ಷದ ಬಜೆಟ್ಟಿನಲ್ಲಾದರೂ ಈ ತಾಂಡಾ, ವಾಡಿಗಳಿಗೆ ಸರಿಯಾದಂತಹ ರಸ್ತೆ ವ್ಯವಸ್ಥೆಯನ್ನು ಮಾಡುವ ಮೂಲಕ ಆ ಭಾಗದ ಜನರಿಗೆ ಅನುಕೂಲವನ್ನು ಮಾಡಿಕೊಡಬೇಕು. ಸಾರಿಗೆ ವ್ಯವಸ್ಥೆ ಸರಿಯಾಗಿಲ್ಲದ ಕಾರಣದಿಂದಾಗಿ ಅಲ್ಲಿಗೆ ಬಸ್‌ಗಳು ಬಂದರೂ ಕೂಡ, ಬಸ್ ರಾಷ್ಟ್ರೀಕರಣ ಮಾಡಿದ ಮೇಲೂ ಕೂಡ ತೊಂದರೆಯಾಗುತ್ತಿದೆ. ಅಲ್ಲಿನ ಯಾವ ಗ್ರಾಮಗಳಿಗೂ ಕೂಡ ಸರಿಯಾಗಿ ಬಸ್ ಹೋಗುತ್ತಿಲ್ಲ. ಮಾನ್ಯ ಜಾರ್ಜ್‌ರವರು ಅಲ್ಲಿಗೆ ಭೇಟಿ ಕೊಟ್ಟು ಆ ಭಾಗದಲ್ಲಿರತಕ್ಕಂತಹ ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಈ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಹೆಚ್ಚಿನ ರೀತಿಯಲ್ಲಿ ಅನುಕೂಲತೆ ಮಾಡಿಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು. ಮಾನ್ಯ ಸಿಂಧ್ಯ ರವರು ಸಾರಿಗೆ ಮಂತ್ರಿಗಳಾಗಿದ್ದಾಗ ಬೀದರ್ ಭಾಗಕ್ಕೆ ಕೆಎಸ್‌ಆರ್‌ಟಿಸಿ ಡಿವಿಜನ್ ಮಾಡಬೇಕೆಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು. ನಮ್ಮ ಭಾಗದಲ್ಲಿ ಒಳ್ಳೆಯ ಸಾರಿಗೆ ವ್ಯವಸ್ಥೆಯನ್ನು ಕೂಡ

ಬೇಕಾದರೆ ಒಳ್ಳೆಯ ರಸ್ತೆಯನ್ನು ಮಾಡಬೇಕು, ನೀವು ಅಲ್ಲಿಗೆ ಡಿವಿಜನ್ ಮತ್ತು ರಸ್ತೆಯನ್ನು ಸರಿ ಮಾಡಿದರೆ ಕರ್ನಾಟಕದ ಜನರು ತಮ್ಮನ್ನು ಇಷ್ಟು ಬಹುಮತದಿಂದ ಆರಿಸಿರುವುದು ಸಾರ್ಥಕ ವಾಗುತ್ತದೆ. ಕರ್ನಾಟಕದ ಜನತೆ ತಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಒಳ್ಳೆಯ ಕೆಲಸ ಮಾಡಿ ಅವರ ಮೆಚ್ಚುಗೆಯನ್ನು ತಾವು ಗಳಿಸಬೇಕು. ಬೀದರ್ ಗುಲ್ಬರ್ಗ ಜಿಲ್ಲೆಯ ಬಗ್ಗೆ ಹೇಳುವು ದಾದರೆ ಅಲ್ಲಿ ಬಹಳಷ್ಟು ರಸ್ತೆಗಳು ರಾಷ್ಟ್ರೀಕರಣವಾದ ಮೇಲೆ ಚಿಂಚೋಳಿ ಘಟಕ, ಹುಮ್ನಾಬಾದ್ ಘಟಕ, ಬಸವಕಲ್ಯಾಣ, ಬೀದರ್ ಮುಂತಾದ ಕಡೆಗಳಲ್ಲಿ ಡಿವಿಜನ್‌ಗಳನ್ನು ಮಾಡಿದರೆ ಆ ಭಾಗದ ಜನತೆಗೆ ಅನುಕೂಲವಾಗುತ್ತದೆ ಕೆ ಎಸ್ ಆರ್‌ಟಿಸಿಗೂ ಕೂಡ ಹೆಚ್ಚಿನ ಆದಾಯ ಬರುತ್ತದೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಹಿಂದೆ ಮಾಡುತ್ತೇವೆಂದು ಹೇಳಿದಂತಹ ಮಂಜೂರಾತಿ ಯಾವಂತಹ ಕೆಎಸ್‌ಆರ್‌ಟಿಸಿ ವಿಭಾಗವನ್ನು ಶೀಘ್ರವಾಗಿ ಮಾಡಲಿಕ್ಕೆ ತಾವು ಪ್ರಯತ್ನ ಪಡಬೇಕು. ನಮ್ಮಲ್ಲಿ ಬಹಳ ಹಳೆಯ ಬಸ್‌ಗಳು ಇವೆ. ಬೆಂಗಳೂರು ಮತ್ತು ಮೈಸೂರಿನವರಿಗೆ ಮಾತ್ರ ಹೊಸ ಬಸ್ ವ್ಯವಸ್ಥೆ ಸಿಗುತ್ತದೆ. ಬಸವಕಲ್ಯಾಣದಲ್ಲಿ ಉತ್ತಮವಾದ ಬಸ್ ಡಿಪೋ ಅನ್ನು ಮಾನ್ಯ ಸಿಂಧ್ಯ ರವರು ಮಾಡಿಸಿಕೊಟ್ಟರು. ಆದರೆ ಅಲ್ಲಿ ಹಳೆಯ ಬಸ್‌ಗಳು ಓಡಾಡುತ್ತಿರುವುದರಿಂದಾಗಿ ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಆದ್ದರಿಂದ ಅತಿ ಶೀಘ್ರವಾಗಿ ನಮ್ಮ ಭಾಗಕ್ಕೆ ಹೊಸ ಬಸ್ಸುಗಳನ್ನು ಕೊಡ ಬೇಕು. ನೀವು ಬೆಂಗಳೂರಿನಲ್ಲಿರತಕ್ಕ ಬಿ, ಟಿ. ಎಸ್. ಗೆ ಹೆಚ್ಚು ಹೆಚ್ಚಿನ ಹೊಸ ಬಸ್ಸುಗಳನ್ನು ಕೊಡುತ್ತಿದ್ದೀರಿ. ಇದನ್ನು ನೋಡಿದರೆ ಒಂದೊಂದು ಪ್ರದೇಶಕ್ಕೂ ತಾರತಮ್ಯವನ್ನು ಮಾಡು ತ್ತಿದ್ದೀರೆಂದು ನಾನು ಹೇಳಲೇಬೇಕಾಗಿದೆ. ಈ ದೃಷ್ಟಿಕೋನವನ್ನು ಸರ್ಕಾರದವರು ಇಟ್ಟುಕೊಂಡು ನಮ್ಮ ರಾಜ್ಯದಲ್ಲಿ ಅತಿ ಹಿಂದುಳಿದಿರತಕ್ಕ ನಮ್ಮ ಪ್ರದೇಶವನ್ನು ನೀವು ಮುಂದಕ್ಕೆ ತರಬೇಕಾದರೆ ಆ ಭಾಗಕ್ಕೆ ಹೆಚ್ಚಿನ ಕಾಳಜಿಯನ್ನು ವಹಿಸಿ ಹೊಸ ಹೊಸ ಬಸ್ಸುಗಳನ್ನು ಕೊಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಬಿ.ಕೆ. ಶಿವಕುಮಾರ್.—ನೀವು ಸಚಿವರಾಗಿದ್ದಾಗ ನಿಮ್ಮ ಬೀದರ್ ಜಿಲ್ಲೆಗೇ ಎಲ್ಲಾ ಅನುಕೂಲ ಗಳನ್ನೂ ಮಾಡಿಸಿಕೊಂಡಿರಿ ಎಂದು ಕೆಲವರು ಹೇಳುತ್ತಿದ್ದಾರೆ. ಎಲ್ಲಾ ಕೆಲಸಗಳನ್ನೂ ನೀವೇ ಮಾಡಿ ಕೊಂಡರೆ ಅದಕ್ಕೆ ತಾಪತ್ರಯವೇ ಇಲ್ಲ. ಬೇರೆ ಕಡೆಗೆ ಮಂಜೂರಾಗಿದ್ದ ಕೆ.ಎಸ್.ಆರ್ ಟಿ ಸಿ. ಬಸ್ ಡಿಪೋವನ್ನು ನಿಮ್ಮ ಜಿಲ್ಲೆಯಲ್ಲಿಯೇ ಹಾಕಿಸಿಕೊಂಡಿರಿ ಮತ್ತು ಹೊಸ ಬಸ್ಸುಗಳನ್ನೇ ಹಾಕಿಸಿಕೊಂಡಿರಿ. ಅಂತ ಮಾನ್ಯ ಖಂಡ್ರೆಯವರು ಆಪಾದನೆ ಮಾಡಿದ್ದಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.—ಇನ್ನು ಎರಡನೆಯದಾಗಿ ನಮ್ಮ ಬೀದರ್ ಜಿಲ್ಲೆಯಲ್ಲಿ ನೀರಾವರಿ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನಮ್ಮ ಜಿಲ್ಲೆಯಲ್ಲಿ ನೈಸರ್ಗಿಕ ಸಂಪತ್ತಿದೆ. ಬೋರ್‌ವೆಲ್ ಮತ್ತು ಬಾವಿಗಳ ಮುಖಾಂತರ ನೀರಾವರಿಗೆ ನೀರನ್ನು ಕೊಡತಕ್ಕ ಕೆಲಸ ವನ್ನು ನಾವು ಮಾಡುತ್ತಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯುತ್ತೇವೆ. ಬಹುಶಃ ಇಡೀ ಕರ್ನಾಟಕದಲ್ಲಿಯೇ ಅತೀ ಹೆಚ್ಚಿನ ಕಬ್ಬನ್ನು ಬೆಳೆಯತಕ್ಕ ಜಿಲ್ಲೆ ನಮ್ಮದು ಎಂದು ಹೇಳಿದರೂ ಕೂಡ ತಪ್ಪಾಗಲಾರದು. ಆದರೆ ವಿದ್ಯುಚ್ಛಕ್ತಿಯ ಕೊರತೆಯಿಂದಾಗಿ ರೈತರು ತೊಂದರೆಗೀಡಾಗಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ಭಾಗದಲ್ಲಿ ವಿದ್ಯುತ್ ಲೈನುಗಳನ್ನು ವ್ಯವಸ್ಥಿತವಾಗಿ ಹಾಕಿಸಿಕೊಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಭಾಗದಲ್ಲಿ ೧೩ ಕೋಟಿ ರೂಪಾಯಿಗಳ ಬೀದರ್ ಮತ್ತು ರಾಯಚೂರು ಥರ್ಮಲ್ ಪ್ಲಾಂಟ್‌ಗಳು ಇರುವುದರಿಂದ ಇಲ್ಲಿಂದ ಹೊಸ ಲೈನುಗಳು ಮಂಜೂರಾಗಿವೆ. ಆದ್ದರಿಂದ ಈ ಲೈನುಗಳನ್ನು ಹಾಕುವ ಕಾರ್ಯ ಶೀಘ್ರಗತಿಯಿಂದ ಆಗುವಂತೆ ಸರ್ಕಾರದವರು ಕ್ರಮ ತೆಗೆದು ಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ರಾಯಚೂರು ವಿದ್ಯುತ್ ಘಟಕದಿಂದ ಶಹಬಾದ್ ಮತ್ತು ಹುಮ್ನಾಬಾದ್‌ವರೆಗೆ ಹೊಸ ಲೈನಿನ ವ್ಯವಸ್ಥೆ ಮಾಡಿದರೆ ಬೀದರ್ ಜಿಲ್ಲೆಯ ಜನರಿಗೆ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಸರ್ಕಾರದವರು ಕೊಟ್ಟಂತಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಗಮನ ದಲ್ಲಿಟ್ಟುಕೊಂಡು ಅತೀಶೀಘ್ರವಾಗಿ ಕೆಲಸ ಮಾಡಬೇಕು.

ಇನ್ನು ಈಗ್ಗೆ ಎರಡು ವರ್ಷಗಳ ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿ ಗಳಾಗಿದ್ದಾಗ ನಮ್ಮ ಬೀದರ್‌ನಲ್ಲಿ ಡೀಸಲ್ ಜನರೇಟರ್ ಮಂಜೂರಾಗಿತ್ತು. ಈ ವಿಚಾರವನ್ನು ಅವರ ಭಾಷಣದಲ್ಲಿ, ರೇಡಿಯೋದಲ್ಲಿ, ಪತ್ರಿಕೆಗಳಲ್ಲಿ ನೋಡಿ ಕೇಳಿದ್ದೇವೆ. ಆದರೆ ಆ ಡೀಸಲ್ ಜನರೇಟರ್ ಅನ್ನು ಪ್ರಾರಂಭಿಸುವ ಕಾರ್ಯ ಯಾವ ಮಟ್ಟದಲ್ಲಿದೆ ಎಂಬುದು ಗೊತ್ತಾಗಲಿಲ್ಲ, ಸುಮಾರು ೧೮ ಕೋಟಿ ರೂಪಾಯಿಗಳನ್ನು ಈ ದಿಸೆಯಲ್ಲಿ ಖರ್ಚುಮಾಡಿ ಬೀದರ್‌ನಲ್ಲಿ ಕೈಗಾರಿಕಾ ಅಭಿವೃದ್ಧಿ ಪ್ರದೇಶ ಎಂದು ಮಾಡಿದ್ದಾರೆ. ಆದ್ದರಿಂದ ನಮ್ಮ ಭಾಗಕ್ಕೆ ಡೀಸಲ್ ಜನರೇಟರ್ ಅತ್ಯಂತ ಅವಶ್ಯಕವಿದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನಹರಿಸಿ ಡೀಸೆಲ್ ಜನರೇಟರ್‌ನ ಕಾರ್ಯವನ್ನು ಪ್ರಾರಂಭ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಬೀದರ್ ಜಿಲ್ಲೆ ನಮ್ಮ ರಾಜಧಾನಿಗೆ ಬಹಳದೂರವಿರುವುದರಿಂದ ಅಲ್ಲಿಂದ ಇಲ್ಲಿಗೆ ಬಂದು ಹೋಗುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಸಾಕಷ್ಟು ಕೈಗಾರಿಕೆಗಳು ನಮ್ಮ ಪ್ರದೇಶಕ್ಕೆ ಬರುತ್ತಿರುವುದರಿಂದ ಅಲ್ಲಿಗೆ ಹೋಗಿಬರಲು ಸಂಚಾರ ಸೌಲಭ್ಯ ಸಾಕಷ್ಟು ಇಲ್ಲ. ಈಗ ನಮ್ಮ ಬೀದರ್‌ನಲ್ಲಿ ಏರೋಡ್ರಂ ಸಿದ್ಧವಾಗಿದ್ದರೂ ಕೂಡ ಈ ವಾಯುದೂತ್ ಸಂಚಾರ ವ್ಯವಸ್ಥೆ ಬಹಳ ಬಹಳ ವಿಳಂಬವಾಗುತ್ತಿದೆ. ಈ ವಾಯುದೂತ್ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ಆ ಸಂಚಾರ ಸೌಲಭ್ಯದಲ್ಲಿ ಅತೀ ಹಿಂದುಳಿದಿರತಕ್ಕ ನಮ್ಮ ಬೀದರ್ ಜಿಲ್ಲೆಯನ್ನು ಮುಂದಕ್ಕೆ ತರಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಹಲವಾರು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡ ಬಯಸುತ್ತೇನೆ. ಸಹಕಾರಿ ರಂಗದಲ್ಲಿ ಒಳ್ಳೆಯ ಅನುಭವಿಗಳಾದ ಮಾನ್ಯ ಕೆ. ಹೆಚ್. ಪಾಟೀಲರು ನಮ್ಮ ಸಹಕಾರಿ ಕ್ಷೇತ್ರದ ಮುಖಂಡರಾಗಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ವಿಶೇಷವಾದ ಆಸಕ್ತಿಯಿಂದ ಕೆಲಸ ಮಾಡತಕ್ಕ ಪ್ರಮುಖ ಲೀಡರ್‌ಗಳು ನಮ್ಮ ಬೀದರ್ ಜಿಲ್ಲೆಯಲ್ಲಿದ್ದಾರೆ. ಉದಾಹರಣೆಗೆ ಹೇಳುವುದಾದರೆ ವೀರಶೆಟ್ಟಿ ಕುಸನೂರು. ಗುರುಪಾದಪ್ಪ ಇನ್ನೂ ಮುಂತಾದವರಿದ್ದಾರೆ. ಅವರು ಸಹಕಾರಿ ಕ್ಷೇತ್ರದಲ್ಲಿ ಬಹಳ ನುರಿತವರಾಗಿದ್ದಾರೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ತಾವು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕು. ನಾನು ಈಗಾಗಲೇ ಹೇಳಿದಂತೆ ನಮ್ಮ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಕಬ್ಬನ್ನು ಬೆಳೆಯುತ್ತಿದ್ದರೂ ಅವುಗಳನ್ನು ಅರೆಯುವುದಕ್ಕೆ ಸಕ್ಕರೆ ಕಾರ್ಖಾನೆಗಳಿಲ್ಲ. ಹೀಗಾಗಿ ಬೆಳೆದಂಥ ಕಬ್ಬನ್ನು ಮಹಾರಾಷ್ಟ್ರಕ್ಕೆ ಆಂಧ್ರಕ್ಕೆ ಸರಬರಾಜು ಮಾಡುತ್ತಿದ್ದೇವೆ. ಆದ್ದರಿಂದ ನಮ್ಮಲ್ಲಿ ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸತಕ್ಕದ್ದು ಬಹಳ ಅವಶ್ಯವಿದೆ. ಸಕ್ಕರೆ ಕಾರ್ಖಾನೆಯು ಪ್ರಾರಂಭದ ಸಲುವಾಗಿ ೮೫ ಲಕ್ಷ ರೂಪಾಯಿಗಳ ಷೇರನ್ನು ನಾವು ಸಂಗ್ರಹ ಮಾಡಿದ್ದೇವೆ. ಈ ಕಾರ್ಖಾನೆಯನ್ನು ತೆರೆಯಲು ಸರ್ಕಾರದ ಅನುಮತಿ ಸಿಕ್ಕಿದೆ. ಆದ್ದರಿಂದ ಈ ಕೆಲಸವನ್ನು ಕೂಡಲೇ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಬಸವಕಲ್ಯಾಣದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸಹಕಾರಿ ಕ್ಷೇತ್ರದಲ್ಲಿ ಪ್ರಾರಂಭ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಇದಕ್ಕೆ ತಾವು ಅನುಮತಿಯನ್ನು ಕೊಡುವದಾದರೆ ನಾವು [illegible] ಲಕ್ಷ ರೂಪಾಯಿಗಳ ಷೇರನ್ನು ಸಂಗ್ರಹ ಮಾಡಿಕೊಡುತ್ತೇವೆ. ಆದ್ದರಿಂದ ಅಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅವಕಾಶ ಮಾಡಿಕೊಡಬೇಕು. ಮೊನ್ನೆ ಬೀದರ್‌ನ ಒಂದು ಪತ್ರಿಕೆಯಲ್ಲಿ ಏನು ವರದಿ ಬಂದಿತ್ತು ಎಂದರೆ, ಬೀದರ್‌ನಲ್ಲಿ ಟಾಟಾ, ಬಿರ್ಲಾರಂಥವರು ಯಾರೋ ಪ್ರೈವೇಟ್‌ನವರು ಬಂದು ಷುಗರ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡುತ್ತಾರೆ ಎಂದು. ಆದ್ದರಿಂದ ನಾನು ನಮ್ಮ ಭಾಗದ ಜನರ ಪರವಾಗಿ ಕೇಳಿಕೊಳ್ಳುತ್ತೇನೆ ಅಲ್ಲಿ ಪ್ರೈವೇಟ್‌ನವರು ಸಕ್ಕರೆ ಕಾರ್ಖಾನೆಯನ್ನು ತೆರೆಯುವುದಕ್ಕೆ ಮಂಜೂರಾತಿಯನ್ನು ಕೊಡಬಾರದು. ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ತೆರೆಯುವುದಕ್ಕೆ ಸರ್ಕಾರದವರು ಅನುವು ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

೪-೪೫ ಪಿ.ಎಂ.

ಮಾನ್ಯ ಅಧ್ಯಕ್ಷರೆ ಬೀದರ್ ಜಿಲ್ಲೆಯನ್ನು ವಿಶೇಷವಾಗಿ ಕೈಗಾರಿಕಾ ಕ್ಷೇತ್ರವನ್ನಾಗಿ ಮಾಡಲು ಸರ್ಕಾರದವರು ಹೊರಟಿದ್ದಾರೆ. ಅಲ್ಲಿ ಸಾಕಷ್ಟು ಕೈಗಾರಿಕೆಗಳು ಬರಬೇಕಾದರೆ ಅಲ್ಲಿರತಕ್ಕ ಸ್ಥಳೀಯ ಜನರಿಗೆ ಅವಕಾಶವನ್ನು ಕೊಡಬೇಕು. ಉತ್ತೇಜನಕಾರಿಯಾದ ಕೆಲಸವನ್ನು ಸ್ಥಳೀಯ ಜನರಿಗೆ ಕೊಟ್ಟರೆ ಮಾತ್ರ ಆ ಭಾಗ ಅಭಿವೃದ್ಧಿಯಾಗುತ್ತದೆಂದು ಹೇಳಲಿಕ್ಕೆ ಬಯಸುತ್ತೇನೆ. ಬೇರೆ ಬೇರೆ ನೆರೆಹೊರೆಯ ರಾಜ್ಯಗಳ ಜನರಿಗೆ ಕೈಗಾರಿಕೆ ಪ್ರಾರಂಭ ಮಾಡಲು ಅನುಮತಿ ಕೊಡುವುದರಿಂದ ನಮ್ಮ ಭಾಗದ ಜನರಿಗೆ ಅನುಕೂಲವಾಗುತ್ತಿಲ್ಲ. ಅದಕ್ಕೆ ತಾವು ಬರುವ ವರ್ಷದಲ್ಲಿ ನಮ್ಮವರು ಪ್ರಾರಂಭ ಮಾಡುವ ಫ್ಯಾಕ್ಟರಿಗಳಿಗೆ ಹೆಚ್ಚಿನ ಅನುಕೂಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಿಜವಾಗಿಯೂ ಸರ್ಕಾರಕ್ಕೆ ಏನಾದರೂ ಕನ್ನಡಿಗರಿಗೆ ಹೆಚ್ಚಿನ ಒಂದು ಆದ್ಯತೆ ಕೊಡಬೇಕೆಂದು ಕಳಕಳಿ ಇದ್ದರೆ ಬೇರೆ ಭಾಗದಿಂದ ಬರತಕ್ಕ ಜನರಿಗೆ ಪರ್ಮಿಶನ್ ಕೊಡಬಾರದು. ನಮ್ಮಲ್ಲಿರತಕ್ಕ ಜನರಿಗೆ ಹೆಚ್ಚಿನ ಅವಕಾಶವನ್ನು ಕೊಡಬೇಕು. ಮೇಲಾಗಿ ಸ್ಥಳೀಯ ಜನರಿಗೆ ಈಗ ಉದ್ಯೋಗ ಸಿಗುತ್ತಿಲ್ಲ. ಕೇವಲ ಸಬ್ಸಿಡಿಗೋಸ್ಕರ ಇವತ್ತಿನ ದಿವಸ ನಮ್ಮ ಬೀದರ್ ಜಿಲ್ಲೆಗೆ ಕೈಗಾರಿಕೋದ್ಯಮಿಗಳು ಬಂದು ಸಬ್ಸಿಡಿ ಹೊಡೆದುಕೊಂಡು ಬೇರೆ ಜಿಲ್ಲೆಗೆ ಹೋಗುತ್ತಿರುವುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಬೀದರ್ ಜಿಲ್ಲೆಯಲ್ಲಿ ನೈಸರ್ಗಿಕ ಸಂಪನ್ಮೂಲ ಬಹಳ ಚೆನ್ನಾಗಿದೆ. ಬೀದರ್ ಜಿಲ್ಲೆ ಅಭಿವೃದ್ಧಿಯಾಗಬೇಕಾದರೆ ಸರ್ಕಾರದವರು ಹೆಚ್ಚಿನ

ಕಾಳಜಿಯನ್ನು ವಹಿಸಬೇಕು. ಕೈಗಾರಿಕೆಯನ್ನು ಸ್ಥಾಪಿಸುವವರಿಗೆ ಅತಿ ಶೀಘ್ರವಾಗಿ ನೀರವನ್ನು ಕೊಡಬೇಕು. ಸ್ಥಳೀಯ ಜನರಿಗೆ ಉದ್ಯೋಗವನ್ನು ಒದಗಿಸಲು ಒಂದು ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ರೈತರ ಸಮಸ್ಯೆಯ ಬಗ್ಗೆ ಈಗಾಗಲೇ ನಮ್ಮ ಪ್ರಮುಖ ಮುಖಂಡರು ಇಲ್ಲಿ ಮಾತನಾಡಿದ್ದಾರೆ. ರೈತರು ಕಷ್ಟಪಟ್ಟು ಹೆಚ್ಚಿನ ಕೆಲಸವನ್ನು ಮಾಡಿದರೂ ಅವರಿಗೆ ಏನೂ ಲಾಭ ಸಿಗುತ್ತಿಲ್ಲ. ನಿಜವಾಗಿಯೂ ಜಮೀನು ಇದು ರೈತನಿಗೆ ಇವತ್ತು ಏನೂ ಸಿಗುತ್ತಿಲ್ಲ. ರೈತರ ಸಲುವಾಗಿ ನಾವು ಸಹಾಯ ಮಾಡುತ್ತೇವೆ, ಸಹಕಾರ ಕೊಡುತ್ತೇವೆಂದು ಹೇಳಿ ಹೋಗುತ್ತಾರೆ. ಆದರೆ ೪೦ ವರ್ಷಗಳು ಕಳೆದರೂ ಸಹ ರೈತರಿಗೆ ಸರ್ಕಾರದಿಂದ ಯಾವ ಸಹಾಯ ಧನವೂ ಕೂಡ ಸಿಕ್ಕಿಲ್ಲ. ಇದು ದುರಾದೃಷ್ಟಕರವಾದ ಸಂಗತಿ. ಇವತ್ತು ನಮ್ಮ ಪಕ್ಷದವರೇ ಆಗಲಿ, ಅಥವಾ ಯಾವ ಪಕ್ಷದವರೇ ಆಗಲಿ, ಈ ವಿಚಾರದಲ್ಲಿ ತಲೆತಗ್ಗಿಸಬೇಕಾದ ಪ್ರಸಂಗ ಬಂದಿದೆ. ನಿಜವಾಗಿಯೂ ರೈತರ ಬಗ್ಗೆ ಕಾಳಜಿ ವಹಿಸಿದರೆ ನಮ್ಮ ದೇಶ ಅಭಿವೃದ್ಧಿಯಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಸಲುವಾಗಿ ಸರ್ಕಾರದವರು ಹೆಚ್ಚಿನ ಕಾರ್ಯಕ್ರಮವನ್ನು ಹಾಕಿಕೊಂಡು ಸಹಾಯ ಮಾಡಬೇಕು. ರೈತರ ಸಾಲ ಮನ್ನಾ ಮಾಡುವ ಕಾರ್ಯಕ್ರಮದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ನಿನ್ನೆ ಸತ್ಯಾಗ್ರಹ ಮಾಡಿದರು, ನಾನು ಅದನ್ನು ಸ್ವಾಗತ ಮಾಡುತ್ತೇನೆ. ರೈತನಿಗೆ ಬೆಳೆ ತೆಗೆಯಲು ಹೆಚ್ಚಿನ ಸಾಲವನ್ನು ಕೊಡುವ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡರೆ ರೈತರಿಗೆ ಅನುಕೂಲವಾಗುತ್ತದೆ. ರೈತರು ಕೇವಲ ಮಳೆಯನ್ನೇ ಅವಲಂಬಿಸಿರುತ್ತಾರೆ. ನಮ್ಮಲ್ಲಿ ಸಾಕಷ್ಟು ಬಯಲು ಪ್ರದೇಶವಿದೆ. ಅಲ್ಲಿ ರೈತರು ಮಳೆಯನ್ನೇ ಅವಲಂಬಿಸಿರುತ್ತಾರೆ. ಇದರಿಂದ ರೈತರಿಗೆ ಬಹಳ ಕಷ್ಟವಾಗುತ್ತದೆ. ಈ ಕಷ್ಟವನ್ನು ಅರ್ಥ ಮಾಡಿಕೊಂಡು ಅನುಕೂಲವಾಗಲು ಸರ್ಕಾರ ಏನಾದರೂ ಹೊಸ ಕಾರ್ಯಕ್ರಮ ಹಾಕಿಕೊಂಡರೆ ರೈತನ ಜೀವನಕ್ಕೆ ಅನುಕೂಲವಾಗುತ್ತದೆ. ಎಷ್ಟೋ ಜನ ರೈತರು ಹೊಟ್ಟೆಪಾಡಿಗಾಗಿ ಬೇರೆ ಬೇರೆ ಕಡೆ ವಲಸೆ ಹೋಗುವ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ಭಾಗದ ಜನ ಬೆಂಗಳೂರು, ಮೈಸೂರು, ಬಾಂಬೆಗೆ ಹೋಗಿ ಜೀವನ ಮಾಡತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ವಿಶೇಷವಾಗಿ ರೈತರ ಸಲುವಾಗಿ ವಿಶೇಷ ಗಮನ ಹರಿಸಿ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಬಗ್ಗೆ ಹಲವಾರು ಬೇಡಿಕೆಗಳು ಬಂದಿವೆ. ಮಹಾತ್ಮರಾದ ಜಗಜ್ಯೋತಿ ಬಸವೇಶ್ವರರವರು ಈ ಒಂದು ಧಾರ್ಮಿಕ ಕ್ರಾಂತಿಕಾರ ಪುರುಷರಾಗಿದ್ದರು. ಅವರ ಬಗ್ಗೆ ಹೇಳಲಿಕ್ಕೆ ಹೋದಾಗ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಶಿವಮೊಗ್ಗದ ವಿಶ್ವವಿದ್ಯಾನಿಲಯಕ್ಕೆ ಕುವೆಂಪು ವಿಶ್ವವಿದ್ಯಾನಿಲಯ ಎಂದು ಹೆಸರು ಇಡಲು ಹೋದಾಗ ಯಾರೂ ವಿರೋಧ ಮಾಡಲಿಲ್ಲ. ಡಾ. ಕುವೆಂಪುರವರು ಕನ್ನಡದ ಸಲುವಾಗಿ ಹೋರಾಡಿದ ಒಬ್ಬ ಮಹಾನ್ ವ್ಯಕ್ತಿಯಾಗಿದ್ದಾರೆ. ಆದ್ದರಿಂದ ಶಿವಮೊಗ್ಗದ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಕುವೆಂಪು ವಿಶ್ವವಿದ್ಯಾನಿಲಯವೆಂದು ನಾಮಕರಣ ಮಾಡಲಾಗಿದೆ. ಅದೇ ಪ್ರಕಾರವಾಗಿ ಜಾತಿ ವಿರುದ್ಧ ಕರ್ನಾಟಕದಲ್ಲಿ ಹೋರಾಟ ಮಾಡಿದ ಜಗಜ್ಯೋತಿ ಬಸವೇಶ್ವರರ ಹೆಸರನ್ನು ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಇಡಬೇಕೆಂದು ಪ್ರಾರ್ಥಿಸುತ್ತೇನೆ. ಇದರಿಂದ ಕನ್ನಡ ನಾಡಿನಲ್ಲಿರುವ ಜನರಿಗೆ ಒಂದು ಒಳ್ಳೆಯ ಭಾವನೆ ಬರುತ್ತದೆ. ಇವತ್ತು ನಾವು ಬೇರೆ ಬೇರೆ ರಾಜ್ಯಗಳಿಗೆ ಹೋದಂಥ ಸಂದರ್ಭದಲ್ಲಿ ನೋಡಿದಾಗ ಅವರು ಹಲವಾರು ಮಹಾನ್ ಪುರುಷರುಗಳ ಹೆಸರನ್ನು ಇಟ್ಟಿದ್ದಾರೆ. ಮಹಾರಾಷ್ಟ್ರಕ್ಕೆ ಹೋದರೆ ಶಿವಾಜಿ ಯೂನಿವರ್ಸಿಟಿಯೆಂದು ಇದೆ. ತೆಲಂಗಾಣಕ್ಕೆ ಹೋದರೆ ರಾಮಕೃಷ್ಣ ಯೂನಿವರ್ಸಿಟಿ ಎಂದು ಇದೆ. ಆದ್ದರಿಂದ ಬೇರೆ ಬೇರೆ ದೃಷ್ಟಿಕೋನವನ್ನು ಇಟ್ಟುಕೊಂಡು ಕನ್ನಡನಾಡಿನಲ್ಲಿ ಹುಟ್ಟಿದಂತಹ ಯಾವುದೇ ಜಾತಿಯವರಾಗಲಿ, ಅಂತಹ ಮಹಾನ್ ವ್ಯಕ್ತಿಗಳ ಒಂದು ಹೆಸರನ್ನು ಇಟ್ಟರೆ ಕನ್ನಡ ನಾಡಿನ ಸಂಸ್ಕೃತಿಗೆ ಹೆಚ್ಚಿನ ಒಂದು ಕೀರ್ತಿಯನ್ನು ತಂದುಕೊಟ್ಟಂತಾಗುತ್ತದೆ. ಮಾನ್ಯ ಅಧ್ಯಕ್ಷರೇ ಮಹಾರಾಷ್ಟ್ರದಲ್ಲಿ ನಾಗಪುರವನ್ನು ಯಾವ ರೀತಿ ಉಪ ರಾಜಧಾನಿಯನ್ನಾಗಿ ಮಾಡಿದ್ದಾರೆ, ಅದೇ ಪ್ರಕಾರವಾಗಿ ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳನ್ನು ಸೇರಿಸಿ ಗುಲ್ಬರ್ಗಾದಲ್ಲಿ ಉಪ ರಾಜಧಾನಿ ಸ್ಥಾಪನೆ ಮಾಡಬೇಕು. ಏಕೆಂದರೆ ಜನರು ಬೆಂಗಳೂರಿಗೆ ಬರಬೇಕಾದರೆ ಸುಮಾರು ಐದು ನೂರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬರಬೇಕಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಐದು ನೂರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಸಾಮಾನ್ಯ ಪ್ರಜೆ ಬೆಂಗಳೂರಿಗೆ ಬರುವುದಕ್ಕೆ ಸಾಧ್ಯವೇ ಎನ್ನುವುದನ್ನು ಆಲೋಚನೆ ಮಾಡಬೇಕು. ಬೆಂಗಳೂರಿಗೆ ಬರಬೇಕಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ಅರಿತು ಗುಲ್ಬರ್ಗಾದಲ್ಲಿ ಒಂದು ಎರಡನೇ ಉಪ ರಾಜಧಾನಿಯನ್ನಾಗಿ ಮಾಡಿದರೆ ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರು ಹೀಗೆ ಎಂಟು ಜಿಲ್ಲೆಗಳಿಗೆ ಆ ಭಾಗದ ಜನರಿಗೆ ಹೆಚ್ಚಿನ ಅನುಕೂಲವಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹೇಳುತ್ತೇನೆ. ಈ ದೃಷ್ಟಿಕೋನವನ್ನು ಇಟ್ಟುಕೊಂಡು

ಗುಲ್ಬರ್ಗಾವನ್ನು ಉಪ ರಾಜಧಾನಿಯನ್ನಾಗಿ ಮಾಡಿದರೆ ಅಲ್ಲಿ ಅಧಿವೇಶನವನ್ನು ನಡೆಸಲಿಕ್ಕೆ ಸೂಕ್ತ ವ್ಯವಸ್ಥೆ ಮಾಡಲಿಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ, ಹಿಂದೆ ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅಲ್ಲಿ ಮಂತ್ರಿಮಂಡಲದ ಸಭೆಯನ್ನು ಬಹಳ ಸ್ವಾಗತಾರ್ಹವಾಗಿ ನಡೆಸಿದರು. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳಾಗಿರುವ ವೀರೇಂದ್ರ ಪಾಟೀಲ್‌ರವರು ಮತ್ತು ಶ್ರೀಮಾನ್ ರಾಜಶೇಖರಮೂರ್ತಿಯವರು ಕಳಕಳಿಯಿಂದ ನಾನು ವ್ಯಕ್ತಪಡಿಸಿದ ಈ ವಿಚಾರವನ್ನು ತಮ್ಮ ಗಮನಕ್ಕೆ ಆಸಕ್ತಿಯಿಂದ ತೆಗೆದುಕೊಂಡು ಗುಲ್ಬರ್ಗಾವನ್ನು ಉಪ ರಾಜಧಾನಿಯನ್ನಾಗಿ ಮಾಡಿ ಅಲ್ಲಿ ಅಧಿವೇಶನವನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಹಾರಾಷ್ಟ್ರದಲ್ಲಿ ಯಾವ ರೀತಿ ನಾಗಪುರವನ್ನು ಉಪ ರಾಜಧಾನಿಯನ್ನಾಗಿ ಮಾಡಿದ್ದಾರೆ ಆ ರೀತಿಯಲ್ಲಿ ಗುಲ್ಬರ್ಗಾವನ್ನು ಉಪ ರಾಜಧಾನಿಯನ್ನಾಗಿ ಮಾಡಿದರೆ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಕೋನವನ್ನು ಇಟ್ಟುಕೊಂಡು ನಮ್ಮ ಘನ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಹಲವಾರು ಕಾರಣಗಳಿಂದ ಎಲ್ಲಾ ವಿಷಯಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೇವಲ ನನ್ನ ಮತದಾರರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳಬಯಸುತ್ತೇನೆ,

ಶ್ರೀ ಆರ್. ಎನ್. ನಾಯಿಕ್.— ಕಾರವಾರವು ಬಹಳ ಸುಂದರವಾದ ಪ್ರದೇಶ ಅದನ್ನೂ ಕೂಡ ಉಪರಾಜಧಾನಿಯನ್ನಾಗಿ ಏತಕ್ಕೆ ಮಾಡಬಾರದು?

ಶ್ರೀ ಬಸವರಾಜಪಾಟೀಲ್ ಅಟ್ಟೂರ್.— ಬೇರೆ ಪ್ರದೇಶಗಳ ವಿಚಾರಕ್ಕೆ ನಾನು ಹೋಗುವುದಿಲ್ಲ. ಮಹಾರಾಷ್ಟ್ರದಲ್ಲಿ ನಾಗಪುರವನ್ನು ಯಾವ ರೀತಿ ಉಪ ರಾಜಧಾನಿ ಮಾಡಿರುತ್ತಾರೆ ಅದೇ ರೀತಿಯಲ್ಲಿ ಬಾರ್ಡರ್ ಏರಿಯಾ ಆದ ಗುಲ್ಬರ್ಗಾವನ್ನು ಉಪ ರಾಜಧಾನಿ ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಹೆಚ್ಚು ಹೆಚ್ಚು ಮಟಕ ಜೂಜು, ಗೂಂಡಾಗಿರಿ ಪ್ರವೃತ್ತಿಗಳು ಬೆಳೆಯುತ್ತಿದೆ. ಇದಕ್ಕೆ ಕಾರಣವೇನು ಎನ್ನುವುದು ಗೊತ್ತಾಗುತ್ತಿಲ್ಲ. ಹಿಂದೆ ಮಟಕ ಬಂದ್ ಮಾಡಿದ್ದರು, ಜೂಜ್ ಬಂದ್ ಮಾಡಿದ್ದರು. ಮಟಕ ಜೂಜು ರಾಜ್ಯಪಾಲರ ಆಡಳಿತ ಬಂದಮೇಲೆ ಬಹಳವಾಗಿ ಪ್ರಾರಂಭವಾಗಿದೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅವರ ಸರ್ಕಾರದ ಬಗ್ಗೆ ತಪ್ಪು ಆರೋಪವನ್ನು ಮಾಡುತ್ತಿಲ್ಲ ನಮ್ಮ ಭಾಗದಲ್ಲಿ ಬೀದರ್ ಗುಲ್ಬರ್ಗಾ ಹೀಗೆ ಬೇರೆ ಬೇರೆ ಭಾಗದಲ್ಲಿ ನೀವು ಯಾರನ್ನಾದರೂ ಕೇಳಬಹುದು. ವೀಡಿಯೋ ಕ್ಯಾಸೆಟ್ ಪ್ರದರ್ಶನಗಳನ್ನು ಮಾಡುತ್ತಿರುತ್ತಾರೆ. ಇದರಿಂದ ಜನರಲ್ಲಿ ಒಂದು ಕೆಟ್ಟ ಪರಿಣಾಮ ಉಂಟಾಗುವಂಥ ಸಂದರ್ಭವಿರುತ್ತದೆ. ಈ ದೃಷ್ಟಿಕೋನವನ್ನು ಇಟ್ಟುಕೊಂಡು ಕೂಡಲೇ ವಿಡಿಯೋಕ್ಯಾಸೆಟ್ ಪ್ರದರ್ಶನ, ಮಟಕ ಜೂಜು ಇವೇ ಮುಂತಾದವುಗಳನ್ನು ತಡೆಗಟ್ಟಲು ಹೆಚ್ಚಿನ ಗಮನವನ್ನು ಸರ್ಕಾರದವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಮತದಾರ ಕ್ಷೇತ್ರದಲ್ಲಿ ಎರಡು ವಿಡಿಯೋಕ್ಯಾಸೆಟ್ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಪೋಲೀಸ್‌ನವರೂ ಕೂಡ ಸಹಾಯ ಮಾಡುತ್ತಿದ್ದಾರೆಂದು ಕೇಳಿ ಬಂದಿದೆ. ಈ ಬಗ್ಗೆ ಪೋಲೀಸ್‌ನವರೇ ಇನ್‌ವೆಸ್ಟಿಗೇಷನ್ ಮಾಡಲು ಹೇಳಿದರೆ ಅವರು ಲಂಚ ತೆಗೆದುಕೊಂಡು ವೀಡಿಯೋಕ್ಯಾಸೆಟ್ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುತ್ತಾರೆ.

ಶ್ರೀ ಜಿ. ರಾಜುಗೌಡ.—ಇಂಥ ಸಂದರ್ಭದಲ್ಲಿ ಗುಲ್ಬರ್ಗಾವನ್ನು ಉಪರಾಜಧಾನಿಯನ್ನಾಗಿ ಮಾಡಬೇಕೆಂದು ತಾವು ಬಯಸುವುದು ಸರಿಯೇ?

ಶ್ರೀ ಬಸವರಾಜಪಾಟೀಲ್ ಅಟ್ಟೂರು.—ಗುಲ್ಬರ್ಗವನ್ನು ಉಪರಾಜಧಾನಿಯನ್ನಾಗಿ ಮಾಡಬೇಕೆಂದು ಸಲಹೆ ಕೊಟ್ಟಿರುತ್ತೇನೆ. ಇದನ್ನು ಒಪ್ಪಿಕೊಳ್ಳುವುದು ಬಿಡುವುದು ಅವರಿಗೆ ಸಂಬಂಧಪಟ್ಟಿದ್ದು. ಇನ್ನು ಚುನಾವಣೆಯ ವಿಷಯಕ್ಕೆ ಬಂದರೆ, ಮೊನ್ನೆ ನಡೆಯಬೇಕಾಗಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಬಗ್ಗೆ ಹೇಳಬಯಸುತ್ತೇನೆ. ಪುರಸಭೆ ಮತ್ತು ನಗರಸಭೆಯ ಚುನಾವಣೆಗಳನ್ನು ರದ್ದು ಮಾಡಿದ್ದು ಅಭ್ಯರ್ಥಿಗಳಿಗೆ ತೊಂದರೆಯಾಗುತ್ತಿದೆ ೨೫ನೇ ತಾರೀಖು ಚುನಾವಣೆ ಎಂದು ಗೊತ್ತು ಮಾಡಿ ಪ್ರಕಟಣೆ ಮಾಡಿದರು ನಂತರ ರಂಜಾನ್ ಪ್ರಯುಕ್ತ ಅಂದು ಚುನಾವಣೆ ನಡೆಯುವುದಿಲ್ಲವೆಂದು ಹೇಳಿದರು, ೨೮ನೇ ತಾರೀಖು ಬಸವ ಜಯಂತಿ ಇರುವುದರಿಂದ ಚುನಾವಣೆಯನ್ನು ಮುಂದೂಡಿದರೆ ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆಂದು ಹೇಳಬಯಸುತ್ತೇನೆ. ಮುಸ್ಲಿಂ ಸಮಾಜದವರು ಸರ್ಕಾರದ ಮೇಲೆ ಪ್ರಭಾವ ಬೀರಿದ್ದಕ್ಕೆ ಬೆಲೆ ಕೊಟ್ಟರು. ೨೫ ಮತ್ತು ೨೮ನೇ ತಾರೀಖಿನಂದು ಬಸವ ಜಯಂತಿ ಮತ್ತು ಶಿವ ಜಯಂತಿ ಬಂದಿರುವುದರಿಂದ ಮತದಾನ ಮಾಡುವುದಕ್ಕೆ ಬಹಳ ಜನರಿಗೆ ಅನುಕೂಲವಾಗುವುದಿಲ್ಲವೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ

ಆದ್ದರಿಂದ ಕೇವಲ ೪-೫ ದಿನ ಎಂದೆ ಹಾಕಿದರೆ ಒಳ್ಳೆಯದಾಗುತ್ತದೆಂದು ಹೇಳಬಯಸುತ್ತೇನೆ. ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಚಿಟಗುಪ್ಪ ತಾಲ್ಲೂಕನ್ನು ಮಾಡುವುದಕ್ಕೆ ಜಿಲ್ಲಾ ಆಡಳಿತ ಮಂಡಳಿಯವರು ಸರ್ಕಾರಕೆ ಪತ್ರ ಬರೆದಿದ್ದಾರೆ. ಜಿಲ್ಲಾ ಪುನರ್ವಿಂಗಡಣೆ ಮಾಡತಕ್ಕ ಕಾಲವಲ್ಲಿ ಬೀದರ್ ಜಿಲ್ಲೆಯ ಚಿಟಗುಪ್ಪವನ್ನು ಹೊಸ ತಾಲ್ಲೂಕನ್ನಾಗಿ ಮಾಡಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಘನ ಸರ್ಕಾರದವರು ಈ ಒಂದು ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ, ಇನ್ನು ಬಸವಕಲ್ಯಾಣದ ಮತ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಬಸವಕಲ್ಯಾಣ ೪೫ ಸಾವಿರ ಜನಸಂಖ್ಯೆಯುಳ್ಳ ದೊಡ್ಡ ಪಟ್ಟಣ. ಬೀದರ್ ಜಿಲ್ಲೆಯಲ್ಲಿ ಅತಿ ದೊಡ್ಡ ಪಟ್ಟಣ ಅದು. ಅದರ ಅಭಿವೃದ್ಧಿಗಾಗಿ ಸರ್ಕಾರದವರು ಸಾಕಷ್ಟು ಹಣ ಖರ್ಚು ಮಾಡಿದ್ದಾರೆ, ಇನ್ನೂ ಸ್ವಲ್ಪ ಹಣ ಖರ್ಚು ಮಾಡತಕ್ಕ ಅವಶ್ಯಕತೆ ಇದೆ. ಅಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಆ ದೃಷ್ಟಿಯಿಂದ ಬಸವಕಲ್ಯಾಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ವಿನಂತಿಸಿಕೊಳ್ಳುತ್ತೇನೆ. ನಮ್ಮ ಭಾಗದವರೇ ಮುಖ್ಯ ಮಂತ್ರಿಗಳಾಗಿದ್ದಾರೆ. ಕಳೆದ ವರ್ಷ ಒಂದು ಕೋಟಿ ರೂಪಾಯಿ ಪ್ರೊಪೋಸಲ್ ಮಾಡಿದ್ದರು. ಆದರೆ ಹಣದ ಅಭಾವದಿಂದ ಕೆಲಸ ಆಗಲಿಲ್ಲ. ಅಲ್ಲಿಗೆ ತಕ್ಷಣ ನೀರಿನ ವ್ಯವಸ್ಥೆ ಮಾಡಬೇಕು. ನೀರಿಗೆ ಬಹಳ ತೊಂದರೆ ಇದೆ. ಬಸವ ಕಲ್ಯಾಣಕ್ಕೆ ನೀರು ಸರಬರಾಜು ಮಾಡುವ ಯೋಜನೆಯನ್ನು ಮಂಜೂರ್ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಪ್ರವಾಸೋದ್ಯಮ ಸಚಿವರಾದ ಶ್ರೀ ವೀರಪ್ಪ ಮೊಯ್ಲಿಯವರು ಪ್ರವಾಸಿ ಕೇಂದ್ರಗಳಿಗೆ ಹೆಚ್ಚಿನ ನೆರವು ನೀಡುವ ವಿಚಾರವಾಗಿ ಪ್ರಸ್ತಾಪಿಸಿರುವುದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಮುಂದಿನ ವರ್ಷ ಈ ಬಗ್ಗೆ ಏನು ಕಾರ್ಯಕ್ರಮವನ್ನು ರಚಿಸುತ್ತಿದ್ದಾರೆ ಆ ಸಂದರ್ಭದಲ್ಲಿ ಬಸವಕಲ್ಯಾಣ ಐತಿಹಾಸಿಕ ಕೇಂದ್ರವಾಗಿರುವುದಲ್ಲದೆ ವ್ಯಾಪಾರ ಕೇಂದ್ರವೂ ಆಗಿರುವುದರಿಂದ ಅದನ್ನು ಪ್ರವಾಸಿ ಕೇಂದ್ರವಾಗಿ ಮಾಡುವುದಕ್ಕೆ ಹೆಚ್ಚಿನ ನೆರವು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಬಹಳ ಪ್ರಸಿದ್ಧವಾದ ಒಂದು ಕೆರೆ ಇದೆ. ಆ ಕೆರೆಯನ್ನು ನೋಡುವುದಕ್ಕೆ ಬಹಳ ಜನರು ಬರುತ್ತಾರೆ. ಆ ದೃಷ್ಟಿಯಿಂದ ಅಲ್ಲಿ ಲಾಲ್‌ಬಾಗ್ ಟೈಪ್ ಗಾರ್ಡನ್ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಅದೇ ಪ್ರಕಾರ ಹಲವಾರು ವಿಚಾರಗಳಲ್ಲಿ ಬಸವಕಲ್ಯಾಣದ ಬಗ್ಗೆ ಹೇಳಿದ್ದೇನೆ. ಇನ್ನೊಂದು ಮಾತು ಹೇಳುವುದಾದರೆ, ನಮ್ಮ ರಾಜ್ಯದ ಮಂತ್ರಿಗಳು ಈ ದಿಸೆಯಲ್ಲಿ ಹೆಚ್ಚಿನ ಕಾಳಜಿ ವಹಿಸಿ ಕೆಲಸ ಮಾಡಬೇಕೆಂದು ಹೇಳುತ್ತಾ, ಜನರು ಏನು ತಮ್ಮ ಸಮಸ್ಯೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ ಆ ಎಲ್ಲ ಸಮಸ್ಯೆಗಳನ್ನು ಕಾಳಜಿ ತೆಗೆದುಕೊಂಡು ಬಿಡಿಸಿ ಜನರಿಗೆ ಅನುಕೂಲ ಮಾಡಿಕೊಡುತ್ತಾರೆಂದು ಭಾವಿಸಿ ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಎರಡು ಮಾತುಗಳನ್ನು ಬಡ್ಜೆಟ್ ಮೇಲೆ ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜುಗೌಡ (ಹನೂರು) — ಮಾನ್ಯ ಅಧ್ಯಕ್ಷರೆ, ೧೬ನೇ ತಾರೀಖು ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿದ ೧೯೮೦-೮೧ನೇ ಸಾಲಿನ ಆಯವ್ಯಯವನ್ನು ಬೆಂಬಲಿಸುತ್ತಾ ಕೆಲವಾರು ಮಾತುಗಳನ್ನಾಡಲಿಚ್ಛಿಸುತ್ತೇನೆ. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಬಡ್ಜೆಟ್ ಅನ್ನು ಕೊರತೆಯುಳ್ಳ ಬಡ್ಜೆಟ್ ಆಗಿ ಪುನಃ ಪುನಃ ನಿರ್ಮಾಣ ಮಾಡುತ್ತಿದ್ದ ಸಂದರ್ಭದಲ್ಲಿ ನಮ್ಮ ಮಾನ್ಯ ಆರ್ಥಿಕ ಸಚಿವರು ಮಂಡಿಸಿರತಕ್ಕ ಆಯವ್ಯಯ ನಿರಾಶೆಯ ಕಾರ್ಮೋಡದಲ್ಲಿ ಕೋಲ್ಮಿಂಚಾಗಿದೆ ಎಂದು ಹೇಳಬಯಸುತ್ತೇನೆ.

ನಾವು ಅನೇಕ ವರ್ಷಗಳಿಂದ ಈ ರಾಜ್ಯದ ಬಜೆಟ್‌ಗಳನ್ನು ಪರಿಶೀಲಿಸಿದಾಗ ಸುಮಾರು ಎರಡು ನೂರು ಕೋಟಿ ಮೂರು ನೂರು ಕೋಟಿ ರೂಪಾಯಿ ಕೊರತೆ ಉಂಟಾಗಿರುವುದನ್ನು ನೋಡಿದ್ದೇವೆ. ಆದರೆ ೧೯೮೦-೮೧ರ ರಾಜ್ಯ ಆಯವ್ಯಯವನ್ನು ಪರಿಶೀಲಿಸಿದಾಗ ಇದು ಅತಿ ಕಡಿಮೆ ಕೊರತೆಯನ್ನುಳ್ಳ ಬಜೆಟ್ ಎಂದು ಕಾಣುತ್ತಿದೆ. ಇದು ಹರ್ಷದಾಯಕವಾದ ವಿಚಾರ. ಸುಮಾರು ೫೬.೭೩ ಕೋಟಿ ರೂಪಾಯಿ ಕೊರತೆ ಆಗಿದೆ ಇದು ರಾಜ್ಯದ ಪ್ರಗತಿಯ ಮೈಲಿಗಲ್ಲು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಲ ೧೪೭.೫೦ ಕೋಟಿ ರೂಪಾಯಿ ಕರಭಾರವನ್ನು ಹಾಕಿದ್ದಾರೆ. ಇದೊಂದು ಅಪೂರ್ವವಾದ ಸಮತೋಲನದ ಬಜೆಟ್ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಕ್ಕೆ ವರಮಾನ ಗಳಿಸತಕ್ಕದ್ದೇ ಮುಖ್ಯವಲ್ಲ. ಜನರ ಆರೋಗ್ಯ ಕೂಡ ಮುಖ್ಯ. ಅದರ ಕಡೆ ಹೆಚ್ಚು ಗಮನ ಕೊಡತಕ್ಕ ದೃಷ್ಟಿಯಿಂದ ಕಲಬೆರಕೆ ಹೆಂಡವನ್ನು ರಾಜ್ಯಾದ್ಯಂತ ನಿಷೇಧಿಸಿದ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲಬೇಕು. ಮಾನ್ಯ ಅರ್ಥ ಸಚಿವರು ತಮ್ಮ ಆಯವ್ಯಯ ಪತ್ರ ಓದುತ್ತಿದ್ದಾಗ ಮಧ್ಯದಲ್ಲಿ ರೈತರ ಸಾಲದ ಮನ್ನಾ ಬಗ್ಗೆ ಚಕಾರ ಇಲ್ಲ ಎಂದು ಇದು 'ರೈತ ವಿರೋಧಿ ಸರ್ಕಾರ' ಎಂದು ಘೋಷಣೆ ಕೂಗುತ್ತಾ ಮಾನ್ಯ ವಿರೋಧಪಕ್ಷದ ಸದಸ್ಯರು ಸಭಾ ತ್ಯಾಗ ಮಾಡಿದರು. ವಿರೋಧಪಕ್ಷದ ನಾಯಕರು ಮತ್ತು ಉಪನಾಯಕರು ಸಂಸದೀಯ ವಿಷಯದಲ್ಲಿ ಜಾಣ್ಮೆಯುಳ್ಳವರು. ರಾಜಕೀಯ ಮುತ್ಸದ್ದಿಗಳು.

ಅವರು ರೈತರ ಸಾಲದ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ತೀರ್ಮಾನವಾಗಬೇಕೇ ವಿನಹ ರಾಜ್ಯದಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಅವರು ಹೇಳಲಿಲ್ಲವಲ್ಲ ಎಂದು ನಾನು ವಿಷಾದಪಟ್ಟೆ. ರೈತರ ಸಾಲ ಮನ್ನಾ ಮಾಡತಕ್ಕ ವಿಚಾರ ರಾಷ್ಟ್ರೀಯ ಆರ್ಥಿಕ ನೀತಿಗೆ ಸಂಬಂಧಪಟ್ಟಿದ್ದು. ಕೇಂದ್ರ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ರೈತರು ಕೃಷಿಗೆ ಸಹಕಾರ ಸಂಘದಲ್ಲಿ ಪಡೆದಿರತಕ್ಕ ಸಾಲವನ್ನು ೧೦ ಸಾವಿರ ರೂಪಾಯಿಗಳವರೆಗೆ ಮನ್ನಾ ಮಾಡುತ್ತೇವೆ ಎಂದು ಘೋಷಣೆ ಮಾಡಿತ್ತು. ಆದರೆ ನಿನ್ನೆ ಮಂಡಿಸಿದ ೧೯೯೦–೯೧ರ ಕೇಂದ್ರ ಆಯವ್ಯಯ ಪತ್ರದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕು ಗಳಿಂದ ಪಡೆದಿರತಕ್ಕ ೧೦ ಸಾವಿರ ರೂಪಾಯಿ ಸಾಲವನ್ನು ಮಾತ್ರ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ರೈತರು ಸಹಕಾರ ಸಂಘಗಳಿಂದ ಪಡೆದಿರುವ ಸಾಲದ ಬಗ್ಗೆ ಮೌನವಾಗಿರುವುದನ್ನು ನೋಡಿದರೆ ಅವರು ವಚನಭ್ರಷ್ಟರಾಗಿದ್ದಾರೆ, ಹೇಳಿದಂತೆ ನಡೆದುಕೊಂಡಿಲ್ಲ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತರ ಸಾಲವನ್ನು ಮನ್ನಾ ಮಾಡತಕ್ಕದ್ದು ಸರಿಯಾದ ಕ್ರಮ ಅಲ್ಲ, ಸಾಲವನ್ನು ಮನ್ನಾ ಮಾಡಿದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ ಎಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಆದರೆ ರೈತರ ಬಗ್ಗೆ ಕಳಕಳಿ ಬೇಡವೇ? ರಾಜ್ಯದ ರೈತರು ಇಷ್ಟು ಕಷ್ಟದಲ್ಲಿರುವಾಗ ಸರ್ಕಾರದಿಂದ ಏನು ಅಪೇಕ್ಷೆಪಡುತ್ತಾರೆ ಎಂದು ಯೋಚನೆ ಮಾಡಿದಾಗ ಅವರ ಸ್ಥಿತಿ ಉತ್ತಮಪಡಿಸುವುದಕ್ಕೆ ಅನೇಕ ವಿಧಾನಗಳಿವೆ. ಪದೇ ಪದೇ ಮರುಕಳಿಸತಕ್ಕ ಭೀಕರ ಬರಗಾಲ ಸ್ಥಿತಿಯನ್ನು ವೈಜ್ಞಾನಿಕವಾಗಿ ಸರಿ ಮಾಡುವ ವ್ಯವಸ್ಥೆ ಮಾಡಬೇಕಾಗಿದೆ. ಸಕಾಲದಲ್ಲಿ ಸಾಲವನ್ನು ಮಂಜೂರು ಮಾಡತಕ್ಕ ವ್ಯವಸ್ಥೆ ಮೂಲಕ ಅವರ ಸ್ಥಿತಿಗತಿ ಉತ್ತಮಪಡಿಸಬೇಕು. ಹಿಂದಿನ ಸರ್ಕಾರ ಕೇವಲ ಜನಪ್ರಿಯತೆ ದೃಷ್ಟಿಯಿಂದ ರೂಪಿಸಿಗೊಂಡಿದ್ದ ನಿರುತ್ಪಾದಕ ಯೋಜನೆಗೆ ಕಡಿವಾಣ ಹಾಕಿ ರಿಯಾಯಿತಿ ದರದಲ್ಲಿ ಆಹಾರ ಸರಬರಾಜು ಮಾಡುವ ವಿಷಯವನ್ನು ನಮ್ಮ ಸರ್ಕಾರ ಮುಂದುವರೆಸಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಿಮ್ಮದು ರೈತ ವಿರೋಧಿ ಸರ್ಕಾರ ಎಂದು ಹೇಳಿದರು. ನಮ್ಮ ಸರ್ಕಾರ ರೈತರ ವಿರೋಧವೋ ನಿಮ್ಮ ಸರ್ಕಾರ ರೈತರ ವಿರೋಧವೋ ಎಂಬುದನ್ನು ತಾವೇ ಯೋಚನೆ ಮಾಡಿ ೧೮ ಕೋಟಿ ರೂಪಾಯಿ ಬೆಲೆ ಬಾಳತಕ್ಕ ಹಂಪಿ ಸಕ್ಕರೆ ಕಾರ್ಖಾನೆಯನ್ನು ಪ್ರಭಾವಕ್ಕೆ ಒಳಗಾಗಿ ಕೇವಲ ೫ ಕೋಟಿ ರೂಪಾಯಿಗೆ ಮಾರಿರುವುದನ್ನು ತಾವು ಯೋಚನೆ ಮಾಡಬೇಕು. ಮತ್ತೆ ೧೦ ಎಕರೆ ಒಳಗೆ ಇರತಕ್ಕ ಗೇಣಿ ಭೂಮಿ ಇದ್ದರೆ ಅವರಿಂದ ಗೇಣಿ ಸಾಲವನ್ನು ವಸೂಲಿ ಮಾಡಬಾರದು ಎಂದು ಸುತ್ತೋಲೆ ಹೊರಡಿಸುತ್ತೇವೆಂದು ಹೇಳಿ ಆಗ ಹೊರಡಿಸದೇ ರೈತರಿಗೆ ವಂಚನೆ ಮಾಡಿದ್ದೀರಿ. ಆದರೆ ನೀವು ನಮ್ಮನ್ನು ರೈತ ವಿರೋಧಿ ಸರ್ಕಾರ ಎಂದು ಹೇಳುತ್ತೀರಿ. ಯಾವುದು ರೈತ ವಿರೋಧಿ ಸರ್ಕಾರ? ಬಗರ್‌ಹುಕುಂ ಸಾಗುವಳಿಯನ್ನು ಸರ್ಕಾರ ಸಕ್ರಮ ಮಾಡುತ್ತದೆಂದು ಹೇಳಿ ತಾವು ಮಸೂದೆಯನ್ನು ಕಳೆದ ಅಧಿವೇಶನದಲ್ಲಿ ಮಂಡಿಸುತ್ತೇವೆಂದು ಹೇಳಿದಿರಿ. ಆದರೆ ತಾವು ಅದನ್ನು ಮಾಡಿಲ್ಲ ಕೆಲವು ದೊಡ್ಡ ದೊಡ್ಡ ಕಾಫಿಪ್ಲಾಂಟರ್ಸ್ ಒತ್ತುವರಿ ಮಾಡಿಕೊಂಡಿರತಕ್ಕ ೧೦೦ ಎಕರೆ ೨೦೦ ಎಕರೆ ಜಾಗವನ್ನು ತಾವು ಸಕ್ರಮ ಮಾಡಬೇಕೆಂದು ಹೊರಟಿದ್ದಿರಿ. ನಾವು ಅದನ್ನು ವಿರೋಧ ಮಾಡಿದೆವು. ನೀವು ರೈತರ ಪರವಾಗಿ ಇದ್ದಿರೋ ಅಥವಾ ವಿರೋಧವಾಗಿ ಇದ್ದಿರೋ ಎಂಬುದನ್ನು ನೀವೇ ಹೇಳಿ. ಅನೇಕ ರೈತರ ಭೂಮಿಯನ್ನು, ಮನೆ ನಿವೇಶನಕ್ಕೆ, ಕೆರೆ ಕಟ್ಟೆ ನಿರ್ಮಾಣ ಮಾಡುವುದಕ್ಕೆ, ಕಾಲುವೆ ನಿರ್ಮಾಣ ಮಾಡುವುದಕ್ಕೆ ತಾವು ಸ್ವಾಧೀನಪಡಿಸಿಕೊಂಡಿದ್ದೀರಿ. ೧೯೮೫ರಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಇವತ್ತಿನವರೆವಿಗೂ ಪರಿಹಾರವನ್ನು ಕೊಡಲಿಲ್ಲ. ನಿಮ್ಮದು ರೈತ ವಿರೋಧಿ ಸರ್ಕಾರ ಅಲ್ಲವೇ? ತಾವು ರೈತರ ಪರವಾಗಿ ಏನು ಮಾಡಿದ್ದೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ಲಭ್ಯ ಇರತಕ್ಕ ವಿದ್ಯುತ್ತನ್ನು ಕೃಷಿ ವಲಯಕ್ಕೆ ಎಷ್ಟು ಕೊಟ್ಟಿದ್ದೀರಿ ಎನ್ನುವ ಬಗ್ಗೆ ಅಂಕಿಅಂಶಗಳನ್ನು ಕೊಡುತ್ತೇನೆ. ಇದನ್ನು ರೈತರು ಉಪಯೋಗ ಮಾಡಿದ್ದಾರೆಯೋ ಎಂದು ನಾನು ಕೇಳುತ್ತೇನೆ. ೧೯೮೮–೮೯ರಲ್ಲಿ ಲಭ್ಯವಿರುವ ವಿದ್ಯುತ್ ೮೦ ಬಿಲಿಯನ್ ಯೂನಿಟ್ಸ್, ಇದರಲ್ಲಿ ವಲಯವಾರು ಹಂಚಿಕೆ ವಿವರ ಈ ರೀತಿಯಲ್ಲಿದೆ. ಹೈಟೆನ್‌ಷನ್ ಇಂಡಸ್ಟ್ರೀಗೆ ಶೇಕಡಾ ೪೦.೫೮ರಷ್ಟು ವಿದ್ಯುತ್ ಕೊಟ್ಟಿದ್ದೀರಿ. ಲೋಟೆನ್‌ಷನ್ ಇಂಡಸ್ಟ್ರೀಗೆ ೭.೭½ ಪರ್ಸೆಂಟ್ ಕೊಟ್ಟರೆ ನೀರಾವರಿ ಪಂಪುಸೆಟ್ಟುಗಳಿಗಾಗಿ ೨೯.೭½ ಪರ್ಸೆಂಟ್ ಕೊಟ್ಟಿದ್ದೀರಿ. ಮತ್ತೆ ಡೊಮೆಸ್ಟಿಕ್ ಕನ್‌ಸೂಮರ್ಸ್‌ಗೆ ೧೭.೮೪ ಪರ್ಸೆಂಟ್ ವಿದ್ಯುತ್ ಕೊಟ್ಟಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ತಾವು ಏನು ವಿವರಣೆ ಕೊಡುತ್ತಿದ್ದೀರಿ ಅದು ಸರಿ ಇದೆ. ಕೆಲವು ಹೈಟೆನ್‌ಷನ್ ಇಂಡಸ್ಟ್ರೀಸ್‌ಗೆ ಕಮಿಟೆಡ್ ಇರುತ್ತದೆ. ಹಿಂದಿನ ಸರ್ಕಾರಗಳು ಆ ಬಗ್ಗೆ ಕಮಿಟ್ ಆಗಿರುತ್ತವೆ. ಇದನ್ನೆಲ್ಲಾ ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಐಪಿ ಸೆಟ್‌ಗಳಿಗೆ ೨೯ ಪರ್ಸೆಂಟ್ ಎಂದು ತಾವೇ ಹೇಳಿದ್ದೀರಿ. ೮೫ಕ್ಕಿಂತ ಹಿಂದೆ ಎಷ್ಟು ಎಷ್ಟು ಸೆಟ್‌ಗಳಿಗೆ ವಿದ್ಯುತ್ ಒದಗಿಸಲಾಗಿತ್ತು, ಹಾಗೂ ಆ ನಂತರ ಎಷ್ಟು ಒದಗಿಸಲಾಗಿದೆ ಎಂಬ ಬಗ್ಗೆ ತಾವು ವಿವರ ನೋಡಿ.

ಶ್ರೀ ಜಿ. ರಾಜೂಗೌಡ.—ರೈತರ ಪಂಪುಸೆಟ್ಟುಗಳು ಹೆಚ್ಚಾಗಿವೆ. ಪ್ರತಿ ವರ್ಷ ಕೊನೇ ಪಕ್ಷ ೪೦ ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸುತ್ತೇವೆಂದು ಹೇಳಿದಿರಿ. ಕಡೆಗೆ ಅದನ್ನೂ ಕೂಡಾ ಈಡೇರಿಸಲಿಲ್ಲ. ಒಂದು ವರ್ಷದ ಹಿಂದೆ ಅರ್ಜಿ ಹಾಕಿದ ರೈತರಿಗೆ ಇನ್ನೂ ಕೂಡಾ ವಿದ್ಯುತನ್ನು ಕೊಟ್ಟಿಲ್ಲ. ರೈತರಿಗೆ ವಿದ್ಯುತ್ ಒದಗಿಸುವುದರಲ್ಲಿ ಆದ್ಯತೆಯನ್ನು ನೀವು ಕೊಟ್ಟಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ.—ನಮ್ಮ ರಾಯಚೂರು ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ ೨೫೦ರಿಂದ ೩೦೦ ಪಂಪುಸೆಟ್ಟುಗಳಿಗೆ ವಿದ್ಯುತ್ ಜೋಡಣೆ ಮಾಡಬೇಕು ಎಂದು ಟಾರ್ಜೆಟ್ ಫಿಕ್ಸ್ ಮಾಡಿದ್ದರು. ೧೯೮೮–೮೯ರಲ್ಲಿ ನಮ್ಮ ಭಾಗದಲ್ಲಿ ಕೆಲವು ತಾಲ್ಲೂಕುಗಳಲ್ಲಿ ೨೫೦ ರಿಂದ ೫೦೦ ಪಂಪುಸೆಟ್ಟುಗಳಿಗೆ ವಿದ್ಯುತ್ ನೀಡಿ ಟಾರ್ಜೆಟ್‌ಗಿಂತ ಹೆಚ್ಚು ಸಾಧನೆ ಸಾಧಿಸಿದ್ದೇವೆ. ಹೋದವರ್ಷ ೫೦ ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಿದ್ದು ಪ್ರತಿ ವರ್ಷ ಕೂಡಾ ಹೆಚ್ಚು ಹೆಚ್ಚು ವಿದ್ಯುತ್ ಜೋಡಣೆ ಕಾರ್ಯ ಆಗಿದೆ. ಆದ್ದರಿಂದ ನೀವು ಸುಮ್ಮಸುಮ್ಮನೆ ಆಪಾದನೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಜಿ. ರಾಜೂಗೌಡ.—ನಿಮ್ಮ ಸರ್ಕಾರದ ಮೇಲೆ ನಾನು ಆಪಾದನೆ ಮಾಡುತ್ತಿಲ್ಲ. ನಿಮ್ಮ ಕಾಲದಲ್ಲಿ ರೈತರು ಸೌಕರ್ಯಗಳಿಂದ ವಂಚಿತರಾಗಿದ್ದಾರೆಂದು ಹೇಳುತ್ತಿದ್ದೇನೆ. ರೈತರಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳುತ್ತಿದ್ದೇನೆ. ಬಡ್ಜೆಟನ್ನು ಅರ್ಧ ಓದಿದಾಗಲೇ ತಾವೂ ಪೂರ್ತಿ ನೋಡದೇ ಅರ್ಧದಲ್ಲೇ ಇದು ರೈತ ವಿರೋಧಿ ಸರ್ಕಾರ ಎಂದು ಘೋಷಣೆ ಮಾಡುತ್ತಾ ಹೊರಗಡೆ ಹೋದಿರಿ. ತಾವೂ ಪೂರ್ತಿ ಇದ್ದು ನೋಡಬೇಕಾಗಿತ್ತು. ತಾವು ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಹಿಂದುಳಿದ ವರ್ಗದವರಿಗೆ ನಿಗಧಿಪಡಿಸಿರತಕ್ಕ ಮೀಸಲಾತಿ ಸೌಕರ್ಯವನ್ನು ಕಡ್ಡಾಯವಾಗಿ ಜಾರಿಗೆ ತರುತ್ತೇವೆಂದು ಜಾರಿಗೆ ತರುವುದಕ್ಕೆ ಆಗದೇ ಇದ್ದರೆ ಸುಗ್ರೀವಾಜ್ಞೆ ತಂದು ಅದರ ಮುಖಾಂತರ ಮಾಡುತ್ತೇವೆ ಎಂದು ಹೇಳಿದಿರಿ. ಆದರೆ ಅದನ್ನು ಎಲ್ಲಿ ಮಾಡಿದಿರಿ?

ನೀವು ನುಡಿದಂತೆ ನಡೆಯುವ ಸರ್ಕಾರವೆಂದು ಘೋಷಣೆ ಮಾಡಿಕೊಂಡಿದ್ದೀರಿ. ಮೌಲ್ಯ ಆಧಾರಿತ ಸರ್ಕಾರವೆಂದು ಘೋಷಣೆ ಮಾಡಿಕೊಂಡ ನಂತರ ಅದು ವಚನಭ್ರಷ್ಟ ಸರ್ಕಾರ ಆಗಿ ಹೋಯಿತು.

ಶ್ರೀ ಬಿ. ಹೆಚ್. ಬನ್ನಿಕೋಡ್.— ಮಾನ್ಯ ಸದಸ್ಯರು ಈ ವರ್ಷದ ಬಜೆಟ್ ಮೇಲೆ ಮಾತನಾಡುತ್ತಾ ಇದ್ದಾರೋ ಅಥವಾ ಹಿಂದಿನ ವರ್ಷದ ಬಜೆಟ್ ಮೇಲೆ ಮಾತನಾಡುತ್ತಿದ್ದಾರೋ ನನಗೆ ಗೊತ್ತಾಗಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ.— ಅವರು ಇನ್ನು ೧೯ನೇ ಶತಮಾನದಲ್ಲಿದ್ದಾರೆ. ೨೦ನೇ ಶತಮಾನಕ್ಕೆ ಆಮೇಲೆ ಬರುತ್ತಾರೆ.

ಶ್ರೀ ಜಿ. ರಾಜೂಗೌಡ.— ನಾನು ಹೇಳುತ್ತಿರುವುದನ್ನು ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಇರತಕ್ಕ ಖಾಲಿ ಹುದ್ದೆಗಳಿಗೆ ಸ್ಟೈಪಂಡರಿ ಪದವೀಧರರನ್ನು ನೇಮಕ ಮಾಡಿಕೊಳ್ಳುತ್ತೇವೆಂದು ಹೇಳಿದ್ದೀರಿ. ಸ್ಟೈಪಂಡರಿ ಪದವೀಧರರು ಎಷ್ಟು ಜನರಿದ್ದಾರೆ ? ಆರು ಸಾವಿರ ಜನ ಸ್ಟೈಪಂಡರಿ ಪದವೀಧರರನ್ನು ನೇಮಕ ಮಾಡಿಕೊಳ್ಳತಕ್ಕ ಕೆಲಸವನ್ನು ತಾವು ಮಾಡಲಿಲ್ಲ. ೫೪ಸಾವಿರ ಹುದ್ದೆಗಳು ಖಾಲಿಯಿವೆ ಅವುಗಳಿಗೆ ಅವರನ್ನು ನೇಮಿಸಿಕೊಳ್ಳುತ್ತೇವೆಂದು ಹೇಳಿದ್ದೀರಿ, ಅದೂ ಸಹ ಆಗಲಿಲ್ಲ ಹತ್ತು ಸರಿ ಹೇಳಿದ್ದೀರಿ, ರಾಜ್ಯದ ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕ ವರ್ಗವನ್ನು ಪೂರ್ಣ ತುಂಬುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಈ ಕೆಲಸವನ್ನೂ ಸಹ ಮಾಡಲಿಕ್ಕೆ ತಮಗೆ ಆಗಲಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮತ್ತು ಮಾನ್ಯ ಬೊಮ್ಮಾಯಿಯವರು ಆಶ್ವಾಸನೆಗಳ ಬುತ್ತಿಯನ್ನೆ ಕೊಟ್ಟಿದ್ದಾರೆ, ಅದು ಯಾವುದೂ ಕಾರ್ಯಗತವಾಗಲಿಲ್ಲ.

ಇನ್ನು ಮುಖ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಂಧ್ರ ಪ್ರದೇಶದ ಮುಖ್ಯ ಮಂತ್ರಿಗಳಾದ ಎನ್. ಟಿ. ರಾಮರಾವ್‌ರವರು ಅಧಿಕಾರದಲ್ಲಿದ್ದಾಗ ಕೃಷ್ಣ ನದಿಯಲ್ಲಿ ಹೆಚ್ಚುವರಿ ನೀರು ಇಲ್ಲ, ಹೆಚ್ಚುವರಿ ನೀರು ಇದೆಯೆಂದು ಹೇಳುವುದು ಬರೀ ಭ್ರಮೆಯೆಂದು ಹೇಳುವ ಒಡುಕು ಮಾತುಗಳನ್ನು ಹೇಳಿ ಇಡೀ ನಮ್ಮ ರಾಜ್ಯವನ್ನು ಚಿಂತೆಗೆ ಈಡುಮಾಡಿದ್ದಾರೆ. ಬಚಾವತ್ ಕಮಿಷನ್ ರಿಪೋರ್ಟ್ ಪ್ರಕಾರ ೩೩೦ ಟಿಎಂಸಿ ನೀರು ಏನಿದೆ ಅದರಲ್ಲಿ ಶೇಕಡ ೫೦ರಷ್ಟು ನೀರನ್ನು ಕರ್ನಾಟಕ ರಾಜ್ಯಕ್ಕೆ ಪಡೆಯುವುದಕ್ಕೆ ನೀವು ಪ್ರಯತ್ನ ಪಟ್ಟಿದ್ದೀರಾ ? ರೈತ ವಿರೋಧಿ ಸರ್ಕಾರ ಯಾವುದು ? ನಮ್ಮ ಮೇಲೆ ನಮ್ಮ ಮೇಲೆ ಏನನ್ನುವುದನ್ನು ತಾವು ಹೇಳಬೇಕು. ತಮಿಳುನಾಡಿಗೆ ಕಾವೇರಿ ನೀರನ್ನು ಬಿಟ್ಟಾಗ ನೀರಿಗೆ ಬದಲಾಗಿ ವಿದ್ಯುತ್ ಕೊಡಬೇಕೆಂದು ಒಪ್ಪಂದವಾಗಿತ್ತು. ಆ ಒಪ್ಪಂದದ ಪ್ರಕಾರ ೧೬ ಕೋಟಿ ರೂಪಾಯಿ ಮೌಲ್ಯದ ವಿದ್ಯುತ್‌ನ್ನು ನಮ್ಮ ರಾಜ್ಯಕ್ಕೆ ಅವರು ಬಿಡುಗಡೆ ಮಾಡಬೇಕು

ಅದಕ್ಕೆ ನೀವು ಸಹಕಾರ ಮಾಡಲಿಲ್ಲ. ಆದರಿಂದ ನಮ್ಮ ರೈತರಿಗೆ ತೊಂದರೆಯಾಗಲಿಲ್ಲವೇ ? ರೈತರಿಗೆ ನೀವು ಏನು ಉಪಕಾರ ಮಾಡಿದ್ದೀರಿ ? ನೀರನ್ನು ಬಿಟ್ಟು ಅವರಿಂದ ವಿದ್ಯುತ್ ಅನ್ನು ಪಡೆಯಲಿಲ್ಲ. ೧೬ ಕೋಟಿ ರೂಪಾಯಿ ಮೌಲ್ಯದ ವಿದ್ಯುಚ್ಛಕ್ತಿ ನಮ್ಮ ರಾಜ್ಯಕ್ಕೆ ದೊರಕಿದ್ದರೆ ನಮ್ಮ ರಾಜ್ಯದ ರೈತರಿಗೆ ಎಷ್ಟು ಅನುಕೂಲವಾಗುತ್ತಿತ್ತು ? ಈ ವಿಷಯದಲ್ಲಿ ಅಲಕ್ಷ್ಯ ಮಾಡಿದ್ದೀರಿ. ಇದರಿಂದ ರೈತರಿಗೆ ಪರೋಕ್ಷವಾಗಿ ತೊಂದರೆ ಮಾಡಿದಹಾಗೆ ಆಗಲಿಲ್ಲವೆ ? ದಯವಿಟ್ಟು ಈ ವಿಷಯವನ್ನು ತಿಳಿಸಬೇಕೆಂದು ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಬಜೆಟ್ ಮೇಲೆ ಭಾಷಣ ಮಾಡುವಾಗ ಒಂದು ಮಾತನ್ನು ಹೇಳಿದರು ಏನೆಂದರೆ, ಈ ಬಜೆಟ್ ಸರಿಯಿಲ್ಲ, ಇದು ಕಣ್ಣು ಹೊರೆಸತಕ್ಕ ಬಜೆಟ್ ಆಗಿದೆ ಯೆಂದು ಆದರೆ ನಮ್ಮ ಸರ್ಕಾರ ಯಾರದೇ ಕಣ್ಣು ಹೊರೆಸತಕ್ಕ ಕೆಲಸವನ್ನು ಮಾಡಿಲ್ಲ. ಯಾವ ವರ್ಗ ದವರಿಗೆ ಈ ಬಜೆಟ್‌ನಲ್ಲಿ ಅನುಕೂಲವಾಗಿದೆಯೆಂದು ಕೇಳಿದರು. ಆದರೆ ಯಾರ ಕಣ್ಣನ್ನು ಹೊರೆಸತಕ್ಕ ಕೆಲಸವನ್ನು ನಾವು ಮಾಡುವುದಕ್ಕೆ ಪ್ರಯತ್ನಪಟ್ಟಿಲ್ಲ. ಅವರು ಬಜೆಟ್ ಭಾಷಣವನ್ನು ಚೆನ್ನಾಗಿ ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಬಜೆಟ್ ಭಾಷಣವನ್ನು ಅಮೂಲಾಗ್ರವಾಗಿ ಪರಿಶೀಲನೆ ಮಾಡಿದಾಗ ಅನೇಕ ವಿಷಯಗಳು ಗೋಚರವಾಗುತ್ತವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಏನು ಹೇಳಿದ್ದೇವೆಂದರೆ ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆಯತಕ್ಕ ಬೆಳೆ ಸಾಲಗಳಿಗೆ ಸಂಬಂಧಪಟ್ಟಂತೆ ಬಡ್ಡಿ ಸಹಾಯಧನ ಒದಗಿಸುವ ಹೊಸ ಯೋಜನೆಯನ್ನು ಮಾಡಿ ಅದನ್ನು ಪೂರ್ವಾನ್ವಯವಾಗಿ ಜಾರಿಗೆ ತರುತ್ತೇವೆನ್ನುವ ಮಾತನ್ನು ಹೇಳಿದ್ದೇವೆ. ಬಹಳ ಮುಖ್ಯವಾಗಿರತಕ್ಕ ಗೃಹನಿರ್ಮಾಣ ಯೋಜನೆಯಲ್ಲಿ ವಸತಿ ಸೌಕರ್ಯ ಒದಗಿಸಲಿಕ್ಕೆ ಹಣವನ್ನು ಇಡಲಾಗಿದೆ. ೧೨ಸಾವಿರ ಮನೆಗಳನ್ನು ಕಟ್ಟಿಸುವ ಯೋಜನೆಯನ್ನು ತಯಾರು ಮಾಡಿದ್ದೇವೆ ೬೫೦೦ ವ್ಯಕ್ತಿಗಳಿಗೆ ಭಾಗ್ಯೋದಯ ಸೌಲಭ್ಯಗಳನ್ನು ಕಲ್ಪಿಸುವ ವ್ಯವಸ್ಥೆ ಮಾಡಿದ್ದೇವೆ. ಇವುಗಳೆಲ್ಲ ಬಜೆಟ್‌ನಲ್ಲಿ ಹೇಳಿರುವ ಕಾರ್ಯಕ್ರಮಗಳು ಅಲ್ಲವೇ? ಕಣ್ಣು ಹೊರೆಸುವ ಕೆಲಸ ಮಾಡಿದ್ದೇವೆಂದು ಕಣ್ಣು ಮುಚ್ಚಿಕೊಂಡು ಏತಕ್ಕೆ ಮಾತನಾಡುತ್ತೀರಿ ? ಗ್ರಾಮೀಣ ನೈರ್ಮಲ್ಯ ಯೋಜನೆಗಳಿಂದ ಎಷ್ಟು ಉಪಯೋಗವಾಗುತ್ತದೆ? ಈ ಕಾರ್ಯಕ್ರಮದಲ್ಲಿ ಪ್ರತಿ ವರ್ಷ ೧ಲಕ್ಷ ಕುಟುಂಬಗಳಿಗೆ ೪೦೦ ರೂಪಾಯಿ ಬೆಲೆಬಾಳತಕ್ಕ ಸಾಮಗ್ರಿಗಳನ್ನು ಹಾಗೂ ತಾಂತ್ರಿಕ ಮಾರ್ಗದರ್ಶನಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅದಕ್ಕಾಗಿ ನಾಲ್ಕು ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ.

೫–೧೫ ಪಿ. ಎಂ.

ಈ ಸಾರಿ ಸ್ಟೈಪೆಂಡರಿ ಪದವೀಧರರನ್ನು ಈಗ ಇರತಕ್ಕಂಥ ಖಾಲಿ ಇರುವ ಜಾಗಗಳಲ್ಲಿ ತುಂಬುವ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದಾರೆ. ನೀವು ಊಟದ ವೆಚ್ಚದ ದರ ಹೆಚ್ಚಿಸುವ ಪ್ರಯತ್ನ ಪಟ್ಟಿರಿ ಆದರೆ ಮಾಡಲಿಕ್ಕೆ ಆಗಲಿಲ್ಲ. ಅದು ಜಾರಿಗೆ ಬರಲಿಲ್ಲ. ನೀವು ಮಾಡದೇ ಇರುವ ಕೆಲಸವನ್ನು ಈಗ ನಾವು ಮಾಡಿದ್ದೇವೆ.

ಶ್ರೀ ಪಿ ಜಿ ಆರ್. ಸಿಂಧ್ಯ.— ಮಾನ್ಯ ರಾಜುಗೌಡರೇ ತಮಗೆ ಗೊತ್ತಿದೆ. ೮೩ರಲ್ಲಿ ಎಷ್ಟು ಇತ್ತು ಮತ್ತು ೮೮ರಲ್ಲಿ ಎಷ್ಟು ಇತ್ತು ಎಂಬುದು ಮಧ್ಯದಲ್ಲಿ ನಾವು ಎರಡು ಸಾರಿ ಏರಿಸಿದ್ದೇವೆ. ಇದಾದಮೇಲೆ ನಮ್ಮ ಬಜೆಟ್ ಮಂಡನೆ ಮಾಡಿದಮೇಲೆ ನಮ್ಮ ಸರ್ಕಾರವನ್ನು ಡಿಸ್‌ಮಿಸ್ ಮಾಡಿದಿರಿ. ನಾವು ಇಂಪ್ಲಿಮೆಂಟ್ ಮಾಡುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ ?

ಶ್ರೀ ಜಿ ರಾಜುಗೌಡ.— ನಿಮ್ಮ ಮಾನ್ಯ ಮಾಜಿ ಮುಖ್ಯಮಂತ್ರಿಗಳ ಮಾತನ್ನೇ ಹೇಳುವುದಾದರೆ ತಾವು ದಯವಿಟ್ಟು ಅರ್ಥಮಾಡಿಕೊಳ್ಳಬೇಕು. ಈ ರಾಜ್ಯದ ಪ್ರಗತಿಗೆ ಕಂಟಕಪ್ರಾಯರು ನಾವೇ ಎಂದು ಅವರು ಒಪ್ಪಿಕೊಂಡಿದ್ದಾರೆ. ನಾವೇ ಹೊಣೆಗಾರರು ಎಂದು ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ ಯವರು ಒಪ್ಪಿಕೊಂಡಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ ''೧೯೮೦ರ ನಂತರ ನಾವು ಜನ ಸಂಪರ್ಕ ಕಳೆದುಕೊಂಡೆವು. ಜನಕ್ಕೂ ಮತ್ತು ನಮಗೂ ಅಂತರ ಬೆಳೆಯಿತು. ಶಾಸಕರು ಬೆಂಗಳೂರಿನಲ್ಲಿ ಕಾಲಕಳೆಯುತ್ತಿದ್ದರು. ಪ್ರಾಯಶಃ ಇದು ಈ ರಾಜ್ಯದ ಪ್ರಗತಿಗೆ ಕಂಟಕ ಆಯಿತು''... ಇರಿ. ಇನ್ನೂ ಮುಂದುವರೆದು ಹೇಳುತ್ತೇನೆ. ಅವರು ಹೇಳುತ್ತಾರೆ ''ಚುನಾವಣಾ ಪ್ರಚಾರಕ್ಕಾಗಿ ನಾನು ಹತ್ತಾರು ದಿವಸ ಸತತ ಪ್ರವಾಸ ಮಾಡಿದ್ದೇನೆ. ಹಗಲು ರಾತ್ರಿ ಹದಿನೈದು ಸಾವಿರ ಕಿಲೋ ಮೀಟರ್ ಸುತ್ತಿದ್ದೇನೆ. ಜನ ಎಲ್ಲೆಲ್ಲೂ ಸಂಭ್ರಮದಿಂದ ಸ್ವಾಗತಕೊಟ್ಟರು.'' ಆದರೆ ಫಲಿತಾಂಶ ಹೇಗೆ ಆಯಿತು ಎಂದು ಏನು ಭಾವನೆ ಇತ್ತೋ. ಅದನ್ನು ಅವರು ಒಪ್ಪಿಕೊಂಡಿದ್ದಾರೆ. ''ನಮ್ಮ ಪಕ್ಷದ ಆಂತರಿಕ ಜಗಳದ ಬೆಳವಣಿಗೆಯನ್ನು ಕಂಡ ಜನ ಬೇಸತ್ತರು. ಚುನಾವಣೆಯಲ್ಲಿ ನಮಗೆ ಬುದ್ಧಿ ಕಲಿಸಲು ಅವರು ನಿರ್ಧರಿಸಿದರು ಮತ್ತು ನಾವು ಸೋತೆವು'' ಎಂದು ಅವರು ಹೇಳಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಒಪ್ಪುತ್ತೇನೆ. ಶ್ರೀ ಬೈರೇಗೌಡರ ಜೊತೆಗೆ ಇದ್ದಾಗಲೂ ನೀವು ಈ ಕಡೆಗೆ ಬರಲಿಕ್ಕೆ ಆಗಲಿಲ್ಲ. ನಮ್ಮ ಜಗಳ, ಏನು ಮಾಡುವುದು ?

ಶ್ರೀ ಜಿ. ರಾಜೂಗೌಡ.—ಫಲಿತಾಂಶದ ಸಮೀಕ್ಷೆ ಕೂಡ ನಾವು ಮಾಡಿದ್ದೆವು. ಬೈರೇಗೌಡರು ನೀವು ಸೇರಿದ್ದರೂ ಇಷ್ಟು ಬರುತ್ತಿರಲಿಲ್ಲ. ಇದಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿ ಬರುತ್ತಿದ್ದೀರಿ. ಮತ್ತೆ ಪಡೆದಿರತಕ್ಕಂಥ ಓಟು ಲೆಕ್ಕ ಹಾಕಿದರೆ. ಬೈರೇಗೌಡರ ಪಕ್ಷದಲ್ಲಿ ತೆಗೆದುಕೊಂಡ ಓಟುಗಳನ್ನು ಲೆಕ್ಕ ಹಾಕಿದರೆ ಇನ್ನೂ ೫೦–೬೦ ಸೀಟು ಹೆಚ್ಚು ಬರಬಹುದಾಗಿತ್ತೇ ಹೊರತು ಈ ರಾಜ್ಯದ ಆಡಳಿತ ಸೂತ್ರ ಹಿಡಿಯುತಕ್ಕಂಥ ಶಕ್ತಿ ನಿಮಗೆ ಬರುತ್ತಿತ್ತಾ ?

ಶ್ರೀ ಬಿ. ಎಚ್. ಬನ್ನಿಕೋಡ್.—ನಮ್ಮ ಸರ್ಕಾರ ಎರಡು ಭಾಗವಾಗಿ ಹೋಯಿತು. ನಿಮ್ಮದು ಮೂರು ಭಾಗವಾಗದಂತೆ ಎಚ್ಚರಿಕೆ ವಹಿಸುತ್ತೀರಿ ಎಂದು ನಾನು ಭಾವಿಸುತ್ತೇನೆ.

ಶ್ರೀ ಜಿ. ರಾಜೂಗೌಡ.—ಈ ರೀತಿ ನಾವು ೭೫ ರಿಂದ ೧೦೦, ೧೦೦ ರಿಂದ ೧೫೦ ಮತ್ತು ೧೫೦ ರಿಂದ ೨೦೦ ರೂಪಾಯಿಗಳವರೆಗೆ ಏರಿಸಿದೆವು. ಮತ್ತೆ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ನೂರು ರೂಪಾಯಿ ಕೊಡುವುದಾಗಿ ಗೊತ್ತು ಮಾಡಿದ್ದರು. ನಮ್ಮ ಸರ್ಕಾರ ಮುನ್ನೂರು ರೂಪಾಯಿಗಳಿಗೆ ಗೊತ್ತು ಮಾಡಿದೆ. ಒಂದು ನೂರು ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳನ್ನು ಕಟ್ಟಬೇಕೆಂದು ಹೇಳಿ ನಿಮ್ಮ ಸರ್ಕಾರ ನಾಲ್ಕಾರು ಸಾರಿ ಘೋಷಣೆ ಮಾಡಿದರೂ ಕಾರ್ಯಗತ ಆಗಲಿಲ್ಲ. ಈ ಕೆಲಸವನ್ನು ಕೂಡ ನಾವೇ ಮಾಡಬೇಕಾಗಿ ಬಂತು. ನಾವು ಕೆಲಸ ಮಾಡಿರತಕ್ಕಂಥಾದ್ದನ್ನು ಮೂರು ವರ್ಷವಾದರೂ ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗಲಿಲ್ಲ ನಿಮ್ಮ ಕಸುಬು ಇದು.

ಜಿಲ್ಲಾ ಪಾರು ವಲಯಕ್ಕೆ ಸುಮಾರು ಮುನ್ನೂರು ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಹ ಗ್ರಾಮೀಣ ಪ್ರದೇಶದಲ್ಲಿರತಕ್ಕ ರಸ್ತೆಗಳ ದುಸ್ಥಿತಿಯನ್ನು ನೋಡಿ ಇನ್ನೂ ೧೨೦ ಕೋಟಿ ವೆಚ್ಚ ಮಾಡಬೇಕೆಂದಿದ್ದೇವೆ. ಪ್ರತಿ ವರ್ಷ ೨೦ ಕೋಟಿ ವೆಚ್ಚ ಮಾಡಿ, ೫ ವರ್ಷದಲ್ಲಿ ಒಂದು ನೂರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಬಿ. ಎಚ್. ಬನ್ನಿಕೋಡ್.—ಬಜೆಟ್‌ನಲ್ಲಿ ಪ್ರಾವಿಜನ್ ಇಲ್ಲ. ಎ. ಪಿ. ಎಂ. ಸಿ. ಯಿಂದ ಹಣವನ್ನು ತರುತ್ತೇವೆಂದು ಹೇಳುತ್ತೀರಿ. ಇದು ಬರೀ ಕಣ್ಣೊರೆಸುವ ಕೆಲಸ.........

ಶ್ರೀ ಜಿ. ರಾಜೂಗೌಡ.—ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವುದು ನಮ್ಮ ಧರ್ಮ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿಕೊಂಡು, ಕಾರ್ಯಕ್ರಮಗಳನ್ನು ಮಾಡುತ್ತೇವೆ ಎಂದು ಹೇಳುವುದೇ ಬಜೆಟ್. ಎಷ್ಟು ಕರವನ್ನು ವಸೂಲ್ಮಾಡುತ್ತೇವೆ. ಅದನ್ನು ಯಾವರೀತಿ ಖರ್ಚು ಮಾಡುತ್ತೇವೆ. ಎಂಬುದನ್ನು ಹೇಳಬೇಕು. ಇದರ ಬಗ್ಗೆ ತಾವು ಏನು ಹೇಳುತ್ತೀರಿ. ನೀವು ೧೯೮೩ ರಿಂದ ೧೯೯೦ ರ ವರೆಗೆ ಅಧಿಕಾರದಲ್ಲಿದ್ದೀರಿ, ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ನಿಮ್ಮ ದೃಷ್ಟಿ ಬೀರಲಿಲ್ಲ. ನಮ್ಮ ಸರ್ಕಾರ ಬಂದ ತಕ್ಷಣ.........

ಶ್ರೀ ಬಸವರಾಜ ರಾಯರೆಡ್ಡಿ.—ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯನ್ನು ಯಾರು ರಚನೆ ಮಾಡಿದರು ? ಹಿಂದೆ ವೀರೇಂದ್ರ ಪಾಟೀಲ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಮಾಡುವುದಕ್ಕಾಗಲಿಲ್ಲ, ಮಾನ್ಯ ಬೊಮ್ಮಾಯಿಯವರ ಸರ್ಕಾರ ಇದ್ದಾಗ ಇದನ್ನು ಮಾಡಿದೆ. ನಾವು ಮಾಡಿದ್ದನ್ನೇ ನೀವು ಮುಂದುವರಿಸುತ್ತಿದ್ದೀರಿ.........

ಶ್ರೀ ಜಿ. ರಾಜೂಗೌಡ.—ತಾವು ಕಣ್ಣೊರೆಸುವುದಕ್ಕೆ ೨೦ ಕೋಟಿ ರೂಪಾಯಿ ಕೊಟ್ಟಿರಿ. ನಮ್ಮ ಸರ್ಕಾರ ಬಂದ ತಕ್ಷಣ ೪೦ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟು, ಈ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಬೇಕು. ಆ ಭಾಗದ ಜನಗಳ ಮನಸ್ಸಿನಲ್ಲಿರತಕ್ಕ ಭಾವನೆಗಳನ್ನು...........

ಶ್ರೀ ಹೆಚ್. ಏಕಾಂತಯ್ಯ.—ಪ್ಲಾನ್‌ನಲ್ಲಿ ಎಷ್ಟು ಕೋಟಿ ಪ್ರಾವಿಜನ್ ಮಾಡಿರುವುದು ಗೊತ್ತೆ ? ಪ್ಲಾನ್‌ನಲ್ಲಿ ೪೦ ಕೋಟಿ ಅಲ್ಲ. ಒಂದು ಕೋಟಿ ಮಾಡಿರುವುದು, ಕೇಳಿ ನಿಮ್ಮ ಹಣಕಾಸಿನ ಮಂತ್ರಿಗಳನ್ನು ೪೦ ಕೋಟಿ ಕೊಟ್ಟವರು ಪ್ಲಾನಿಂಗ್ ಕಮೀಷನ್‌ನವರು.

ಶ್ರೀ ಜಿ. ರಾಜೂಗೌಡ.—ಒಂದು ಕೋಟಿ ಕೊಟ್ಟಿರುವುದು ಏನಿದೆ, ಇದು ಸೂಚನೆ ಮಾತ್ರ. ನಾವು ಈ ಕೆಲಸವನ್ನು ತಮಗೆ ಮಾಡಿ ತೋರಿಸುತ್ತೇವೆ.........

ಶ್ರೀ ಬಸವರಾಜ ರಾಯರೆಡ್ಡಿ.—ನೀವು ಮಾಡಿ ತೋರಿಸಿ, ಅದಕ್ಕಾಗಿಯೇ ಜನ ನಿಮ್ಮ ಕೈಗೆ ಅಧಿಕಾರ ಕೊಟ್ಟಿದ್ದಾರೆ, ಅಧ್ಯಕ್ಷರೇ, ಅವರಿಗೆ ಈ ವರ್ಷದ ಬಜೆಟ್ ಮೇಲೆ ಮಾತನಾಡುವುದಕ್ಕೆ ಹೇಳಿ.

ಅವರು ಹೋದ ವರ್ಷದ ಬಜೆಟ್ ಮೇಲೆ ಏಕೆ ಮಾತನಾಡಬೇಕು ? ಇದರಿಂದ ಇಲ್ಲಿ ಎಲ್ಲರೂ ಬೇಜಾರು ಮಾಡಿ ಕೊಳ್ಳುತ್ತಾರೆ. ಇದರಿಂದ ಕಾಲ ಮತ್ತು ಹಣವನ್ನು ಏಕೆ ಹಾಳು ಮಾಡುತ್ತಿದ್ದಾರೆ.........

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನೀವು ಯಾರೂ ಹಿಂದಿನ ಚರಿತ್ರೆ ಬಗ್ಗೆ ಮಾತನಾಡಿಲ್ಲವೇ ? ನಾವು ಬಸವರಾಜ ರಾಯರೆಡ್ಡಿಯವರು ಹೇಳಿದ ಹಾಗೆ ಮಾತನಾಡಬೇಕೆಂದಿಲ್ಲ. ನಮಗೆ ಅವಕಾಶ ಇದೆ, ನಾವು ಮಾತನಾಡುತ್ತೇವೆ. ಇದರಿಂದ ಅವರು ಏಕೆ ಬೇಜಾರು ಮಾಡಿಕೊಳ್ಳಬೇಕು?

ಶ್ರೀ ಜಿ. ರಾಜೂಗೌಡ.—ನೀವು ಮತ್ತು ನಿಮ್ಮ ನಾಯಕರು ಮಾತನಾಡುವಾಗ ನಾನು ಸುಮ್ಮನೆ ಕುಳಿತಿದ್ದೆ. ನನಗೆ ಬೇಕಾದ ಪಾಯಿಂಟ್‌ಗಳನ್ನು ಗುರುತು ಹಾಕಿಕೊಂಡೆ. ನೀವೂ ಗುರುತು ಹಾಕಿಕೊಂಡು ಮಾತನಾಡಿ. ಈ ೪೦ ಕೋಟಿ ರೂಪಾಯಿ ಕೊಟ್ಟಿರುವುದು ಯಾವ ಬಜೆಟ್‌ನಲ್ಲಿ ಎಂಬುದರ ಬಗ್ಗೆ ಮಾತನಾಡುತ್ತೇನೆ. ನಾವು ಕಣ್ಣೊರೆಸುವ ಕೆಲಸ ಯಾವತ್ತೂ ಮಾಡುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸೂತಿ ಮತ್ತು ಕುಟುಂಬ ಕಲ್ಯಾಣ ವಾರ್ಡುಗಳಿಗೆ ೩ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಘಟಕಗಳಿಗೂ ಪ್ರಸೂತಿ ಹಾಗೂ ಕುಟುಂಬ ಕಲ್ಯಾಣ ವಾರ್ಡುಗಳಲ್ಲಿ ೧೦ ಹಾಸಿಗೆಗಳಿಂದ ೧೫ ಹಾಸಿಗೆಗಳ ಸೌಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಕರ್ನಾಟಕ ರಾಜ್ಯದಲ್ಲಿರತಕ್ಕ ನಾಲ್ಕು ನೂರು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮೇಲ್ದರ್ಜೆಗೆ ಏರಿಸಿ, ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಎಂ. ಬಿ. ಬಿ. ಎಸ್. ಡಾಕ್ಟರುಗಳನ್ನು ಹಾಕಿ ಜನರಿಗೆ ಆರೋಗ್ಯ ಸೇವೆಯನ್ನು ಅನುಕೂಲ ಮಾಡಲಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಕಳೆದ ವರ್ಷ ನೀರಾವರಿ ಮತ್ತು ವಿದ್ಯುಚ್ಛಕ್ತಿ ವಲಯಕ್ಕೆ ಶೇಕಡ ೨ ರಷ್ಟು ಕಡಿಮೆ ಹಣವನ್ನು ಇಟ್ಟಿದ್ದೇವೆಂದು ಹೇಳಿದರು.

ಬಹುಶಃ ಸಭೆಯಲ್ಲಿ ಅವರಿದ್ದರೆ ಚೆನ್ನಾಗಿರುತ್ತಿತ್ತು. ನಾನು ಕಳೆದ ಸಾರಿ ಮಂಡಿಸಿದ್ದಂತಹ ಮುಂಗಡ ಪತ್ರ ನೋಡಿದರೆ, ೧೯೮೯-೯೦ರಲ್ಲಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ ೨೯೯.೪೦ ಕೋಟಿ ರೂಪಾಯಿಗಳನ್ನು ಮತ್ತು ವಿದ್ಯುಚ್ಛಕ್ತಿಗೆ ೨೭೧.೧೦ ಕೋಟಿ ಇಟ್ಟಿದ್ದರು. ಅಂದರೆ ಒಟ್ಟು ಮೊತ್ತ ೪೮೦.೫೦ ಕೋಟಿ ಆಯಿತು. ಇದು ನಿಮ್ಮ ಯೋಜನಾ ಗಾತ್ರ ೧೦೪೦ ಕೋಟಿ ರೂಪಾಯಿ ಇದ್ದಾಗ ಇಷ್ಟನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದರು. ಆದರೆ ನಿಮ್ಮ ಯೋಜನ ಗಾತ್ರ ೮೮೦ ಕೋಟಿ ರೂಪಾಯಿ ಆಯಿತು. ಇದಕ್ಕೆ ಇಟ್ಟಿದಂತಹ ಹಣ ಇನ್ನೂ ಕಡಿಮೆ ಆಯಿತು ಬಹುಶಃ ಒಟ್ಟು ೨೦೦-೨೫೦ ಕೋಟಿ ಖರ್ಚು ಮಾಡಿದಿರಿ. ಈಗ ೧೯೯೦-೯೧ರಲ್ಲಿ ಇದರ ಖರ್ಚು ಕಡಿಮೆಯಾಗಿದೆ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಅವರು ಇದ್ದಿದ್ದರೆ ಚೆನ್ನಾಗಿತ್ತು. ಯಾವ ಅಂಕಿ ಅಂಶಗಳ ಆಧಾರದ ಮೇಲೆ ಇದನ್ನು ಹೇಳಿದಿರಿ ಎಂದು ನಾನು ಅವರನ್ನು ಕೇಳುತ್ತಿದ್ದೆ. ೯೦-೯೧ ರಲ್ಲಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ ೨೧೨.೩೩ ಕೋಟಿ, ವಿದ್ಯುಚ್ಛಕ್ತಿಗೆ ೨೭೬ ಕೋಟಿ ಅಂದರೆ ಒಟ್ಟು ಮೊತ್ತ ೪೮೮.೩೩ ಕೋಟಿ ನಾವು ಇಟ್ಟಿದ್ದೇವೆ. ಬಹುಶಃ ಈ ರಾಜ್ಯದ ಶಾಸಕಾಂಗದ ಇತಿಹಾಸದಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಇಷ್ಟು ಹಣವನ್ನು ಯಾವ ಸರಕಾರವು ಮೀಸಲಾಗಿಟ್ಟಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಹಿಂದಿನ ಲೆಕ್ಕ ತೆಗೆದುಕೊಂಡು ಬನ್ನಿ, ತೋರಿಸಿ. ಆದುದರಿಂದ ನಾವು ಒಳ್ಳೆಯ ರೀತಿಯಲ್ಲಿ ಈ ಕೆಲಸವನ್ನು ಮಾಡಿದ್ದೇವೆ ಎಂದು ಹೇಳುತ್ತೇನೆ. ಮತ್ತೆ ಕೈಗಾರಿಕೆ ಬಗ್ಗೆ ಒಂದೆರಡು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಟ್ಟು ನಾವು ಇದುವರೆಗೆ ನಮ್ಮ ರಾಜ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ ಹಾಕಿರತಕ್ಕಂಥ ಬಂಡವಾಳ ೪೧೨೭ ಕೋಟಿ ರೂಪಾಯಿಗಳು. ೧೯೮೯ನೇ ಮಾರ್ಚ್ ೩೧ರವರೆಗೆ ೭೨೦ ಕೋಟಿ ರೂಪಾಯಿಗಳ ನಷ್ಟವನ್ನು ಇವು ಅನುಭವಿಸಿವೆ. ಈ ನಷ್ಟ ಏತಕ್ಕೆ ಬಂತು. ಇದನ್ನು ಭರಿಸತಕ್ಕ ಬಗೆ ಹೇಗೆ ಎಂಬುದರ ಬಗ್ಗೆ ಮಾನ್ಯ ಅರ್ಥ ಸಚಿವರು, ಇದರ ಬಗ್ಗೆ ಒಂದು ಸಮಿತಿ ಏರ್ಪಾಡು ಮಾಡಿ. ಅದರ ವರದಿಯನ್ನು ತರಿಸಿಕೊಂಡು, ಈ ಕೈಗಾರಿಕೆಗಳಿಗೆ ಕಾಯಕಲ್ಪ ಮಾಡಿ. ರಾಜ್ಯದ ಇನ್ನೂ ಹೆಚ್ಚಿನ ಜನಗಳಿಗೆ ಈ ಕೈಗಾರಿಕೆಗಳಲ್ಲಿ ಕೆಲಸ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳಿ ಕ್ರಮ ತೆಗೆದುಕೊಂಡಿದ್ದಾರೆ. ಇವು ಒಟ್ಟು ೫೮ ಇದ್ದು ಅದರಲ್ಲಿ ೨೩ ಲಾಭಗಳಿಸಿವೆ ಬಾಕಿದೆಲ್ಲಾ ನಷ್ಟ ಅನುಭವಿಸುತ್ತಿವೆ. ಇಂತಹ ಉದ್ಯಮಗಳು ಯಾವುವು ಎಂಬ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ೨೫೬.೯೫ ಕೋಟಿ ನಷ್ಟ ಅನುಭವಿಸಿದೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ೧೫೫.೩೨ ಕೋಟಿ, ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ್ ೪೭.೩೮ ಕೋಟಿ, ಕರ್ನಾಟಕ ರೇಷ್ಮೆ ಕೈಗಾರಿಕೆ ನಿಗಮ ೨೦.೯೯ ಕೋಟಿ, ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ೧೧.೫೦ ಕೋಟಿ, ಕಿಂಕೋ ೧೧.೬೪ ಕೋಟಿ, ಮೈಸೂರು ವಿದ್ಯುಚ್ಛಕ್ತಿ ಕೈಗಾರಿಕೆ ೯.೮೮ ಕೋಟಿ, ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ೭.೪೯ ಕೋಟಿ, ಕರ್ನಾಟಕ

ಕೃಷಿ ಪೌಷ್ಟಿಕ ಸಂಸ್ಥೆ ೫.೫೩ ಕೋಟಿ, ಕರ್ನಾಟಕ ಪಲ್ಪ್‌ವುಡ್ ಸಂಸ್ಥೆ ೫.೦೭ ಕೋಟಿ ಹೀಗೆ ಬಹುಶಃ ಎಲ್ಲಾ ಸೇರಿ ಒಟ್ಟು ೭೨೦ ಕೋಟಿ ನಷ್ಟ ಅನುಭವಿಸಿವೆ. ನಷ್ಟ ಬಹಳ ಜಾಸ್ತಿಯಾಗಿದೆ. ಈ ದಿಸೆಯಿಂದ ನೋಡುವುದಾದರೆ ರೈತರ ಸಾಲ ೩೬೦ ಕೋಟಿ ರೂಪಾಯಿ ಇದೆ. ೭೨೦ ಕೋಟಿ ರೂಪಾಯಿ ನಷ್ಟದ ದೃಷ್ಟಿಯಿಂದ ನೋಡುವುದಾದರೆ ರೈತರ ಸಾಲ ಯಾವ ರೀತಿ ಮನ್ನಾ ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು. ಇಷ್ಟು ಬಂಡವಾಳ ಹಾಕಿದ್ದರೂ ಜಾಸ್ತಿ ನಷ್ಟವಾಗಿದೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಅದರಲ್ಲಿ ಕರೆಂಟ್ ಇಯರ್‌ದು ಸೇರಿಲ್ಲ.

ಶ್ರೀ ಜಿ. ರಾಜೂಗೌಡ,—ನನ್ನ ಹತ್ತಿರ ೮೯ ಮಾರ್ಚ್ ೩೧ರವರೆಗಿನ ಅಂಕಿ ಅಂಶಗಳು ಇವೆ. ಕರೆಂಟ್ ಇಯರ್‌ದು ಇಲ್ಲ. ಸ್ವಾಮಿ ತಮಗೆ ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದಲ್ಲಿರತಕ್ಕಂಥ... ಏನು ಸ್ವಾಮಿ, ಏನಾದರೂ ತಪ್ಪಿದ್ದರೆ ಹೇಳಿ, ನಾನು ತಿದ್ದಿಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಪಿ.ಜಿ ಆರ್. ಸಿಂಧ್ಯ —೭೫೦ ಕೋಟಿ ರೂಪಾಯಿ ನಷ್ಟ ಎಂದು ಹೇಳಿದ್ದೀರಲ್ಲ, ಅದು ಒಂದು ವರ್ಷದ್ದು, ೩ ವರ್ಷದ್ದು ಇಲ್ಲವೇ ೫ ವರ್ಷದ್ದಲ್ಲ. ಅದು ಅಕ್ಯುಮಲೇಟೆಡ್ ಲಾಸ್. ಇಂಡಸ್ಟ್ರಿಯಲ್ ಸೆಕ್ಟರ್. ಪಬ್ಲಿಕ್ ಸೆಕ್ಟರ್‌ನಲ್ಲಿ ಇಷ್ಟು ಅಕ್ಯುಮಲೇಟೆಡ್ ಲಾಸ್ ಆಗಿರಬೇಕಾದರೆ, ಜುಜುಬಿ ೩೬೦ ಕೋಟಿ ರೈತರ ಸಾಲ ಏತಕ್ಕೆ ನಿಲ್ಲಿಸಬಾರದು ಎಂಬುದನ್ನು ಹೇಳುತ್ತಿದ್ದಿರಿ. ಬಹಳ ಸಂತೋಷ, ನಾನು ತಮ್ಮನ್ನು ಅಭಿನಂದಿಸುತ್ತೇನೆ ಎಂದು ಹೇಳಿದೆ,

ಶ್ರೀ ಜಿ. ರಾಜುಗೌಡ,—ಈ ಕಲ್ಲು ಗಣಿಗಳ ಬಗ್ಗೆ ಹೇಳುವುದಾದರೆ ಹೆಚ್ಚಿನ ಕಲ್ಲು ಗಣಿಗಳು ಇರತಕ್ಕಂಥಾದ್ದು ಮೈಸೂರು ಜಿಲ್ಲೆಯ ಚಾಮರಾಜನಗರ, ಕೊಳ್ಳೆಗಾಲ ಮತ್ತು ಬೆಂಗಳೂರು ಜಿಲ್ಲೆಯ ಕನಕಪುರ ಹೀಗೆ ಎಲ್ಲಾ ಕಡೆ ಈ ಕಲ್ಲಿನ ಗಣಿಗಳು ಇವೆ ಈ ಬಗ್ಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಒಂದು ಕ್ಯೂಬಿಕ್ ಮೀಟರ್ ಕಲ್ಲನ್ನು ಹೊರಗೆ ತೆಗೆಯಬೇಕಾದರೆ ಸುಮಾರು ೧೦೦ ಕ್ಯೂಬಿಕ್ ಮೀಟರ್ ಕಲ್ಲನ್ನು ಹಾಳು ಮಾಡಿ ಒಂದು ಕ್ಯೂಬಿಕ್ ಮೀಟರ್ ಕಲ್ಲನ್ನು ಹೊರಗೆ ತೆಗೆಯುತ್ತಾರೆ. ತಾವು ಈಗ ಒಂದು ಘನ ಮೀಟರ್‌ಗೆ ಸುಮಾರು ೨೦೦ ರೂಪಾಯಿಗಳ ದರವನ್ನು ತೆಗೆದುಕೊಳ್ಳುತ್ತಿದ್ದೀರಿ. ಇದು ಬಹಳ ಕಡಿಮೆ ಆಯಿತು. ತಮಿಳುನಾಡಿನಲ್ಲಿ ಒಂದು ಕೆಲಸ ಮಾಡಿದ್ದಾರೆ ಬಹುಶಃ ಅದನ್ನು ನಾವು ಅನುಸರಿಸುವುದು ಒಳ್ಳೆಯದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ರೆವಿನ್ಯೂ ಜಮೀನುಗಳಲ್ಲಿರತಕ್ಕಂಥ ಕಲ್ಲು ಗಣಿಗಳನ್ನು ಪಬ್ಲಿಕ್ ಹರಾಜು ಮಾಡುವಂತಹ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ ಸುಮಾರು ೨೦–೩೦ ರೆವಿನ್ಯೂ ಜಮೀನುಗಳನ್ನು ಸೇರಿಸಿ ಒಂದು ಪ್ಲಾಟ್ ಮಾಡಿ ೧೦ ವರ್ಷಗಳ ಕಾಲಕ್ಕೆ ಹರಾಜು ಮಾಡುತ್ತಾರೆ. ಇದರಿಂದ ಅವರಿಗೆ ಕೋಟ್ಯಾಂತರ ರೂಪಾಯಿಗಳ ಹಣ ಬಂದಿದೆ ಇದರ ಜೊತೆಗೆ ಅವರು ತಯಾರು ಮಾಡತಕ್ಕಂಥ ಪ್ರತಿಯೊಂದು ಕ್ಯೂಬಿಕ್ ಮೀಟರ್ ಕಲ್ಲಿಗೆ ೮೦೦ ರೂಪಾಯಿಗಳ ರಾಯಲ್ಟಿಯನ್ನು ಫಿಕ್ಸ್ ಮಾಡಿದ್ದಾರೆ. ನಮ್ಮ ಸರ್ಕಾರ ಬಹುಶಃ ಅದನ್ನು ಮಾಡಿದರೆ ಇಲ್ಲಿ ಆಗುತ್ತಿರುವಂತಹ ಅವ್ಯವಹಾರಗಳನ್ನು ತಡೆಗಟ್ಟಬಹುದು ಇಲ್ಲಿ ಸರ್ಕಾರಕ್ಕೆ ಕೊಡಬೇಕಾದ ರಾಯಲ್ಟಿಯನ್ನು ಯಾರು ಸರಿಯಾಗಿ ಕೊಡುತ್ತಿಲ್ಲ. ಬಹಳ ಜನ ಮೋಸ ಮಾಡುತ್ತಿದ್ದಾರೆ. ಆದ್ದರಿಂದ ತಾವು ದಯಮಾಡಿ ನಮ್ಮ ರೆವಿನ್ಯೂ ಜಮೀನುಗಳಲ್ಲಿರತಕ್ಕಂಥ ಕಲ್ಲು ಗಣಿಗಳನ್ನು ಬಹಿರಂಗ ಹರಾಜು ಮುಖಾಂತರ ಕೊಡತಕ್ಕಂಥ ವ್ಯವಸ್ಥೆಯನ್ನು ಜಾರಿಗೆ ತರಬೇಕು ಮತ್ತು ಇದರ ಅವಧಿ ೫ ವರ್ಷಗಳಿಗೆ ಎಂದು ನಿಗದಿ ಮಾಡಬೇಕು. ತದನಂತರದ ಮೊತ್ತಕ್ಕೆ ೧೦ ರಷ್ಟು ಜಾಸ್ತಿ ಮಾಡತಕ್ಕಂಥಾದ್ದು. ಈ ಒಂದು ವ್ಯವಸ್ಥೆಯನ್ನು ತಮಿಳುನಾಡು ಸರ್ಕಾರ ಮಾಡಿರುವುದರಿಂದ ತಾವು ಸಹ ಈ ವ್ಯವಸ್ಥೆಯನ್ನು ಇಲ್ಲಿ ಜಾರಿ ಮಾಡಿದರೆ ನಮ್ಮ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿಗಳ ಉತ್ಪಾದನೆ ಇದರಿಂದ ಬರುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಬೇಕಾದರೆ ಫಾರೆಸ್ಟ್ ಲ್ಯಾಂಡ್‌ನಲ್ಲಿರತಕ್ಕಂಥ ಕಲ್ಲು ಗಣಿಗಳನ್ನು ಬಿಡಿ. ರವಿನ್ಯೂ ಜಮೀನಿನಲ್ಲಿರತಕ್ಕಂಥ ಕಲ್ಲು ಗಣಿಗಳನ್ನು ಹರಾಜು ಮೂಲಕ ಕೊಟ್ಟರೆ ಉತ್ಪಾದನೆ ಜಾಸ್ತಿಯಾಗುತ್ತದೆ. ಇವತ್ತಿನ ದಿವಸ ತಾವು ಕಲ್ಲು ಒಡೆಯಲು ಪರವಾನಿಗೆಯನ್ನು ಕೊಡುತ್ತೀರಿ. ಯಾರು ಈ ಪರವಾನಿಗೆಯನ್ನು ಕೊಡುತ್ತಿದ್ದಾರೆ ಎಂದರೆ ನಮ್ಮ ರಾಜ್ಯದ ಫಾರೆಸ್ಟ್ ಇಲಾಖೆಯವರು ಕೊಡುತ್ತಿದ್ದಾರೆ. ರೆವಿನ್ಯೂ ಇಲಾಖೆಯವರು ಕೊಡುತ್ತಿದ್ದಾರೆ. ಮೈನ್ಸ್ ಅಂಡ್ ಮಿನರಲ್ಸ್ ಇಲಾಖೆಯವರು ಕೊಡುತ್ತಿದ್ದಾರೆ. ಇದರ ಬದಲು ದಯಮಾಡಿ ತಾವು ಒಂದು ಏಜನ್ಸಿಯನ್ನು ಫಿಕ್ಸ್ ಮಾಡಿ. ಈ ಕೆಲಸವನ್ನು ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯವರು ಕರಾರುವಕ್ಕಾಗಿ ಮಾಡಬಲ್ಲರು ಒಂದು ಮೀಟರ್ ಕಲ್ಲು ಎಷ್ಟು ಬರುತ್ತದೆ ಎನ್ನುವ ಅಳತೆಯನ್ನು ಮಾಡುವುದಕ್ಕೆ ಬೇರೆ ಇಲಾಖೆಯವರ ಕೈಯಲ್ಲಿ ಆಗುವುದಿಲ್ಲ. ರೆವಿನ್ಯೂ ಇಲಾಖೆಯವರಿಗೆ ಬರುವುದಿಲ್ಲ. ಫಾರೆಸ್ಟ್ ಇಲಾಖೆಯವರಿಗೂ ಬರುವುದಿಲ್ಲ. ಈ ಕೆಲಸವನ್ನು ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯವರಿಗೆ ವಹಿಸಿದರೆ ಅವರು

ಖಂಡಿತವಾಗಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾರೆ. ನಮ್ಮ ಸರ್ಕಾರ ಒಂದು ಘನ ಮೀಟರ್ ಕಲ್ಲಿಗೆ ೮೦೦ ರೂಪಾಯಿಗಳ ರಾಯಲಿಟಿಯನ್ನು ಫಿಕ್ಸ್ ಮಾಡಿದರೆ ಕೋಟ್ಯಾಂತರ ರೂಪಾಯಿ ಹಣ ನಮಗೆ ಬರುತ್ತದೆ. ಇದರಿಂದ ನಮಗೆ ಒಳ್ಳೆಯ ಲಾಭ ಸಹ ಸಿಗುತ್ತದೆ. ಈಗ ಕಲ್ಲು ಗಣಿಗಳನ್ನು ಯಾರು ತೆಗೆದ ಕೊಂಡಿದ್ದಾರೆ ಅವರು ಮೂರು ತಿಂಗಳಲ್ಲಿ ದೊಡ್ಡ ದೊಡ್ಡ ಕಾರುಗಳಲ್ಲಿ, ವಾಹನಗಳಲ್ಲಿ ತಿರುಗಾಡು ವುದನ್ನು ನಾವೆಲ್ಲ ಕಣ್ಣಿನಿಂದ ನೋಡಿದ್ದೇವೆ. ಬಹುಶಃ ಬೆಟ್ಟದ ಮೇಲಿಂದ ಕಲ್ಲು ಸೀಳಿ ಕೆಳಗೆ ಹಾಕಿದಾಗ ಆ ಕಲ್ಲಿಗೆ ಸಿಕ್ಕಿ ಅನೇಕ ವೃಕ್ಷಗಳು ಹಾಳಾಗುತ್ತವೆ. ಮತ್ತು ಫಲವತ್ತಾದ ಮಣ್ಣು ಇಳಿಜಾರಾಗಿ ಹೋಗುತ್ತದೆ. ಅಲ್ಲಿ ನೂರಾರು ವರ್ಷಗಳಾದರೂ ಒಂದು ಸಸಿ ಆ ಜಾಗದಲ್ಲಿ ಬೆಳೆಯುವುದಕ್ಕೆ ಆಗುವುದಿಲ್ಲ. ಬಹಳ ನಷ್ಟವಾಗುತ್ತದೆ. ಆದ್ದರಿಂದ ಸರ್ಕಾರದವರು ಸರಿಯಾದ ರಾಯಲ್ಟಿಯನ್ನು ಅವರಿಂದ ಪಡೆಯಬೇಕು. ಈಗ ತಾವೇನು ೭೦.೬೭ ಕೋಟಿ ರೂಪಾಯಿಗಳ ಕೊರತೆ ಎಂದು ಹೇಳುತ್ತಿದ್ದೀರಿ, ಅದು ಈ ಬಾಬಿನಿಂದ ತುಂಬಿ ಸರ್ಕಾರಕ್ಕೆ ಇನ್ನೂ ೨೫೦ ಕೋಟಿ ರೂಪಾಯಿಗಳಷ್ಟು ಲಾಭ ಸಿಗುತ್ತದೆ. ದಯಮಾಡಿ ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಹಾಗು ಈ ಬಗ್ಗೆ ಅಧ್ಯಯನ ಮಾಡಿ ಸರ್ಕಾರಕ್ಕೆ ಜಾಸ್ತಿ ಉತ್ಪಾದನೆ ಮಾಡಿಕೊಳ್ಳಬೇಕು, ಈಗ ಇರತಕ್ಕಂಥ ಮೈನ್ಸ್ ಅಂಡ್ ಮಿನರಲ್ಸ್ ಡಿಪಾರ್ಟ್‌ಮೆಂಟ್ ಏನು ನಷ್ಟವನ್ನು ಅನುಭವಿಸುತ್ತಿದೆ, ಅದನ್ನು ಬಹುಶಃ ತಾವು ಈ ರೀತಿ ಮಾಡುವುದಾದರೆ ತಮಗೆ ಬೇಕಾದಷ್ಟು ಕೋಟಿ ರೂಪಾಯಿಗಳು ಲಾಭಗಳಿಸತಕ್ಕಂಥಾದ್ದಕ್ಕೆ ಸಾಧ್ಯವಿದೆ.

ಶ್ರೀ ಎಂ.ಪಿ. ವೆಂಕಟೇಶ್.—ಪಬ್ಲಿಕ್ ಹರಾಜು ಮಾಡಿದರೆ ಹೊರ ರಾಜ್ಯಗಳವರು ಬಂದು ತೆಗೆದುಕೊಳ್ಳುತ್ತಾರೆ. ನಮ್ಮ ರಾಜ್ಯದವರಿಗೆ ಆಗ ಸಿಗುವುದೇ ಇಲ್ಲ.

ಶ್ರೀ ಜಿ. ರಾಜುಗೌಡ.—ನಮ್ಮ ರಾಜ್ಯದವರಿಗೆ ಕೊಡಿ ತಮಿಳುನಾಡಿನಲ್ಲಿ ಏನು ವ್ಯವಸ್ಥೆ ಇದೆ ಅದನ್ನು ಫಾಲೋ ಮಾಡಿ ಎಂದು ನಾನು ಹೇಳುತ್ತಿರುವುದು. ಕೊನೆಯದಾಗಿ ನಾನು ಒಂದು ವಿಷಯ ವನ್ನು ಪ್ರಸ್ತಾಪ ಮಾಡಿ ನನ್ನ ಬಜೆಟ್ ಭಾಷಣವನ್ನು ಮುಗಿಸುತ್ತೇನೆ. ಸ್ವಾಮಿ ವಿದ್ಯುತ್‌ನ್ನು ಯಾವ ಟೈಮ್‌ನಲ್ಲಿ ನಿಲುಗಡೆ ಮಾಡುತ್ತಾರೆನ್ನುವುದೇ ನಮಗೆ ಗೊತ್ತಾಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಗೆ ವಿದ್ಯುತ್ ಬಳಸತಕ್ಕಂಥಾದ್ದರಲ್ಲಿ ಬಹಳ ನಿರಾಸೆಯಾಗಿದೆ. ಇದರಿಂದ ತಾವು ಏನು ಮಾಡಬೇಕೆಂದರೆ ತಾಲ್ಲೂಕಿನ ಅಧಿಕಾರಿಗಳನ್ನು ತಾಲ್ಲೂಕು ಪಂಚಾಯತ್ ಸಮಿತಿಗಳ ಮುಂದೆ ಕರೆಸಿದರೆ ಅಲ್ಲಿ ಎಲ್ಲಾ ಚುನಾಯಿತ ಸದಸ್ಯರು, ಜಿಲ್ಲಾ ಪರಿಷತ್ತು ಸದಸ್ಯರು ಮಂಡಲ ಪ್ರಧಾನರು ಎಲ್ಲರೂ ಇರುತ್ತಾರೆ. ಆ ತಾಲ್ಲೂಕಿಗೆ ಹೊಂದಾಣಿಕೆ ಆಗುವ ರೀತಿಯಲ್ಲಿ ಯಾವ ಟೈಮ್‌ನಲ್ಲಿ ಷಡ್ ಮಾಡಬೇಕು, ಎಷ್ಟು ಗಂಟೆಗಳ ಕಾಲ ವಿದ್ಯುತ್ ಷಡ್ ಮಾಡಬೇಕೆನ್ನುವುದನ್ನು ಅವರ ಜೊತೆ ಸಮಾಲೋಚನೆ ಮಾಡಿ ಈ ಕೆಲಸವನ್ನು ಉತ್ತಮಪಡಿಸಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇನ್ನು ಐ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ಬಡವರಿಗೆ ಸಾಲ ಸಿಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಹರಿಜನ ಮತ್ತು ಗಿರಿಜನರು ಮೊನ್ನೆಯಿಂದ ಬ್ಯಾಂಕ್‌ನ ಮುಂದೆ ಸತ್ಯಾಗ್ರಹ ಕೈಗೊಂಡಿದ್ದಾರೆ. ನನಗೆ ಮೊನ್ನೆ ಒಂದು ತಂತಿ ಸಂದೇಶವನ್ನು ಅವರು ಕಳುಹಿಸಿಕೊಟ್ಟು ಈ ಬಗ್ಗೆ ತಾವು ಪರಿಶೀಲನೆ ಮಾಡಿ ಎಂದು ಕೇಳಿಕೊಂಡಿದ್ದಾರೆ ಸ್ವಾಮಿ ಅವರಿಗೆ ಕೊಡಬೇಕಾದಂತಹ ೨೫ ಪರ್ಸೆಂಟ್ ಸಬ್ಸಿಡಿ ಹಣವನ್ನು ಕೊಟ್ಟಿದ್ದಾರೆ. ಸಬ್ಸಿಡಿ ಹಣ ಕೊಟ್ಟು ಒಂದು ವರ್ಷ ಆಗಿದೆ. ಸಬ್ಸಿಡಿ ಹಣ ಇಟ್ಟುಕೊಂಡು ಅವರಿಗೆ ನ್ಯಾಯವಾಗಿ ಸಿಗಬೇಕಾದ ಸಾಲ ಕೊಡದೆ ಬಹಳ ತೊಂದರೆ ಕೊಡುತ್ತಿದ್ದಾರೆ. ಪಿ.ಜಿ.ಪಾಳ್ಯದ ಕಾವೇರಿ ಗ್ರಾಮೀಣ ಬ್ಯಾಂಕ್, ಮತ್ತು ಮಂಡಳಿ ಕಾವೇರಿ ಗ್ರಾಮೀಣ ಬ್ಯಾಂಕ್‌ಗಳ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾರೆ, ಈ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಸೂಕ್ತ ಆದೇಶವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಡಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಹೆಚ್. ಕೌಜಲಗಿ (ಬೈಲಹೊಂಗಲ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಯವರು ೧೯೯೦–೯೧ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಏನು ಮಂಡಿಸಿದ್ದಾರೆ, ಇದನ್ನು ನಾನು ಖಂಡಿಸುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಗಳು ಕೇವಲ ಹೆಚ್ಚಿನ ತೆರಿಗೆಯನ್ನು ವಿಧಿಸಿದ್ದಾರೆಯೇ ಹೊರತು ಯಾವುದೇ ರಚನಾತ್ಮಕವಾದ ಕಾರ್ಯಕ್ರಮವನ್ನು ತಮ್ಮ ಆಯವ್ಯಯ ಪಟ್ಟಿಯಲ್ಲಿ ಹಾಕಿಕೊಂಡಿಲ್ಲವೆಂದು ತಮ್ಮ ಮುಖಾಂತರ ಹೇಳಬಯಸುತ್ತೇನೆ. ಈಗಾಗಲೇ ನಮ್ಮ ಪಕ್ಷದ ನಾಯಕರು ವಿವರವಾಗಿ ಹೇಳಿದ್ದಾರೆ. ನಾನು ಅದರ ಬಗ್ಗೆ ಹೋಗದೆ ಕೇವಲ ನನ್ನ ಜಿಲ್ಲೆಯ ಅಥವಾ ಉತ್ತರ ಕರ್ನಾಟಕಕ್ಕೆ ಸೀಮಿತವಾಗಿ ಮಾತನಾಡಬೇಕೆಂದು ನಾನು ತಮ್ಮ ಮುಂದೆ ನಿಂತಿದ್ದೇನೆ. ಇವತ್ತಿನ ದಿವಸ ನಮಗೆ ಮಲಪ್ರಭಾ, ಘಟಪ್ರಭಾ ಯೋಜನೆಗಳನ್ನು ಕೈಗೊಂಡ ಮೇಲೆ ಉತ್ತರ ಕರ್ನಾಟಕ ಜನರಿಗೆ ಒಂದು ರೀತಿಯ ಸಂತೋಷವಾಯಿತು. ಆದರೆ ನದಿಯಲ್ಲಿ ನೀರು ಇಲ್ಲದ ಕಾರಣ ಈ ಯೋಜನೆಗಳಿಂದ

ಪ್ರಯೋಜನವಾಗಿಲ್ಲ. ಈ ಯೋಜನೆಗಳ ಕೆಲಸಕ್ಕೆ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ಕೇವಲ ೧೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ ಈ ೧೦ ಕೋಟಿ ರೂಪಾಯಿಗಳನ್ನು ಇಡುವುದರಿಂದ ಈ ಯೋಜನೆಯು ೮ನೇ ಪಂಚವಾರ್ಷಿಕ ಯೋಜನೆಯಲ್ಲೂ ಸಹಿತ ಮುಗಿಯುವುದಿಲ್ಲವೆಂದು ನಾನು ತಮ್ಮ ಮುಂದೆ ಹೇಳಬಹುದು. ಈ ಯೋಜನೆಯನ್ನು ೮ನೇ ಯೋಜನೆ ಮುಗಿಯುವುದರೊಳಗೆ ಮುಗಿಸುವುದಕ್ಕೆ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಆರ್ಥಿಕ ಮಂತ್ರಿಗಳಲ್ಲಿ ಕೇಳುತ್ತೇನೆ ಇನ್ನು ಎರಡನೆಯದಾಗಿ, ಉತ್ತರ ಕರ್ನಾಟಕದ ಎಲ್ಲಾ ಜನರ ಬೇಡಿಕೆ ಎಂದರೆ, ಮಾದಾಯಿ ನದಿಯನ್ನು ಮಲಪ್ರಭಾ ನದಿಗೆ ಕೂಡಿಸಬೇಕೆಂಬುದು. ಇದರ ಬಗ್ಗೆ ಈಗಾಗಲೇ ಸರ್ವೆ ಆಗಿದೆ ಆದರೆ ಕೇಂದ್ರ ಸರ್ಕಾರಕ್ಕೆ ಪ್ಲ್ಯಾನ್ ಎಸ್ಟಿಮೇಟ್ ಇನ್ನೂ ಕಳುಹಿಸಿಕೊಟ್ಟಿಲ್ಲ. ಮಾದಾಯಿ ಯೋಜನೆಯನ್ನು ಆದಷ್ಟು ಬೇಗ ಮತ್ತು ಶೀಘ್ರವಾಗಿ ಕೈಗೊಳ್ಳಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಮಾದಾಯಿ ನದಿಯ ಯೋಜನೆಯಿಂದ ಬೆಳಗಾಂ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳ ಜನರುಗಳಿಗೆ ಬಹಳ ಅನುಕೂಲವಾಗುತ್ತದೆ. ಆಮೇಲೆ ಈ ಮಲಪ್ರಭಾ ಯೋಜನೆಯ ಆಯುಕಟ್ಟಿನ ಪ್ರದೇಶಗಳ ರೈತರುಗಳಿಂದ ಇರಿಗೇಷನ್ ಟ್ಯಾಕ್ಸ್‌ಗಳನ್ನು ವಸೂಲಿ ಮಾಡುತ್ತಿದ್ದಾರೆ ಇರಿಗೇಷನ್ ಟ್ಯಾಕ್ಸನ್ನು ವಸೂಲಿ ಮಾಡಬಾರದೆಂದು ನಾನು ಹೇಳುವುದಿಲ್ಲ. ನಿಜವಾಗಿ ಯಾರಿಗೆ ನೀರಿನಿಂದ ಉಪಯೋಗವಾಗಿದೆಯೋ ಅಂಥ ರೈತರುಗಳಿಂದ ಟ್ಯಾಕ್ಸ್ ವಸೂಲಿ ಮಾಡಲಿ. ಒಂದು ಎಕರೆ ಮತ್ತು ಎರಡು ಎಕರೆ ಜಮೀನು ಇರುವಂಥ ಸಣ್ಣಪುಟ್ಟ ರೈತರುಗಳಿಂದ, ಅವರು ನೀರು ಉಪಯೋಗಿಸದೇ ಇದ್ದರೂ ಟ್ಯಾಕ್ಸ್‌ಗಳನ್ನು ವಸೂಲಿ ಮಾಡುತ್ತಿದ್ದಾರೆ. ಯಾರು ಟ್ಯಾಕ್ಸ್ ಕೊಡುವುದಿಲ್ಲವೋ ಅಂಥ ರೈತರುಗಳ ಜಮೀನುಗಳ ಹತ್ತಿರ ಇದು ಸರ್ಕಾರದ ಜಮೀನು ಎಂದು ಬೋರ್ಡ್ ಹಾಕುತ್ತಾರೆ. ಇದರಿಂದ ರೈತರುಗಳಿಗೆ ಬಹಳ ತೊಂದರೆಯಾಗಲಿಕ್ಕೆ ಹತ್ತಿದೆ. ಆದ್ದರಿಂದ ರೈತರುಗಳ ಜಮೀನಿನ ಮೇಲೆ ಕರ್ನಾಟಕ ಸರ್ಕಾರ ಎಂದು ಬರೆಯುವುದನ್ನು ಬಂದ್ ಮಾಡಿಸಬೇಕೆಂದು ಇವತ್ತಿನ ದಿವಸ ನಾನು ಮಾನ್ಯ ಆರ್ಥಿಕ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಎಕ್ಸೈಸ್ ಡಿಪಾರ್ಟ್‌ಮೆಂಟಿಗೆ ದೊಡ್ಡ ದೊಡ್ಡ ಕಂಟ್ರಾಕ್ಟ್‌ದಾರರುಗಳಿಂದ ಲಕ್ಷಾಂತರ ರೂಪಾಯಿಗಳು ಬಾಕಿ ಬರಬೇಕಾಗಿದ್ದರೂ ಸಹ ಅಂಥವರುಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳದೆ ಒಬ್ಬ ಬಡ ರೈತ ನಾಲ್ಕು ಸಾವಿರ, ೫ ಸಾವಿರ ೬ ಸಾವಿರ ಹಣ ಕೊಡದೇ ಇದ್ದರೆ ಅವನಿಗೆ ಬಹಳ ತ್ರಾಸ ಕೊಡಲಾಗುತ್ತಿದೆ. ಈ ರೀತಿ ರೈತರುಗಳಿಗೆ ತ್ರಾಸ ಕೊಡಬಾರದೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಆಮೇಲೆ ಆಯವ್ಯಯ ಪಟ್ಟಿಯಲ್ಲಿ ರಸ್ತೆ ರಿಪೇರಿ ಸಲುವಾಗಿ ಹಣವನ್ನು ಒದಗಿಸಲಾಗಿದೆಯೆಂದು ಹೇಳಿದ್ದೀರಿ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಒಟ್ಟು ೭ ಸಕ್ಕರೆ ಕಾರ್ಖಾನೆಗಳು ಇವೆ. ಇಷ್ಟೊಂದು ಸಕ್ಕರೆ ಕಾರ್ಖಾನೆಗಳು ಇದ್ದರೂ ಸಹ ಅಲ್ಲಿ ರಸ್ತೆಗಳು ಸರಿಯಾಗಿಲ್ಲ. ಎಲ್ಲಾ ರಸ್ತೆಗಳು ಕೆಟ್ಟು ಹೋಗಿವೆ. ಯಾವುದೇ ರಸ್ತೆಯನ್ನು ರಿಪೇರಿ ಸಹಿತ ಮಾಡಿಲ್ಲವೆಂದು ಹೇಳಬಹುದು. ಈ ಸಾರಿಯ ಯೋಜನ ಆಯವ್ಯಯದಲ್ಲಿ ನಮ್ಮ ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಯಾವುದೇ ಒಂದು ಹೊಸ ಕೆಲಸ ಸೇರಿಲ್ಲ ಎಂದು ಬಹಳ ವಿಷಾದದಿಂದ ನಾನು ಹೇಳಬಯಸುತ್ತೇನೆ. ಯಾವುದೇ ಒಂದು ಹೊಸ ಕೆಲಸವನ್ನು ಅದರಲ್ಲಿ ಸೇರಿಸಿದ್ದರೂ ನಮಗೆ ತುಂಬಾ ಸಂತೋಷವಾಗುತ್ತಿತ್ತು. ಕೇವಲ ಓನ್‌ಗೋಯಿಂಗ್ ವರ್ಕ್ಸನ್ನು ಮಾತ್ರ ಸೇರಿಸಿದ್ದಾರೆ, ಸ್ಪೆಷಲ್ ಗ್ರಾಂಟ್‌ನಲ್ಲಿ ಒಂದು ಕಿ.ಮೀ.ಗೆ ೧೫೦೦ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರಿಂದಲೇ ಆ ಕೆಲಸ ಕೂಡ ಆಗುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿ ಬೆಳಗಾಂ—ಬಾಗಲಕೋಟೆ, ಗೋಕಾಕ್—ಗೋವಾ ಸ್ಟೇಟ್ ಹೈವೇಯನ್ನು ಬಿಟ್ಟರೆ ಬೇರೆ ಯಾವುದೇ ರಾಜ್ಯ ರಸ್ತೆಗಳು ಇಲ್ಲ. ಅದೇ ಹಳೇ ಮೈಸೂರಿನ ಕತೆಯನ್ನು ನೋಡಿದರೆ ಅಲ್ಲಿ ಬಹಳಷ್ಟು ರಸ್ತೆಯ ಸೌಲಭ್ಯಗಳನ್ನು ಕಲ್ಪಿಸಿಕೊಂಡಿದ್ದಾರೆ. ದೇವೇಗೌಡರ ಆದಿಯಾಗಿ ಬಹಳಷ್ಟು ಜನರು ಪಿ.ಡಬ್ಲ್ಯು.ಡಿ. ಮಂತ್ರಿಗಳು ಹಳೆಯ ಮೈಸೂರು ಭಾಗದವರಾಗಿದ್ದುದರಿಂದ ಅಲ್ಲಿ ಒಂದು ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಯಿತು. ಎಂದು ನಾವು ಭಾವಿಸಬೇಕಾಗುತ್ತದೆ, ಪಿ.ಡಬ್ಲ್ಯು.ಡಿ. ಖಾತೆಯು ಮೊದಲಿಂದಲೂ ಓಲ್ಡ್ ಮೈಸೂರು ಭಾಗದವರ ಕೈಯಲ್ಲಿಯೇ ಉಳಿದುಕೊಂಡು ಬಂದಿದೆ. ಆ ಕಾರಣದಿಂದ ಆ ಭಾಗವು ಈ ವಿಚಾರದಲ್ಲಿ ಪ್ರಗತಿಯನ್ನು ಉಂಟು ಮಾಡಿಕೊಂಡಿತು. ಹೀಗಾಗಿ ನಮ್ಮ ಉತ್ತರ ಕರ್ನಾಟಕ ಪ್ರದೇಶವು ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿತು. ಹಳೆಯ ಮೈಸೂರು ಭಾಗದಲ್ಲಿನ ರಸ್ತೆಗಳೆಲ್ಲವೂ ಉತ್ತಮ ಸ್ಥಿತಿಯಲ್ಲಿವೆ. ಆದರೆ ನಮ್ಮ ಭಾಗದ ರಸ್ತೆಗಳೆಲ್ಲವೂ ಕನಿಷ್ಟ ಸ್ಥಿತಿಯಲ್ಲಿವೆ. ಕೆಲವೊಂದು ರಸ್ತೆಗಳು ಕಾರ್ಪೆಟ್ ಆಗಿಲ್ಲ, ರೀಕಾರ್ಪೆಟ್ ಆಗಿಲ್ಲ. ಇಂಥ ರಸ್ತೆಗಳ ಪರಿಸ್ಥಿತಿಯನ್ನು ಮಾನ್ಯ ಮಂತ್ರಿಯವರು ಬಂದು ನೋಡಿ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ಭಾಗದಲ್ಲಿ ಯಾರಾದರೂ ಮಂತ್ರಿಗಳು ಬರುವುದಿದ್ದಲ್ಲಿ ಮಾತ್ರ ನಾಲ್ಕು ಬುಟ್ಟಿ ಮಣ್ಣನ್ನು ತಂದು ರಸ್ತೆಗೆ ಹಾಕಿಬಿಡುತ್ತಾರೆ. ಅಲ್ಲಿಗೇ ಮುಗಿಯಿತು ರಿಪೇರಿ ಕೆಲಸ. ಆದುದರಿಂದ ನಮ್ಮ ಬೆಳಗಾಂ ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ರಸ್ತೆಗಳನ್ನು

ಸ್ಟೇಟ್ ಹೈವೇ ದರ್ಜೆಗೆ ಏರಿಸಬೇಕು. ಅದಕ್ಕಾಗಿ ಸ್ಪೆಷಲ್ ಗ್ರ್ಯಾಂಟನ್ನು ಕೊಡಬೇಕು. ಬೈಲಹೊಂಗಲ-ಮುನವಳ್ಳಿ, ಬೈಲಹೊಂಗಲ-ಸೌಂದತ್ತಿ, ಈ ಎರಡು ರಸ್ತೆಗಳನ್ನು ೧೯೭೦ನೇ ಇಸವಿಯಲ್ಲಿ ಮಲಪ್ರಭಾ ಯೋಜನೆಯಲ್ಲಿ ಆಳವಡಿಸಿಕೊಂಡಿದ್ದವಾಗಿದ್ದುವು. ಆದರೆ ಅವುಗಳ ಸ್ಥಿತಿಯು ಇಂದಿಗೂ ಹೇಗಿವೆ ಎಂದು ನೋಡಿದರೆ ತಿಳಿಯುತ್ತದೆ. ಸೌಂದತ್ತಿ ಎಲ್ಲಮ್ಮದೇವಿಯ ದೇವಾಲಯಕ್ಕೆ ಹೋಗಬೇಕಾದರೆ ಚಕ್ಕಡಿಯವರು ರಸ್ತೆಗಳಲ್ಲಿ ಒಂದೊಂದು ಗಂಟೆ ಕಾಲ ನಿಂತುಕೊಂಡು ಹೋಗಬೇಕಾದ ಪರಿಸ್ಥಿತಿಯು ಇದೆ, ಅಂದಿನಿಂದ ಇಂದಿನವರೆಗೆ ಯಾವುದೇ ಸರಕಾರದವರು ಈ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಬೇಸರದಿಂದ ಹೇಳಬಯಸುತ್ತೇನೆ. ಆದುದರಿಂದ ಸ್ಪೆಷಲ್‌ಗ್ರ್ಯಾಂಟನ್ನು ನಮ್ಮ ಜಿಲ್ಲೆಗೆ ಕೊಡಬೇಕು. ಜಿಲ್ಲೆಯ ಸಹಕಾರಿ ಕಾರ್ಖಾನೆಗಳಿಂದ ಸರಕಾರಕ್ಕೆ ಸಾಕಷ್ಟು ವರಮಾನ ಬರುತ್ತಾ ಇದ್ದರೂ ಸಹ ನಮ್ಮ ಜಿಲ್ಲೆಗೆ ರಸ್ತೆಗಳಿಗಾಗಿ ಯಾವುದೇ ಸಹಾಯವನ್ನು ಸೂಕ್ತ ರೀತಿಯಲ್ಲಿ ಸರಕಾರದವರು ಮಾಡುತ್ತಿಲ್ಲ.

ಇನ್ನು ಇಂಡಸ್ಟ್ರೀಸ್ ವಿಚಾರದಲ್ಲಿ ಹೇಳುವುದಾದರೆ, ನಮ್ಮದು ಬಹಳ ಹಿಂದುಳಿದ ಪ್ರದೇಶವಾಗಿದೆ. ಬೆಳಗಾಂ ಬಹಳ ಒಳ್ಳೆಯ ಪ್ರಗತಿ ಹೊಂದಿದ ಜಿಲ್ಲೆ ಎಂದು ಬಹಳಷ್ಟು ಜನರು ಭಾವಿಸಿಕೊಂಡಿದ್ದಾರೆ. ಆದರೆ ಅದು ತಪ್ಪು ಕಲ್ಪನೆ ಎಂದು ಹೇಳಬೇಕಾಗುತ್ತದೆ. ಬೆಳಗಾಂ ಜಿಲ್ಲೆಯವರು ತುಂಬ ಒಳ್ಳೆಯವರು ಮತ್ತು ಸುಶಿಕ್ಷಿತರು ಆಗಿದ್ದಾರೆ. ಆದರೆ ಜಿಲ್ಲೆಯಲ್ಲಿ ಕೈಗಾರಿಕೆಯು ಸಾಕಷ್ಟು ಪ್ರಮಾಣದಲ್ಲಿ ಬೆಳೆದಿಲ್ಲ. ಇವೊತ್ತು ಬೆಳಗಾಂ ಕರ್ನಾಟಕದಲ್ಲಿಯೇ ಉಳಿಯಬೇಕಾದರೆ ಅಲ್ಲಿ ಸಾಕಷ್ಟು ಇಂಡಸ್ಟ್ರೀಗಳು ಬರಬೇಕಾಗಿರುವುದು ಅತ್ಯಂತ ಅವಶ್ಯಕವಾಗಿದೆ. ಮಾನ್ಯ ಮಂತ್ರಿಯವರು ಪಬ್ಲಿಕ್ ಸೆಕ್ಟರ್‌ನಲ್ಲಿ ಇಂಡಸ್ಟ್ರೀಗಳನ್ನು ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ. ಇದರಿಂದಾಗಿ ಸಾಕಷ್ಟು ಜನರಿಗೆ ಉದ್ಯೋಗಾವಕಾಶವೂ ಲಭಿಸಿದಂತಾಗುತ್ತದೆ. ಬೆಳಗಾಂನಲ್ಲಿ ಸಾಕಷ್ಟು ಇಂಡಸ್ಟ್ರೀಸ್ ತೆರೆಯಬೇಕೆಂದು ಮಾನ್ಯ ದಿವಂಗತ ದೇವರಾಜ್ ಅರಸ್‌ರವರು ಬಹಳಷ್ಟು ಪ್ರಯತ್ನ ಪಟ್ಟರು. ಅವರು ಬೆಳಗಾಂನಲ್ಲಿ ಕನ್ನಡಿಗರು ಹೆಚ್ಚಬೇಕು, ಅವರ ಅಭಿವೃದ್ಧಿಯಾಗಬೇಕು, ಅವರು ಬೆಳೆಯಬೇಕೆಂದು ತುಂಬಾ ಶ್ರಮವಹಿಸಿದರು. ಬೆಳಗಾಂ ಯಾವಾಗಲೂ ಕನ್ನಡಿಗರದ್ದಾಗಿರಬೇಕೆಂದು ಶ್ರಮಪಟ್ಟರು, ಅವರ ಕಾಲದಲ್ಲಿ ವಿಭಾಗೀಯ ಕಚೇರಿಗಳನ್ನು ಬೆಳಗಾಂಗೆ ವರ್ಗಾಯಿಸಬೇಕೆಂದು ಮಾಡಿದ್ದರು. ಆದರೆ ಆ ದಿಸೆಯಲ್ಲಿ ಇತ್ತೀಚಿನ ಸರಕಾರಗಳು ಯಾವುದೇ ಪ್ರಯತ್ನಗಳನ್ನು ಮಾಡಿಲ್ಲ ಎಂದು ಹೇಳಬಹುದು. ಬೆಳಗಾಂನಲ್ಲಿ ಕನ್ನಡಿಗರ ಸಂಖ್ಯೆ ಜಾಸ್ತಿಯಾಗಲು ಹೌಸಿಂಗ್ ಸ್ಕೀಮ್ ಅಡಿಯಲ್ಲಿ ಹೆಚ್ಚು ಮನೆಗಳನ್ನು ಮಾಡಿ ಹಂಚಬೇಕಾಗಿದೆ. ಅದರ ಸಲುವಾಗಿ ಕಲ್ಬುರ್ಗಿಯಲ್ಲಿ ೨೦೦ ಎಕರೆ ಜಮೀನು ತೆಗೆದಿಟ್ಟು ಅದರಲ್ಲಿ ಮನೆಗಳನ್ನು ಕಟ್ಟಬೇಕೆಂದು ಹಿಂದಿನ ಸರ್ಕಾರದವರು ನಿರ್ಣಯ ತೆಗೆದುಕೊಂಡಿದ್ದರು. ಅಲ್ಲಿ ೫೦೦೦ ಮನೆಗಳನ್ನು ಕಟ್ಟಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಅದರಿಂದಾಗಿ ಬಹಳ ಜನರು ಕನ್ನಡಿಗರು ಅಲ್ಲಿ ವಾಸಮಾಡಲು ಅನುಕೂಲವಾಗುತ್ತಿತ್ತು. ಇನ್ನಾದರೂ ಆ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ಇವೊತ್ತು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹೆಚ್ಚು ಲಾಭ ಗಳಿಸುವ ಡಿವಿಜನ್ ಇದ್ದಲ್ಲಿ ಅದು ಬೆಳಗಾಂ, ಬಿಜಾಪುರ, ಸಿರ್ಸಿ, ಹುಬ್ಬಳ್ಳಿಗಳಾಗಿವೆ. ಆದರೆ ಆ ಡಿವಿಜನ್‌ಗಳಲ್ಲಿ ಸಾರಿಗೆ ಸೌಲಭ್ಯದ ಕಾರ್ಯಕ್ರಮಗಳನ್ನು ಹೆಚ್ಚಾಗಿ ತೆಗೆದುಕೊಂಡು ಸಹಕಾರ ಕೊಡುವಂಥ ಕಾರ್ಯಕ್ರಮ ನಡೆದಿಲ್ಲ. ಬೈಲಹೊಂಗಲ, ಮುರುಗೋಡದಲ್ಲಿ ಬಸ್‌ಸ್ಟ್ಯಾಂಡನ್ನು ಕಟ್ಟಬೇಕೆಂದು ಆಲೋಚನೆ ಮಾಡಿದ ಮೇಲೆ ಆ ಕೆಲಸ ೨೦ ವರ್ಷಗಳಿಂದ ಹಾಗೆಯೇ ಉಳಿದುಕೊಂಡು ಬಂದಿದೆ.

೫-೪೫ ಪಿ.ಎಂ.

ಆಗ ಮುಖ್ಯ ಮಂತ್ರಿಗಳಾಗಿದ್ದ ಹೆಗಡೆಯವರು ಈ ಪ್ರಕಾರ ಬರೆದಿದ್ದರು. ''ಮಾನ್ಯ ಸಾರಿಗೆ ಸಚಿವರು ಇದನ್ನು ಗಮನಿಸಲಿ'' ಎಂದು. ಎಷ್ಟು ದಿವಸ ಬೇಕು ಸ್ವಾಮಿ ಇದನ್ನು ಗಮನಿಸುವುದಕ್ಕೆ. ಇವತ್ತಿಗೂ ಆ ಕೆಲಸ ಪ್ರಾರಂಭವಾಗಿಲ್ಲ, ನಮ್ಮ ವಿಭಾಗದ ಬಸ್‌ಗಳು ಪ್ರಾಫಿಟ್ ಮಾಡಿಕೊಡುತ್ತಿವೆ, ಆದರೆ ಓಲ್ಡ್ ಮೈಸೂರಿನ ಡಿಪೋಗಳು ರೊಕ್ಕಾನೆಲ್ಲ ತಿಂದುಹಾಕುತ್ತಿವೆ. ಆದರೂ ಕೆ.ಎಸ್.ಆರ್.ಟಿ.ಸಿ ನಮ್ಮ ಕಡೆಗೆ ಸಹಾಯ ಮಾಡುತ್ತಿಲ್ಲ. ಹೊಸ ಬಸ್‌ಗಳನ್ನು ನಮ್ಮ ಕಡೆ ಓಡಿಸುತ್ತಿಲ್ಲ ಎಲ್ಲಾ ಧೂಳು ತುಂಬಿಕೊಂಡಿರುವ ಹಳೇ ಬಸ್‌ಗಳು ನಮ್ಮ ಕಡೆ ಹಾಕಿದ್ದಾರೆ. ಬಸ್‌ಸ್ಟ್ಯಾಂಡಿಗೆ ಹೋಗೋದು ಎಂದರೆ ಹಳ್ಳಿಯಿಂದ ಒಂದು ಸಿನಿಮಾ ಥಿಯೇಟರಿಗೆ ಹೋಗುವಂಥಾ ಅನುಭವವಾಗುತ್ತದೆ. ನಾವು ಕೇಳುವುದು ಕೆ.ಎಸ್.ಆರ್ ಟಿ.ಸಿಯ ಯಾವ ಡಿಪೋಗಳು ಪ್ರಾಫಿಟ್ ಮಾಡುತ್ತಿವೆಯೋ ಅಲ್ಲಿಗೆ ಹೆಚ್ಚು ಬಸ್ ಕೊಡಲಿ ಹೆಚ್ಚು ಅನುಕೂಲ ಮಾಡಿಕೊಡಲಿ ಎಂದು ;

ಆ ಮೇಲೆ ಪೋಲೀಸ್ ಹೌಸಿಂಗ್ ಕಾಲೋನಿ ಎಂದು ಇದೆ. ನನಗನಿಸಿದ ಹಾಗೆ ಇಂಥಾದೆಲ್ಲ ಓಲ್ಡ್ ಮೈಸೂರ್ ಏರಿಯಾಕ್ಕೆ ಸೀಮಿತವಾಗಿದೆ. ಇವತ್ತು ಕಾರ್ಪೊರೇಷನ್ ಎಂದು ಬಜೆಟ್‌ನಲ್ಲಿ ನೋಡಿದಾಗ ಇಂಥಾದ್ಯಾವುದೂ ನಮ್ಮ ಕಡೆ ಬಂದಿಲ್ಲವಲ್ಲ ಎಂದು ಕೊಂಡು ಪಕ್ಕದಲ್ಲಿ ವಿಚಾರಿಸಿದಾಗ ಆ ಸಂಸ್ಥೆಗೆ ಒಬ್ಬ ಐ ಜಿ. ಗ್ರೇಡ್ ಆಫೀಸರ್ ಇದ್ದಾರೆಂದು ತಿಳಿಯಿತು. ಇವತ್ತಿನವರೆಗೂ ನಮ್ಮ ಕಡೆ ಇಂಥಾದ್ದು ಬಂದೇ ಇಲ್ಲ ಈ ಪೋಲೀಸ್ ಹೌಸಿಂಗ್ ಕಾರ್ಪೊರೇಷನ್‌ಗಳನ್ನು ಬೆಳಗಾವಿ ಹುಬ್ಬಳ್ಳಿ ಹೀಗೆ ನಮ್ಮ ಪ್ರಾಂತ್ಯದ ಬೇರೆ ಬೇರೆ ಕಡೆ ಸ್ಥಾಪನೆ ಮಾಡಬೇಕು.

ಇನ್ನು ಬೈಲಹೊಂಗಲದಲ್ಲಿ ೧೯೦೬ರಲ್ಲಿ ಕಟ್ಟಿದ ಹಳೇ ಕಟ್ಟಡದಲ್ಲಿ ಇವತ್ತಿಗೂ ಪೋಲೀಸ್ ಸ್ಟೇಷನ್ ನಡೆದಿದೆ. ನಮ್ಮ ಬೈಲಹೊಂಗಲ ಯಾವುದಕ್ಕೆ ಪ್ರಸಿದ್ಧಿ ಎಂದು ನಿಮಗೆಲ್ಲ ಗೊತ್ತಿರಬಹುದು, ಅದು ಕ್ರಿಮಿನಲ್ಸ್‌ಗೆ ಪ್ರಸಿದ್ಧಿ. ಆದ್ದರಿಂದ ಅಲ್ಲಿ ಮೊದಲು ಹೊಸ ಕಟ್ಟಡ ಸ್ಥಾಪಿಸಬೇಕು.

ಅನಂತರ ಟ್ಯಾಕ್ಸ್ ವಿಚಾರ, ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಇರುವಷ್ಟು ಟ್ಯಾಕ್ಸ್ ಬೇರೆ ರಾಜ್ಯಗಳಲಿಲ್ಲವೆಂದು ಹೇಳಬಹುದು. ನಮ್ಮ ರಾಜ್ಯದ ಟ್ಯಾಕ್ಸ್ ಹೆಚ್ಚಾಗಿದ್ದರ ಪರಿಣಾಮವಾಗಿ ನಮ್ಮ ವ್ಯಾಪಾರ ಮುರಿಯುತ್ತದೆ. ಅದೇ ನಮ್ಮ ಸಮೀಪವಿರುವ ಮಹಾರಾಷ್ಟ್ರ ಸ್ಟೇಟ್‌ಗೆ ಹೋಲಿಸಿದರೆ ನಮ್ಮ ಟ್ಯಾಕ್ಸ್ ತುಂಬಾ ಜಾಸ್ತಿ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ನಮ್ಮ ಫೈನಾನ್ಸ್ ಮಿನಿಸ್ಟ್ರು ಇಡೀ ದಕ್ಷಿಣ ರಾಜ್ಯಗಳಲ್ಲೆಲ್ಲ ಒಂದೇ ಪ್ರಮಾಣದ ಟ್ಯಾಕ್ಸ್ ಇರುವಂತೆ ಮಾಡಲು ಆಯಾ ರಾಜ್ಯದ ಫೈನಾನ್ಸ್ ಮಿನಿಸ್ಟರ್‌ಗಳ ಒಂದು ಸಭೆ ಕರೆಯುವುದಾಗಿ ಹೇಳಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿದೆ. ಇದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಈ ದಿಸೆಯಲ್ಲಿ ಮುಂದೆ ಹೋಗಿ ಇಡೀ ದಕ್ಷಿಣ ರಾಜ್ಯಗಳಲ್ಲಿ ಒಂದೇ ನಮೂನೆಯ ಟ್ಯಾಕ್ಸ್ ಇರುವಂತೆ ಮಾಡಿದರೆ ಆ ಕೀರ್ತಿ ತಮಗೆ ಬರುತ್ತದೆ. ಇದನ್ನು ಪರ್‌ಸ್ಯೂ ಮಾಡಿ. ಟ್ಯಾಕ್ಸ್ ಡಿಸ್‌ಪ್ಯಾರಿಟಿ ಬಗ್ಗೆ ಹೇಳುವುದಾದರೆ ಬೆಲ್ಲದ ಮೇಲೆ ನಮ್ಮಲ್ಲಿ ೧೦೦ ಪರ್ಸೆಂಟ್ ಮಾರಾಟ ತೆರಿಗೆ, ಒಂದು ಪರ್ಸೆಂಟ್ ಸೆಸ್ಸು, ಆದರೆ ಮಹಾರಾಷ್ಟ್ರದಲ್ಲಿ ಇದಕ್ಕೆ ತೆರಿಗೆ ಇಲ್ಲವೇ ಇಲ್ಲ. ಚಹಾ ಪುಡಿಗೆ ಮಹಾರಾಷ್ಟ್ರದಲ್ಲಿ ೬ ಪರ್ಸೆಂಟ್, ಕರ್ನಾಟಕದಲ್ಲಿ ೧೩ ಪರ್ಸೆಂಟ್, ಅಡಿಕೆ, ಕರ್ನಾಟಕದಲ್ಲ ೬ ಪರ್ಸೆಂಟ್, ಮಾರಾಟ ತೆರಿಗೆ ೧೧ ಪರ್ಸೆಂಟ್ ಇದೆ, ಮಹಾರಾಷ್ಟ್ರದಲ್ಲಿ ೩.೫ ಪರ್ಸೆಂಟ್. ಔಷಧ ಕರ್ನಾಟಕದಲ್ಲಿ ೧೪ ಪರ್ಸೆಂಟ್, ಮಹಾರಾಷ್ಟ್ರದಲ್ಲಿ ೪ ಪರ್ಸೆಂಟ್, ಸಿಮೆಂಟ್ ಕರ್ನಾಟಕದಲ್ಲಿ ೧೮ ಪರ್ಸೆಂಟ್, ಮಹಾರಾಷ್ಟ್ರದಲ್ಲಿ ೧೦ ಪರ್ಸೆಂಟ್. ಡೀಸಲ್ಡ ೧೦ ಪರ್ಸೆಂಟ್, ಗೋವಾದಲ್ಲಿ ಟ್ಯಾಕ್ಸೇ ಇಲ್ಲ. ಕೃಷಿ ಇಂಜಿನ್ ೧೩ ಪರ್ಸೆಂಟ್ ನಮ್ಮಲ್ಲಿ, ಮಹಾರಾಷ್ಟ್ರದಲ್ಲಿ ೪ ಪರ್ಸೆಂಟ್, ಪಂಪ್‌ಸೆಟ್ ನಮ್ಮಲ್ಲಿ ೧೦ ಪರ್ಸೆಂಟ್, ಮಹಾರಾಷ್ಟ್ರದಲ್ಲಿ ೪ ಪರ್ಸೆಂಟ್, ಕೃಷಿ ಸಾಧನಗಳು ನಮ್ಮಲ್ಲಿ ೧೩ ಪರ್ಸೆಂಟ್, ಮಹಾರಾಷ್ಟ್ರದಲ್ಲಿ ಇಲ್ಲವೇ ಇಲ್ಲ. ಇದರಿಂದ ಏನಾಗುತ್ತದೆ ಎಂದರೆ ಕರ್ನಾಟಕದವರು ಪಕ್ಕದ ಮಹಾರಾಷ್ಟ್ರಕ್ಕೆ ಹೋಗಿ ಸಾಮಾನು ಖರೀದಿ ಮಾಡುತ್ತಾರೆ. ಮದ್ರಾಸ್‌ಗೂ ನಮಗೂ ಒಂದು ಕಾರ್ ಖರೀದಿಯಲ್ಲಿ ೪ ಸಾವಿರ ವ್ಯತ್ಯಾಸವಾಗುತ್ತದೆ. ನಾನು ಮಾರುತಿ ಕಾರನ್ನು ಮದ್ರಾಸ್ ನಿಂದಲೇ ತರಿಸಿದೆ. ನಮ್ಮ ಕಡೆಯ ಡೀಲರ್ಸ್ ಮಹಾರಾಷ್ಟ್ರದಲ್ಲಿ ಗಾಡಿ ಖರೀದಿಗೆ ತೆಗೆದುಕೊಂಡು ಕರ್ನಾಟಕದಲ್ಲಿ ಡೆಲಿವರಿ ನೀಡಿ ಹೆಚ್ಚಿನ ದುಡ್ಡು ಗಳಿಸುತ್ತಿದ್ದಾರೆ. ನಾಲ್ಕು ಸಾವಿರ ರೂಪಾಯಿಗಳು ಉಳಿಯುತ್ತಗೆ ಎಂದರೆ ಯಾವ ಮನುಷ್ಯ ತಾನೆ ಬೇಡ ಎಂದು ಹೇಳುತ್ತಾನೆ. ಇವತ್ತು ಬೆಳಗಾಂನಲ್ಲಿ ಟ್ರಾಕ್ಟರನ್ನು ತೆಗೆದುಕೊಳ್ಳಬೇಕೆಂದಿರುವವರು ಗೋವಾದಲ್ಲಿ ಖರೀದಿ ಮಾಡುತ್ತಾರೆ. ಬೆಳಗಾಂನಲ್ಲಿ ಡೆಲಿವರಿಯನ್ನು ಕೊಡುತ್ತಾರೆ. ಮತ್ತೆ ಬೆಳಗಾಂನಲ್ಲಿಯೇ ರಿಜಿಸ್ಟ್ರೇಷನ್ ಆಗುತ್ತದೆ. ಯಾವ ರೀತಿಯಿಂದ ಈ ಕನ್‌ಸ್ಯೂಮರ್ಸ್‌ಗೆ ಅದರಿಂದ ಅನಾನುಕೂಲವಾಗುತ್ತದೆ ಎಂಬುದನ್ನು ನೋಡಬೇಕು. ಹೆಚ್ಚಾಗಿ ಬರೀ ಸರ್ಕಾರಿ ವಾಹನಗಳು ಮಾತ್ರ ಇಲ್ಲಿ ರಿಜಿಸ್ಟ್ರೇಷನ್ ಆಗುತ್ತದೆ. ಬೇರೆ ವಾಹನಗಳು ಇಲ್ಲಿ ಹೆಚ್ಚಾಗಿ ರಿಜಿಸ್ಟ್ರೇಷನ್ ಆಗುವುದಿಲ್ಲ. ಆದಕಾರಣ ಟ್ಯಾಕ್ಸ್ ಬಹಳ ಹೆಚ್ಚಾಗಿ ಆಗದ ಹಾಗೆ ನಮ್ಮ ನೆರೆಹೊರೆ ರಾಜ್ಯಗಳಿಗೆ ಹೊಂದಾಣಿಕೆ ಆಗುವ ರೀತಿಯಲ್ಲಿರಬೇಕು ಎಂದು ಹೇಳುತ್ತೇನೆ. ಇವತ್ತಿನ ದಿವಸ ಮಲಪ್ರಭಾ ಯೋಜನೆಯಲ್ಲಿ ಭೂಮಿಯನ್ನು ಕಳೆದುಕೊಂಡಂತಹ ರೈತರುಗಳ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿ ಕಾಡಾ ಎನ್ನತಕ್ಕಂಥ ಕಚೇರಿ ಇದೆ. ಅದು ಯಾವ ರೀತಿಯಿಂದಲೂ ಕೆಲಸ ಮಾಡುತ್ತಿಲ್ಲ ಎಂದು ಹೇಳಬೇಕಾಗಿದೆ. ಮೊನ್ನೆ ದಿವಸ ಬೆಳಗಾಂಗೆ ಮಾನ್ಯ ಮುಖ್ಯ ಮಂತ್ರಿಗಳು ಬಂದಾಗ ಜಿಲ್ಲೆಯ ಎಲ್ಲಾ ಶಾಸಕರು ಕೂಡಿಕೊಂಡು ಆ ಕಾಡಾದ ಬಗ್ಗೆ ಹೇಳಿದವು. ಅದನ್ನು ಇಂಪ್ರೂ ಮಾಡಬೇಕು ಎಂದು ಮತ್ತು ಅದು ಕೆಲಸ ಮಾಡುವ ಹಾಗೆ ಆಗಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹೇಳಿದ್ದೇವೆ. ಇವತ್ತಿನ ದಿವಸ ಕಾಡಾ ಪ್ರದೇಶದಲ್ಲಿ ಬರತಕ್ಕಂಥ ಜನರಿಗೆ ಒಂದು ರಸ್ತೆ ಇಲ್ಲ, ಕುಡಿಯುವ ನೀರು ಇಲ್ಲ, ಶಾಲೆ ಇಲ್ಲ, ಅವರಿಗೆ ಯಾವುದೇ ಅನುಕೂಲವನ್ನು ಕೊಟ್ಟಿಲ್ಲ. ಅವರುಗಳು ಹೊಲವನ್ನು ಕಳೆದುಕೊಂಡರೂ ಸಹಾ ನೀರಿಗೂ ಟ್ಯಾಕ್ಸ್ ಕೊಡಬೇಕು. ಈ ರೀತಿ ಬಹಳ ತೊಂದರೆಯಾಗಿದೆ. ಶಾಲಾ ಕಟ್ಟಡದ ಬಗ್ಗೆ ಆಯವ್ಯಯ

ಪಟ್ಟಿಯಲ್ಲಿ ಹೇಳಿದ್ದೀರಿ. ನಮ್ಮ ಬೈಲಹೊಂಗಲ ತಾಲ್ಲೂಕಿನ ಪೈಕಿ ಸಂಗೊಳ್ಳಿ ಗ್ರಾಮದಲ್ಲಿ ೧೯೭೦ರಲ್ಲಿ ಎಂಟು ಕೋಣೆಗಳಿರುವ ಒಂದು ಕನ್ನಡ ಶಾಲೆಯನ್ನು ಕಟ್ಟಲಾಗಿದೆ. ಆ ಕೋಣೆಗಳನ್ನು ಕಟ್ಟುವ ಕಾಲಕ್ಕೆ ಅದು ಕ್ರ್ಯಾಕ್ ಆಗಿ ಇವತ್ತಿನ ತನಕವು ಉಪಯೋಗ ಮಾಡಲಿಕ್ಕೆ ಆಗಿಲ್ಲ. ೧೯೭೦ನೇ ಇಸವಿಯಿಂದ ೧೯೮೦ನೇ ಇಸವಿಯವರೆಗೂ ಕೇಳಿದರೂ ಸಹಿತ ವಿಜಿಲೆನ್ಸ್ ಎನ್‌ಕ್ವೈರಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಆ ಶಾಲೆಯನ್ನು ಕೆಡವಿ ಅದೇ ಕಲ್ಲು, ಅದೇ ಕಟ್ಟಿಗೆ, ಅದೇ ಇಟ್ಟಿಗೆಯನ್ನು ಉಪಯೋಗ ಮಾಡಿಕೊಂಡು ಒಂದು ಲಕ್ಷ ರೂಪಾಯಿ ಖರ್ಚು ಮಾಡಿದರೆ ಎಂಟು ಕೋಣೆಗಳನ್ನು ಪುನ ಕಟ್ಟಬಹುದು. ಅದನ್ನು ಮಾಡಿ ಎಂದು ಹೇಳಿದರೆ ಅದರ ಕಡೆ ಯಾರೂ ಕೈ ಹಾಕುತ್ತಿಲ್ಲ. ಕೇಳಿದ ಕೂಡಲೇ ವಿಜಿಲೆನ್ಸ್ ಎಂದು ಹೇಳುತ್ತಾರೆ. ಇವತ್ತಿನ ದಿವಸ ಅಲ್ಲಿ ನ್ಯಾಷನಲ್ ವೇಸ್ಟ್ ಆಗುತ್ತದೆ. ಅಲ್ಲಿ ಏನು ಹೇಳುತ್ತಾರೆ ಎಂದರೆ ಇಪ್ಪತ್ತು ವರ್ಷ ಈ ಕಟ್ಟಡವನ್ನು ಕಟ್ಟಿ ಆಗಿದೆ, ಇಪ್ಪತ್ತು ವರ್ಷ ಆಗಿದ್ದರೂ ಇದರ ಎನ್‌ಕ್ವೈರಿ ಇನ್ನೂ ಮುಗಿಯಲಿಲ್ಲವೇ ಎಂದು ಕೇಳುತ್ತಾರೆ. ಇಪ ತ್ತು ವರ್ಷವಾದರೂ ಅಲ್ಲಿಗೆ ಒಬ್ಬ ಅಧಿಕಾರಿ ಬಂದು ನೋಡುವುದಕ್ಕೆ ತಯಾರು ಇಲ್ಲ. ಇದರ ಬಗ್ಗೆ ಮೂರು ಸಾರಿ ಅಸೆಂಬ್ಲಿಯಲ್ಲಿ ಪ್ರಶ್ನೆಯನ್ನು ಹಾಕಿದ್ದೆ. ಆದರೆ ವಿಚಾರ ಮಾಡುವುದಕ್ಕೆ ಯಾರೂ ತಯಾರು ಇಲ್ಲ ಕೇಳಿದ ಕೂಡಲೇ ಪರಿಶೀಲಿಸಲಾಗುವುದು ಎಂದು ಹೇಳುತ್ತಾರೆ. ಇಪ್ಪತ್ತು ವರ್ಷ ಆದರೂ ಕೂಡಾ ಇದನ್ನು ಪರಿಶೀಲನೆ ಮಾಡಲಿಕ್ಕೆ ಆಗಿಲ್ಲ ದಯಮಾಡಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಒಂದು ಲಕ್ಷ ರೂಪಾಯಿ ಖರ್ಚು ಮಾಡಿದರೆ ಅಲ್ಲಿನ ಊರಿನವರು ಕೂಡಾ ಎಷ್ಟೋ ಹಣವನ್ನು ಕೊಡುವುದಕ್ಕೆ ತಯಾರಿದ್ದಾರೆ, ಆ ಶಾಲೆಯನ್ನು ಕೆಡವಿ, ಅದೇ ಕಟ್ಟಿಗೆ, ಅದೇ ಕಲ್ಲು ಅದೇ ಇಟ್ಟಿಗೆಯನ್ನು ಉಪಯೋಗ ಮಾಡಿಕೊಂಡು ಮತ್ತೆ ಕಟ್ಟಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಮಸ್ಯೆ ಅದೊಂದೇ ಊರಿನಲ್ಲಿ ಆಗಿಲ್ಲ. ಅದೇ ಪ್ರಕಾರ ೧೦–೧೫ ಹಳ್ಳಿಗಳಲ್ಲಿ ಆಗಿದೆ. ಒಂಕ್ಕುಂದ ಒರಿಕೊಪ್ಪ ಮತ್ತು ಇಂಗಳಿಗೆಯಲ್ಲಿ ಕೂಡಾ ಆಗಿದೆ ಅಲ್ಲಿ ಕೂಡಾ ಕನ್‌ಸ್ಟ್ರಕ್ಷನ್ಸ್ ಚೆನ್ನಾಗಿ ಆಗಿಲ್ಲ. ಅವುಗಳನ್ನು ರಿಪೇರಿ ಮಾಡುವುದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸಿ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ನಮ್ಮ ಕಡೆ ಹಳೆಯ ವೆಹಿಕಲ್ಸ್ ಅಂದರೆ ಟ್ರ್ಯಾಕ್ಟರ್, ಜೀಪ್ ಮುಂತಾದ ಸರ್ಕಾರದ ವಾಹನಗಳು ಇಪ್ಪತ್ತು ವರ್ಷದಿಂದ ಮಾರಾಟ ಮಾಡದೇ ಹಾಗೆ ನಿಂತಿವೆ. ಅದನ್ನು ಕೇಳಿದ ಕೂಡಲೇ ಏನು ಹೇಳುತ್ತಾರೆಂದರೆ ಚೀಫ್ ಇಂಜಿನಿಯರ್ ಬಂದಿಲ್ಲ ಎಂದು ಹೇಳುತ್ತಾರೆ ನಮ್ಮ ಸರ್ಕಾರದಲ್ಲಿ ಎಷ್ಟು ಮಂದಿ ಚೀಫ್ ಇಂಜಿನಿಯರ್‌ಗಳಿದ್ದಾರೆ? ನನಗಂತೂ ಗೊತ್ತಿಲ್ಲ. ಒಂದು ಹಳೆಯ ಗಾಡಿಯನ್ನು ಮಾರುವುದಕ್ಕೂ ಒಬ್ಬ ಚೀಫ್ ಇಂಜಿನಿಯರ್, ಒಂದು ಹೊಸ ಗಾಡಿಯನ್ನು ತೆಗೆದುಕೊಳ್ಳಬೇಕಾದರೂ ಒಬ್ಬ ಚೀಫ್ ಇಂಜಿನಿಯರ್, ಈ ರೀತಿ ನಮ್ಮ ಪರಿಸ್ಥಿತಿ ಇದೆ ನೋಡಿ. ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್‌ನಲ್ಲಿ ಹಳೇ ಗಾಡಿ ಮಾರಬೇಕಾದರೂ ಒಬ್ಬ ಚೀಫ್ ಇಂಜಿನಿಯರ್ ಬೇಕು, ಒಂದು ಹೊಸ ಗಾಡಿಯನ್ನು ತೆಗೆದುಕೊಳ್ಳಬೇಕಾದರೂ ಕೂಡಾ ಚೀಫ್ ಇಂಜಿನಿಯರ್ ಬೇಕು ಎನ್ನುವ ಪರಿಸ್ಥಿತಿಯುಂಟಾಗಿದೆ ನಿಜವಾಗಿ ಮಲಪ್ರಭ ಪ್ರಾಜೆಕ್ಟನ್ನು ನೋಡಿ. ಅಲ್ಲಿನ ಪಿ.ಹೆಚ್.ಇ. ಕಚೇರಿಗಳನ್ನು ನೋಡಿದರೆ, ಅಲ್ಲಿ ಸಹ ಗಾಡಿಗಳು ನಿಂತಿವೆ. ಅವನ್ನು ಮಾರಿದರೆ ನಿಮಗೆ ರೊಕ್ಕ ಬರುತ್ತದೆ. ದಯಮಾಡಿ ಸರ್ಕಾರಕ್ಕೆ ಕೆಟ್ಟ ಹೆಸರು ಬರದ ಹಾಗೆ ಈ ಗಾಡಿಗಳನ್ನು ಮಾರಾಟ ಮಾಡಿ, ಆದಷ್ಟು ಬೇಗನೆ ಈ ಕೆಲಸವನ್ನು ಮಾಡುತ್ತಾರೆಂದು ನಾನು ಆಶಿಸುತ್ತೇನೆ. ನಮ್ಮ ಮಲಪ್ರಭದಲ್ಲಿ ಎಷ್ಟೊ ಬುಲ್ಡೋಜರ್, ಟ್ರಕ್ಸ್ ಹಾಗೆ ನಿಂತಿವೆ. ೧೯೭೦ರ ಇಸವಿಯ ವಾಹನಗಳು ಹಳೆಯ ಗಾಡಿ ಟ್ರಕ್ಸ್, ಜೀಪ್‌ಗಳು ಐದು ಕಿಲೋ ಮೀಟರ್ ಮಾತ್ರ ಹೋಗುತ್ತವೆ. ಇವತ್ತಿನ ದಿವಸ ಪೆಟ್ರೋಲ್ ಹತ್ತೊವರೆ ರೂಪಾಯಿ ಇದ್ದಾಗ ಐದು ಕಿಲೋ ಮೀಟರ್ ಹೋಗುವಂಥ ವಾಹನಗಳನ್ನು ಇಟ್ಟುಕೊಂಡಿದ್ದೀರಲ್ಲಾ, ಅದನ್ನು ಸ್ಕ್ರ್ಯಾಪ್ ಮಾಡಿ ಎಂದು ಇಂಜಿನಿಯರ್ ರವರಿಗೆ ಹೇಳಿದರೆ, ಇದನ್ನು ಸ್ಕ್ರ್ಯಾಪ್‌ಗೆ ಏತಕ್ಕೆ ಬರೆಯಬಾರದು ಎಂದು ಕೇಳಿದರೆ, ಸ್ಕ್ರ್ಯಾಪ್‌ಗೆ ಬರೆದರೆ ಹೊಸ ಗಾಡಿ ತೆಗೆದುಕೊಳ್ಳಬಾರದೆಂದು ಸರ್ಕಾರದ ಆಜ್ಞೆ ಇದೆ, ಏನು ಮಾಡುವುದು ಎಂದು ಹೇಳುತ್ತಾರೆ. ಸರ್ಕಾರದವರು ರೊಕ್ಕ ಕೊಡುತ್ತಾರೆ. ಪೆಟ್ರೋಲನ್ನು ಕೊಡುತ್ತಾರೆ, ನಾವು ಉಪಯೋಗ ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ದಯಮಾಡಿ ಇಂಥ ಹಳೆಯ ಗಾಡಿಗಳನ್ನು ಮಾರಾಟ ಮಾಡಲಿಕೆ ಪರವಾನಿಗೆ ಮಾಡಬೇಕು ಎಂದು ಹೇಳಿ ಇರುವ ವಾಹನಗಳನ್ನು ಡೀಸಲ್‌ಗೆ ಅವುಗಳನ್ನು ಪರಿವರ್ತನೆ ಮಾಡಿಕೊಡಬೇಕು ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಇನ್ನು ಮಹಾರಾಷ್ಟ್ರದಲ್ಲಿ ಪ್ರತಿ ಶಾಸಕರಿಗೂ ಟೈಪಿಸ್ಟ್ ಕೊಟ್ಟಿದ್ದಾರೆ ತಮ್ಮ ಕೆಲಸ ಮಾಡಿಸಬೇಕಾದರೆ ಮಂತ್ರಿಗಳಿಗೆ ೫ ಮಂದಿ ಪಿ ಎ ಗಳು, ಟೈಪಿಸ್ಟ್‌ಗಳು ಇತ್ಯಾದಿ ಇರುತ್ತಾರೆ. ಆದರೆ ಶಾಸಕರು ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಟೈಪಿಸ್ಟ್ ಇಲ್ಲದಿದ್ದರೆ ಕಷ್ಟವಾಗುತ್ತದೆ. ಇವೊತ್ತಿನ ದಿವಸ

ಆಂಧ್ರದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಪ್ರತಿಯೊಬ್ಬ ಟೈಪಿಸ್ಟ್‌ಗಳು ಬಿ.ಡಿ.ಓ ಆಫೀಸಿಗೆ ಅಟ್ಯಾಚ್ ಆಗಿರುತ್ತಾರೆ ಮಹಾರಾಷ್ಟ್ರದಲ್ಲಿ ಇರುವಂತೆ ಶಾಸಕರಿಗೆ ಟೈಪಿಸ್ಟ್ ಕಮ್ ಪಿ.ಎ ಅಥವಾ ಕೊನೆಯ ಪಕ್ಷ ಒಬ್ಬ ಟೈಪಿಸ್ಟ್ ಅನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ರಮಾನಾಥ್ ರೈ.— ಹೆಣ್ಣು ಮಕ್ಕಳು ಟೈಪಿಸ್ಟ್‌ಗಳು ಆಗುವಂತಹ ಪರಿಸ್ಥಿತಿ ಆಗಬಾರದು

ಶ್ರೀ ಎಸ್.ಹೆಚ್. ಕೌಜಲಗಿ.— ಬಿ ಡಿ ಓ ಆಫೀಸಿನಲ್ಲಿ ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳು ಇದ್ದಾರೆ. ನಮಗೂ ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳನ್ನು ಅಥವಾ ಟೈಪಿಸ್ಟ್ ಅನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹೋದ ಸಲ ನಾನು ಸೆಷನ್‌ನಲ್ಲಿ ಹೇಳಿದ್ದೆ ಏನೆಂದರೆ, ಬೈಲಹೊಂಗಲ ಹಾಗೂ ಸವದತ್ತಿಯಲ್ಲಿ ಹತ್ತಿ ಖರೀದಿ ಮಾಡಲಿಕ್ಕೆ ಅನುಕೂಲ ಇಲ್ಲದೆ ಜನರಿಗೆ, ಬಹಳ ತೊಂದರೆ ಆಗುತ್ತಿದೆ. ಆದ್ದರಿಂದ ಸಿ. ಸಿ. ಆಫೀಸ್ ಅನ್ನು ಬಾಂಬೆಯಿಂದ ಹುಬ್ಬಳ್ಳಿಗೆ ವರ್ಗ ಮಾಡಬೇಕು. ಇದರಿಂದ ಜನಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದೇನೆ. ಬಾಂಬೆಯಲ್ಲಿರತಕ್ಕ ಆಫೀಸ್ ಅನ್ನು ಹುಬ್ಬಳ್ಳಿಗೆ ವರ್ಗ ಮಾಡುವುದಕ್ಕೆ ತಾವು ಶಿಫಾರಸ್ಸು ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಸಿ.ಸಿ. ಆಫೀಸ್‌ನಲ್ಲಿ ಹತ್ತಿ ಖರೀದಿ ಮಾಡಲಿಕ್ಕೆ ಆಲ್ ಇಂಡಿಯಾದ ಒಂದು ಕೋಟಾ ಇರುತ್ತದೆ. ಕೋಟಾ ಮುಗಿದ ನಂತರ ಅವರು ಹತ್ತಿಯನ್ನು ತೆಗೆದುಕೊಳ್ಳುವುದಿಲ್ಲ. ಬಾಂಬೆಯಲ್ಲಿ ಸಿ. ಸಿ. ಆಫೀಸ್ ಇರುವುದರಿಂದ ಅವರು ಗುಜರಾತ್ ಹಾಗೂ ಆಂಧ್ರದ ಹತ್ತಿಯನ್ನು ತೆಗೆದುಕೊಳ್ಳುತ್ತಾರೆಯೇ ವಿನಹ ಕರ್ನಾಟಕದ ಹತ್ತಿಯನ್ನು ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ದಯಮಾಡಿ ಬಾಂಬೆಯಿಂದ ಈ ಆಫೀಸ್ ಅನ್ನು ವರ್ಗ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಏಕೆಂದರೆ ಹತ್ತಿ ಹೆಚ್ಚಿಗೆ ಬೆಳೆಯುವುದು ಹುಬ್ಬಳ್ಳಿ ಹಾಗೂ ಅದರ ಸುತ್ತಮುತ್ತಲು ಪ್ರದೇಶದಲ್ಲಿ. ಕೊನೆಯದಾಗಿ ಇವೊತ್ತಿನ ದಿವಸ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್ ಎಂದು ರಚಿಸಿದ್ದೀರಿ ಅದೇ ಪ್ರಕಾರ ಉತ್ತರ ಕರ್ನಾಟಕದ ಪ್ರದೇಶ ಸಹ ಬಹಳ ಹಿಂದುಳಿದಿದೆ. ಮಹಾರಾಷ್ಟ್ರದಲ್ಲಿ ಉತ್ತರ ಕರ್ನಾಟಕದ ಭಾಗ ಇದ್ದಾಗ ಸಹಿತ ಸಾಕಷ್ಟು ಅಭಿವೃದ್ಧಿ ಆಗಿಲ್ಲ. ಬೆಳಗಾಂ ಜಿಲ್ಲೆ ಹಾಗೂ ಉತ್ತರ ಕರ್ನಾಟಕ ಪ್ರದೇಶದ ಪ್ರತಿಯೊಂದು ಜಿಲ್ಲೆಯೂ ಸಹ ಹಿಂದೆಯೂ ಸಾಕಷ್ಟು ಅಭಿವೃದ್ಧಿ ಆಗಿಲ್ಲ. ಹೊಸ ಮೈಸೂರು ರಚನೆ ಆದ ನಂತರವೂ ಅಭಿವೃದ್ಧಿ ಆಗಲಿಲ್ಲ. ಆದ್ದರಿಂದ ಆ ಭಾಗದ ಅಭಿವೃದ್ಧಿಗೆ ಪ್ರತಿ ವರ್ಷದ ಬಜೆಟ್‌ನಲ್ಲಿ ಎಷ್ಟು ರೊಕ್ಕವನ್ನು ಕೊಡುತ್ತೀರೋ ಅಷ್ಟು ರೊಕ್ಕವನ್ನು ಖರ್ಚು ಮಾಡುವ ಹಾಗೆ ನೋಡಿಕೊಳ್ಳಬೇಕು. ಪಿ ಡಬ್ಲ್ಯು. ಡಿ. ರೋಡ್ ಸಲುವಾಗಿ ಆಗಲಿ, ಕಟ್ಟಡದ ಸಲುವಾಗಿ ಆಗಲಿ ಬಜೆಟ್‌ನಲ್ಲಿ ಇಟ್ಟ ಹಣ ಪೂರ್ತಿ ಖರ್ಚು ಆಗಿಲ್ಲ. ಪೂರ್ತಿ ಹಣ ಹಾಗೆಯೇ ಉಳಿದು ಮುಂದಿನ ವರ್ಷಕ್ಕೂ ಹೋಗುತ್ತಿದೆ ಟೂರಿಸಂ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ ಟೂರಿಸಂ ಅಭಿವೃದ್ಧಿ ಬೆಂಗಳೂರು ಹಾಗೂ ಮೈಸೂರಿಗೆ ಮಾತ್ರ ಸೀಮಿತವಾಗಿದೆ ಎಂದು ಕಾಣುತ್ತವೆ. ಉತ್ತರ ಕರ್ನಾಟಕಕ್ಕೆ ಇಲ್ಲವೆಂದು ನಾವು ಹೇಳಬಹುದು. ಉತ್ತರ ಕರ್ನಾಟಕದಲ್ಲಿ ಸಹ ಸಾಕಷ್ಟು ಪ್ರೇಕ್ಷಣೀಯ ಸ್ಥಳಗಳಿವೆ. ಇಷ್ಟಾದರೂ ಸಹಿತ ಟೂರಿಸಂ ಡಿಪಾರ್ಟ್‌ಮೆಂಟ್ ಆ ಭಾಗವನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಈ ದಿಶೆಯಲ್ಲಿ ಉತ್ತರ ಕರ್ನಾಟಕದ ಕಡೆಗೂ ಗಮನ ಹರಿಸಬೇಕೆಂದು ಹೇಳುತ್ತೇನೆ ಇಷ್ಟು ಹೇಳಿ ಸನ್ಮಾನ್ಯ ಸಭಾಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಚೇರ್‌ಮನ್.— ಈಗ ಸಭೆಯು ಮುಕ್ತಾಯಗೊಂಡು ನಾಳೆ ಪುನಃ ೧೧ ಗಂಟೆಗೆ ಸೇರುವುದು.

(ಸದನವು ೫–೫೫ ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ ೨೧–೩–೧೯೬೦ ರಂದು ಬೆಳಿಗ್ಗೆ ೧೧–೦೦ ಗಂಟೆಗೆ ಸೇರಲು ನಿಶ್ಚಯಿಸಿತು)